ಜೂನ್ : ೧೯೭೯

ಬಸವ ಶಕೆ : ೮೭೩

ಸಂಪುಟ :

ಸಂಚಿಕೆ : ೨

ಕಲ್ಯಾಣ ಕಿರಣ



Digitalized by e-Sahithya Documentation Forum
Sponsored by Sarayu Foundation Trust

ಕ ಲ್ಯಾ ಣ ಕಿ ರ ಣ

ಮಾ ಸ ಪ ತ್ರಿ ಕೆ

ಈ ಬೆಳಕಿನಲ್ಲಿ ಸುಳಿದಾಡಿದಾಗ ?

ಮುಖ ಪುಟದ ಚಿತ್ರ : ಸರಳತೆಯ ಸಾಕಾರ ಡಾ॥ ಲಲಿತಮ್ಮ ಗುರುಬಸವಯ್ಯ

ಹಿಂಬದಿ ಹೊದಿಕೆ : ಜಯಪುರದ ಅರಮನೆ 'ಹವಾ ಮಹಲ್'

ಕಲ್ಯಾಣ ಕಿರಣ

ಸಂಪುಟ ೫ ಜೂನ್ ೧೯೭೯ ಸಂಚಿಕೆ : ೨

ನುಡಿನೈವೇದ್ಯ

ನಿತ್ಯ ಪ್ರಾರ್ಥನೆ

ಹೇ ಪರಮಾತ್ಮ ಲೋಕದ ಮಿತ್ರ
ನೀನೇ ಸರ್ವಕು ಕಾರಣ ಕರ್ತ ॥ಪ॥
ವಿಘ್ನನಿವಾರಕ ನೀನೇ ಬುದ್ಧಿಪ್ರದಾಯಕ ನೀನೆ
ವಿದ್ಯಾಸಂಪದ ಶಾಂತಿಸೌಖ್ಯಗಳ ಮಹಾದಾತನು ನೀನೆ ॥ಅ. ಪ॥

ಜಗವನು ರಚಿಸಿದ ತಂದೆಯು ನೀನು
ಸೊಗದಿಂ ಪಾಲಿಪ ತಾಯಿಯು ನೀನು
ದುರಿತ ಸಂಕುಲ ಮುಸುಕುತ ಬರಲು
ಪಾರು ಮಾಡುವ ಕರುಣಿಯು ನೀನು ॥೧॥

ಮರೆವಿನ ತಿಮಿರದಿ ಮನವು ಬಳಲುತ
ಮುಂದಡಿ ಇಡದೆಯೆ ನಲುಗುತಿರೆ
ಅರಿವಿನ ಬೆಳಕನು ಪಥದಲಿ ಚೆಲ್ಲುತ
ಮಾರ್ಗವ ತೋರುವ ಗುರು ನೀನೆ ॥೨॥

ಅಂದಿನ ಅನ್ನವ ನೀಡುವ ನೀನು
ಬಂಧನ ಹರಿಸುವ ಜ್ಞಾನದ ಸಿಂಧು
ಬಾಳಲಿ ನಡೆಯಲು ಆತುಮ ಬಲವ
ನೀಡುವ ಮಂಗಲ ಶಕ್ತಿಯು ನೀನು ॥೩॥

ನಿನ್ನನಲ್ಲದೆ ಯಾರನು ಬೇಡೆನು
ಬನ್ನವ ಕಳೆಯುವ ಭವಹರನೆ
ಎನ್ನಯ ಜೀವನ ಸರ್ವಸಂಪದದಿ
ಬೆಳಗಲು ಕರುಣಿಸು ಹೇ ದೇವಾ ॥೪॥

Digitalized by e-Sahithya Documentation Forum
Sponsored by Sarayu Foundation Trust



ಶ್ರೀ ಬಸವೇಶ್ವರ ವಿಶ್ವವಿದ್ಯಾನಿಲಯ

ಶರಣರಿಂದ ಮೆಟ್ಟಲ್ಪಟ್ಟ ಧರೆಯಾಗಿ, ಅದರಿಂದಲೇ ಕೀರ್ತಿವಿಶೇಷಿತವಾಗಿ ಇರುವ ಹೈದ್ರಾಬಾದ್ ಕರ್ನಾಟಕ, ಈ ಹೈಬ್ರಿಡ್ ಪದ ಅಸಹ್ಯವೆನಿಸಿದರೆ, ಸೂಕ್ತವಾಗಿ ಕರೆಯಲ್ಪಡಬಹುದಾದ **ಶರಣ ನಾಡು** ಕನ್ನಡ ನೆಲಕ್ಕೆ ಸತ್ವವನ್ನು, ಕನ್ನಡ ನುಡಿಗೆ ತತ್ತ್ವವನ್ನು ಪೂರೈಸಿ ಕನ್ನಡ ವಾಗ್ದೇವಿಯನ್ನು ವಿಶ್ವಮಟ್ಟಕ್ಕೆ ಏರಿಸಿದ ನಾಡು. ವಚನ ಸಾಹಿತ್ಯ ನಿರ್ಮಾಪಕ, ಜಗತ್ತಿನ ಮೊಟ್ಟಮೊದಲ ಸಮತಾವಾದಿ, ಸ್ತ್ರೀ ಸಮಾನತಾವಾದಿ ವಿಶ್ವವಿಭೂತಿ ಬಸವಣ್ಣನವರ ಕ್ರಾಂತಿಯ ಬೀಜಗಳಿಗೆ ಕ್ಷೇತ್ರವಾದ ನಾಡು. ಹುಟ್ಟಿದ್ದು ಬಿಜಾಪುರ ಜಿಲ್ಲೆಯ ಬಾಗೇವಾಡಿಯಾದರೂ, ನೆಲೆ ನಿಂತು ತತ್ತ್ವಗಳ ಬೀಜಗಳನ್ನು ಬಸವಣ್ಣನವರು ಬಿತ್ತಿದ್ದು ಈ ನೆಲದಲ್ಲೇ. ಕಲಬುರ್ಗಿ, ಬೀದರ, ರಾಯಚೂರು ಈ ವಲಯವು ಶರಣ ತತ್ತ್ವದ ಕಹಳೆ ಮೊಳಗಿದ ಬೀಡು.

ಇಂದಿನ ಆವಶ್ಯಕತೆ, ಬೆಳೆಯುವ ನಗರಗಳು, ವರ್ಧಿಸುವ ಜನಸಂಖ್ಯೆ, ಹೆಚ್ಚುತ್ತಿರುವ ವಿದ್ಯಾಕಾಂಕ್ಷಿಗಳ ಹಿನ್ನೆಲೆಯಲ್ಲಿ ಶರಣ ನಾಡಿಗೆ ಒಂದು ವಿಶ್ವವಿದ್ಯಾಲಯ ಬೇಕೇ ಬೇಕು. ಅದಕ್ಕೆ ಯಾವ ಹೆಸರನ್ನು ಇಡಬೇಕೆಂದು ಪ್ರಶ್ನೆ ಎದ್ದಾಗ ಬಹುಪಾಲು ಜನರು ಬಸವೇಶ್ವರರ ಹೆಸರನ್ನು ಸೂಚಿಸಿದರು. ಇದು ಅತ್ಯಂತ ಸಮರ್ಥನೀಯ, ಆದ್ಯ ಸೂಚನೆ. ಆದರೆ ಇದಕ್ಕೆ ಒಂದು ಜಾತಿಯ ಬಣ್ಣವನ್ನು ಕೊಟ್ಟು ವಿರೋಧಿಸುವ ಅನೇಕ ಬಣಗಳು ಹುಟ್ಟಿ, ವಿರೋಧವನ್ನು ವ್ಯಕ್ತಪಡಿಸಿರುವವು. ಈ ವಿರೋಧ ಎಷ್ಟರಮಟ್ಟಿಗೆ ಸಮಂಜಸವಾಗಿದೆ ?

ಕ್ರಾಂತಿಪುರುಷ ಬಸವಣ್ಣನವರ ತತ್ತ್ವಗಳು [illegible] ಸಂಪ್ರದಾಯದ ವ್ಯಕ್ತಿ ವನ್ನು ಅಲುಗಿಸಿ, ಜಾತಿವಾದದ ಕೋಟೆಗೆ ಸಿಡಿಮದ್ದು ಹಾರಿಸಿದ್ದರಿಂದ ತಮ್ಮ

Digitalized by e-Sahithya Documentation Forum
Sponsored by Sarayu Foundation Trust

ಹೋರಾದಿದಕ್ಕಾಗಿ ಕೆಲವು ಪಟ್ಟಭದ್ರ [illegible] ಸ್ವಾಭಾವಿಕ. ಇದು ಹಗಲಿನಲ್ಲಿ ಹೊಳೆಯುವ ಸೂರ್ಯನಷ್ಟು ಸ್ಪಷ್ಟವಾದ್ದರಿಂದ ಇದರ ಬಗ್ಗೆ ಕಾರಣಗಳನ್ನು ಹುಡುಕಬೇಕಿಲ್ಲ. ಆದರೆ ದಲಿತವರ್ಗದವರು, ಹರಿಜನರು, ಶೂದ್ರರು, ಕಾರ್ಮಿಕ ವರ್ಗದವರು ಮುಂತಾದವರು ವಿರೋಧಿಸಿದರೆ ಅದು ತುಂಬಾ ಆಶ್ಚರ್ಯ ಸಂಗತಿಯಷ್ಟೇ ಅಲ್ಲ, ಜಗತ್ತಿನ ಅದ್ಭುತಗಳಲ್ಲೊಂದಾದೀತು. ಬಸವಣ್ಣನವರ ಹೋರಾಟವೆಲ್ಲ ಸೀಮಿತವಾಗಿದ್ದುದು ದಲಿತ ಉದ್ಧಾರ, ಅಸ್ಪೃಶ್ಯತಾ ನಿರ್ಮೂಲನ ಎಂಬ ಕೇಂದ್ರಬಿಂದುವಿನ ಸುತ್ತ. ಒಂದು ವೇಳೆ ಧಾರ್ಮಿಕ ರಂಗದಲ್ಲಿ ಪರಮೋಚ್ಚ ಸ್ಥಾನವಾದ "ಮಂತ್ರ ಪುರುಷ"ತ್ವವನ್ನು ಪಡೆದ ಈ ಮಹಾನುಭಾವರು, ಸಂಪ್ರದಾಯ ವಿರೋಧಿಯಾದ ಅಸ್ಪೃಶ್ಯತಾ ವಿರೋಧ ಚಳುವಳಿ, ಸ್ತ್ರೀ ಸಮಾನತೆ, ಧಾರ್ಮಿಕ ಸಮಾನತೆಗಳಿಗಾಗಿ ಆಂದೋಳನವನ್ನು ಹಮ್ಮಿಕೊಳ್ಳದೆ, ಸಂಸ್ಕೃತದಲ್ಲಿಯೇ ಸಾಹಿತ್ಯ ರಚಿಸಿ, ಬ್ರಾಹ್ಮಣ್ಯಕ್ಕಾಗಿ ಹೋರಾಡಿದ್ದರೆ, ಹೋರಾಡದಿದ್ದರೂ ಅಲ್ಲೇ ಇದ್ದು ಪ್ರಚಾರ ಕೈಗೊಂಡಿದ್ದರೆ ಆ ಪರಂಪರೆಯ ಅನುಯಾಯಿಗಳು ಇಷ್ಟು ಹೊತ್ತಿಗೆ ವಿಶ್ವಮಾನ್ಯ ವ್ಯಕ್ತಿಯನ್ನಾಗಿ ಬಸವಣ್ಣನವರನ್ನು ಮಾಡದೆ ಬಿಡುತ್ತಿರಲಿಲ್ಲ. ಹುಟ್ಟುತ್ತಲೇ ಜಾತಿ ಪದ್ಧತಿಯ ಸಮಾಜ ವ್ಯವಸ್ಥೆಯಿಂದ ತಾನು ಪಡೆದ ಸವಲತ್ತುಗಳು, ಹಕ್ಕು ಬಾಧ್ಯತೆಗಳು ಎಲ್ಲರಿಗೂ ಸಿಗುವಂತಾಗಬೇಕು, ಹಲವರನ್ನು ಅನೇಕ ಸುಖಗಳಿಂದ ವಂಚಿಸಿ ಕೆಲವರಷ್ಟೇ ಉಣ್ಣುವುದು ಮನುಷ್ಯತ್ವಕ್ಕೆ ಮಾಡುವ ಅಪರಾಧ ಎಂದು ಹೋರಾಡಿದ ಬಸವಣ್ಣನವರನ್ನು ದಲಿತರು, ಅಸ್ಪೃಶ್ಯರು ಇಂದು ಎಷ್ಟರಮಟ್ಟಿಗೆ ಅರಿತು ಕೊಂಡಿದ್ದಾರೆ ?

ಸಂವಿಧಾನ ಪಿತಾಮಹ ಡಾ॥ ಅಂಬೇಡ್ಕರರು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದಕ್ಕಿಂತಲೂ ಹೆಚ್ಚಿನ ಮಹತ್ವಪೂರ್ಣ ಬಸವಣ್ಣನವರ ಹೋರಾಟ. ಅತ್ಯಂತ ಬಡತನದಲ್ಲಿದ್ದು ಕಷ್ಟಪಟ್ಟು, ಈ ಬಡತನದ ವಿಷವಲಯದಿಂದ ಪಾರಾಗಬೇಕೆಂದು ಹೋರಾಡುವುದು ಸ್ತುತ್ಯಾರ್ಹವೇ. ಆದರೆ ಬಡತನದ ಕಷ್ಟವೇ ಸೋಂಕದೆ, ಸಿರಿವಂತಿಕೆಯ ಸುಪ್ಪತ್ತಿಗೆಯಲ್ಲಿ ನಲಿದಾಡುವ ಓರ್ವ ವ್ಯಕ್ತಿ (ಉದಾ. ಗಾಂಧೀಜಿ) ಇದ್ದಕ್ಕಿದ್ದಂತೆಯೇ ಬಡತನದ ಕರಾಳತೆಯನ್ನರಿತು, ಸರಳ ವಸ್ತ್ರವನ್ನುಟ್ಟು "ಸಮಸ್ತ ಭಾರತದ ಬಡತನ ಹರಿವ ತನಕ ತಾನು ಇದೇ ವೇಷದಲ್ಲಿರುತ್ತೇನೆ" ಎಂದು ಪಣ ತೊಟ್ಟು ಹೋರಾಡಿದಾಗ ಆ ಹೋರಾಟ ಹೆಚ್ಚು ಅರ್ಥಗರ್ಭಿತ. ಡಾ॥ ಅಂಬೇಡ್ಕರರು ಜ್ಞಾನ-ಬುದ್ಧಿ, ಆಚಾರ-ಅರಿವು ಎಲ್ಲದರಲ್ಲಿಯೂ ಬ್ರಾಹ್ಮಣೋತ್ತಮರು. ಆದರೆ ಜಾತಿಪದ್ಧತಿಯ ಕ್ರೂರ ವ್ಯವಸ್ಥೆಯಿಂದಾಗಿ ನೊಂದವರು, ನಲುಗಿದವರು. ಪ್ರತಿಭಟನೆ ಕೈಗೊಂಡು ಆಂದೋಲವನ್ನಾರಂಭಿಸಿ

ದವರು. ಬಸವಣ್ಣನವರಿಗೆ ಈ ಕಟು ಅನುಭವ ಸ್ವತಃ ಆಗಲಿಲ್ಲ. ಆದರೆ ನೊಂದ ಎದೆಗಳ ಪಿಸುದನಿ ಹೃದಯಕ್ಕೆ ವೇದ್ಯವಾಯಿತು.

ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ
ಆಕಳ ಹಾಲನೆರೆದು, ಜೇನು ತುಪ್ಪವ ಹೊಯ್ದಡೆ
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?

ಎಂದು ಖಂಡತುಂಡವಾಗಿ ನುಡಿದರು.

ಬಿತ್ತುವ ಬೀಜ ಅತ್ಯಂತ ಮುಖ್ಯ. ಆನಂತರ ಸಿಹಿನೀರೇ ಹಾಕಲಿ, ಮಜ್ಜಿಗೆಯನ್ನೇ ಎರೆಯಲಿ, ಕೊಚ್ಚೆಯ ನೀರನ್ನೇ ಹರಿಸಲಿ! ಕಹಿ ಬೀಜ ಬಿತ್ತಿ ಆನಂತರ ಅದಕ್ಕೆ ಸಕ್ಕರೆ, ಜೇನುತುಪ್ಪದ ನೀರೆರೆದರೆ ಸಿಹಿ ಆದೀತೆ ? ಹಾಗೆಯೇ ಸಮಾಜ ವಿಭಜನೆಯನ್ನು ಜಾತಿಪದ್ಧತಿಯ ಆಧಾರದ ಮೇಲೆ ಮಾಡಿ, ಬಳಿಕ ಭಾವೈಕ್ಯತೆ, ಸಮಾನತೆ, ಗುಣಪ್ರಧಾನ, ಕರ್ಮಪ್ರಧಾನ ವ್ಯವಸ್ಥೆ, ಅಸ್ಪೃಶ್ಯೋದ್ಧಾರದ ಮಾತನಾಡಿದರೆ ಆದೀತೆ? ಎಂಬ ಕಟುಸತ್ಯವನ್ನು ಬಸವಣ್ಣನವರು ಮನಗಂಡರು. ಸ್ವಯಂ ವೀಕ್ಷಣೆ (Self Introspection) ಮಾಡಿಕೊಂಡು ಅರ್ಥರಹಿತ ಜಾತಿ ವ್ಯವಸ್ಥೆಗೆ ಶಸ್ತ್ರ ಚಿಕಿತ್ಸೆ (Surgery) ಮಾಡಲು ಯತ್ನಿಸಿದರು. ಸಮಾಜಕ್ಕೆ ಮುಂದಿಗೆಯನ್ನು (ಸವಾಲು) ಹಾಕಿದರು. "ಶತಶತಮಾನಗಳಿಂದ ಯಾರನ್ನು ಕಸದಂತೆ ಕಂಡು ತಿರಸ್ಕರಿಸಿದ್ದರೋ, ಅವರಿಂದಲೇ ಮಹಾಮಹಿಮರನ್ನು ರೂಪಿಸುವೆ" ಎಂದು ಶರಣ ಸಂತತಿಯನ್ನೇ ಸೃಷ್ಟಿಸಿದರು. ತುಳಿಯಲ್ಪಟ್ಟವರ ಪರವಾಗಿ ಹೋರಾಡಿದರು.

ಚೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು,
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲ ಸಂಗಮದೇವ ಸಾಕ್ಷಿಯಾಗಿ.

ಈ ವಚನದಲ್ಲಿ Human rights, ಮನುಷ್ಯನ ಹಕ್ಕುಬಾಧ್ಯತೆಗಳಿಗಾಗಿ ಹೋರಾಟವನ್ನು ಕಾಣುತ್ತೇವೆ.

ವರ್ಣಾಶ್ರಮ ಸಮಾಜ ವ್ಯವಸ್ಥೆಯಲ್ಲಿ ಅತ್ಯಂತ ನಿಕೃಷ್ಟವೆಂದು ಕಾಣಲ್ಪಟ್ಟ ಮಾದಾರ ಚೆನ್ನಯ್ಯನ ಮನೆಯಲ್ಲಿ ಊಳಿಗ ಮಾಡುವ ದಾಸಿಯ ಮಗ ಮತ್ತು ಡೋಹಾರ ಕಕ್ಕಯ್ಯನ ಮನೆಯಲ್ಲಿ ಕಸ ಮುಸುರೆ ಬಳಿಯುವ ದಾಸಿಯ ಮಗಳು

ಒಂದಾನೊಂದು ದಿನ ಕಟ್ಟಿಗೆ-ಬೆರಣಿ ಆಯಲು ಹೋದಾಗ ಸಂಗವ ಮಾಡಿದರೆಂದು ಇಟ್ಟುಕೊಳ್ಳುವ. ಧಾರ್ಮಿಕ-ಸಾಮಾಜಿಕ ಕಟ್ಟುಕಟ್ಟಳೆಗಳಿಗೆ ಅನುಗುಣವಾಗಿ ಏನೂ ಮದುವೆಯಾಗಿಲ್ಲ. ನೀತಿಬಾಹಿರ ವ್ಯವಹಾರದಿಂದಲೇ ಒಂದು ಕೂಸು ಜನ್ಮಿಸೀತು. ಆಗ ಅದಕ್ಕೆ ಉಳಿದ 'ಮಡಿವಂತ' ಮಕ್ಕಳಿಗೆ ಸಿಕ್ಕುವ ಸೌಲಭ್ಯಗಳು ಸಿಗಬೇಕೋ ? ಅಥವಾ ಸಮಾಜವು ಬಹಿಷ್ಕಾರ ಹಾಕಬೇಕೋ ? ಇಂಥ ಮಾನವೀಯ, ಮೂಲಭೂತ ಹಕ್ಕಿನ ಸಮಸ್ಯೆಗೆ ಬಸವಣ್ಣನವರು ದಿಟ್ಟ, ಧೀರ, ನೇರ ಉತ್ತರವನ್ನೇ ಕೊಟ್ಟಿದ್ದಾರೆ. ಕೂಡಲ ಸಂಗಮದೇವರ ಸಾಕ್ಷಿಯಾಗಿ ನುಡಿಯುತ್ತಾರೆ: "ಕಮ್ಮೆಕುಲದ ಬ್ರಾಹ್ಮಣೋತ್ತಮ ಮಾದರಸ-ಮಾದಲಾಂಬಿಕೆಯರ ಮಗ ಬಸವಣ್ಣನವರಿಗೆ ಸಿಕ್ಕ ಸೌಲಭ್ಯ, ಎಲ್ಲ ಮಕ್ಕಳಿಗೆ ಸಿಗಬೇಕು." ಹೀಗೆ ಬಸವಣ್ಣನವರು ಕೇವಲ ಧಾರ್ಮಿಕ, ಸಾಮಾಜಿಕ ಸಮಾನತೆಗಾಗಿ ಮಾತ್ರವಲ್ಲ ಮೂಲಭೂತ ಹಕ್ಕುಗಳಿಗೆ ಹೋರಾಡಿದ್ದಾರೆ. ಅತ್ಯಂತ ನಿಕೃಷ್ಟ ಶಬ್ದಗಳಿಂದ ಕರೆಯುತ್ತಿದ್ದ ಜನಾಂಗವನ್ನು 'ಅಪ್ಪ, ಬೊಪ್ಪ' ಎಂದು ಅಪ್ಪಿಕೊಂಡರು, ಇಂಬಿಟ್ಟುಕೊಂಡರು. ಇಂಥ ಕ್ರಾಂತಿಪುರುಷ, ದಲಿತೋದ್ಧಾರಕ ಬಸವಣ್ಣನವರನ್ನು ಮರೆಯುವುದು ಅಥವಾ ವಿರೋಧಿಸುವುದು ಆತ್ಮವಂಚನೆಯಲ್ಲದೆ ಬೇರಲ್ಲ. ಇದಕ್ಕೊಂದು ದೃಷ್ಟಾಂತ ನೆನಪಾಗುತ್ತದೆ. ಓರ್ವ ತ್ಯಾಗಜೀವಿ ಸಾಧಕ; ಪಶುಗಳ ಮಟ್ಟದಲ್ಲಿ ಬದುಕುತ್ತ ಕೊಲೆ-ಸುಲಿಗೆಗಳಲ್ಲಿ ತಲ್ಲೀನರಾದ ಗುಡ್ಡಗಾಡು ಜನರ ಸುಧಾರಣೆಯ ಛಲ ಹೊತ್ತ. ಅದಕ್ಕಾಗಿ ಅವನ ಮನೆಯನ್ನು, ಬಂಧುಬಳಗವನ್ನು ತೊರೆದ. ಕಾಡಿನಲ್ಲಿದ್ದು ಅವರಿಗಾಗಿ ತನ್ನ ಶಕ್ತಿ, ಸಮಯ ಎಲ್ಲ ಮೀಸಲಿಟ್ಟ. ಆಗ ಕೆಲವು ಸ್ವಾರ್ಥಿಗಳು, ಗುಡ್ಡಗಾಡು ಜನರು ಪರಿವರ್ತಿತರಾಗಬಾರದೆಂಬ ದೂ(ದು)ರಾಲೋಚನೆಯಿಂದ, ಆ ಜನರನ್ನು ಪ್ರಚೋದಿಸಿದರು. ತ್ಯಾಗಿಯು ಏನೋ ಸ್ವಾರ್ಥವನ್ನಿಟ್ಟುಕೊಂಡು ಹೀಗೆ ಮಾಡುತ್ತಿರಬೇಕೆಂದು ಆ ಗುಡ್ಡಗಾಡು ಜನ ಅವನನ್ನೇ ಕೊಂದರು. ಇಲ್ಲಿ ಅವನ ತ್ಯಾಗವನ್ನು ಮೂಢರು ಅರ್ಥ ಮಾಡಿಕೊಳ್ಳದೆಯೇ ಅವನನ್ನು ಬಲಿತೆಗೆದುಕೊಂಡಿದ್ದು, ಅದೇ ರೀತಿ ಜಾತೀಯತೆಯ ಹೆಸರಿನಲ್ಲಿ ಸಿಕ್ಕಿಕೊಂಡ ಇಂದಿನ ವಿದ್ಯಾವಂತ ಮೂಢರು ಬಸವಣ್ಣನವರನ್ನು ವಿರೋಧಿಸುವುದು ಅಷ್ಟೇ ಅಮಾನುಷ.

ಇದಷ್ಟೇ ಅಲ್ಲ, ಹೇಗೆ ಮಹಾರಾಷ್ಟ್ರ ಎಂದಾಗ ಶಿವಾಜಿಯ ನೆನಪು ಬರುತ್ತದೆಯೋ ಹಾಗೆ ಕರ್ನಾಟಕ ಎಂದ ತಕ್ಷಣ ನೆನಪು ಬರುವುದು ಬಸವಣ್ಣನವರದ್ದು. ಏಕೆಂದರೆ ಕನ್ನಡ ಭಾಷೆಗೆ ವಿಶ್ವಮಾನ್ಯತೆ ಏನಾದರೂ ದೊರೆಯಬೇಕಾಗಿದ್ದರೆ ಅದು ವಚನ ಸಾಹಿತ್ಯದಿಂದ; ಕನ್ನಡ ನಾಡಿಗೆ ಕೀರ್ತಿ ಸಲ್ಲುತ್ತಿದ್ದರೆ ಜಗತ್ತಿನ ಮೊಟ್ಟಮೊದಲ ಸಮತಾವಾದಿ ಬಸವಣ್ಣನವರು ಹುಟ್ಟಿ ಕ್ರಾಂತಿಯ ಬೀಜ ಬಿತ್ತಿದ್ದರಿಂದ. ಎಲ್ಲದಕ್ಕೂ ಜಾತಿಯ ಸೋಂಕು ತಗುಲಿಸುತ್ತಿರುವ ರಾಜಕಾರಣಿಗಳ ಕಲುಷಿತತೆಯಿಂದ ಜಾತ್ಯತೀತ ವಾದಿಗಳಾದ ಮಹಾತ್ಮರೂ ಜಾತಿ ಸಂಕೋಲೆಗೆ ಸಿಕ್ಕಿ

Digitalized by e-Sahithya Documentation Forum
Sponsored by Sarayu Foundation Trust

ಭಾರತೀಯರಿಗೆಲ್ಲ ಸಂಪೂಜ್ಯನೋ, ಸ್ವಾಮಿ ವಿವೇಕಾನಂದರು ಕ್ಷತ್ರಿಯರಿಗಷ್ಟೇ ಪೂಜ್ಯರಾಗದೇ ಭಾರತೀಯರಿಗೆಲ್ಲ ಪೂಜ್ಯರೋ ಹಾಗೆ ಬಸವಣ್ಣನವರು ಲಿಂಗಾಯಿತ ರಿಗಷ್ಟೇ ಸಂಪೂಜ್ಯರಲ್ಲ, ಕನ್ನಡಿಗರಿಗೆಲ್ಲ ಕುಲಗುರು. ಭಾರತೀಯರಿಗೆಲ್ಲ ಆರಾಧ್ಯ. ಏಕೆಂದರೆ ಇಂಥ ಪ್ರವಾದಿಗಳು ಮತ ಜಾತಿ ಪಂಥಗಳ ಮಿತ ವಲಯವನ್ನು ದಾಟಿ, ಮೇಲೆದ್ದು ನಿಂತ ಉತ್ತುಂಗರು. ಕನ್ನಡನಾಡು ಹೆಮ್ಮೆ ಪಡುವಂಥ ವ್ಯಕ್ತಿ ಬಸವಣ್ಣನವರಾದ ಕಾರಣ, ಕಲಬುರ್ಗಿಯೇ ಆದಿಯಾಗಿ ಆ ಭಾಗವನ್ನು ವಿದ್ಯಾಸಿರಿ ಯಿಂದ ಪರಿಶೋಭಿಸುವಂತೆ ಮಾಡುವ ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ಶ್ರೀ ಬಸವೇಶ್ವರ ವಿಶ್ವವಿದ್ಯಾಲಯವೆಂದು ಹೆಸರಿಡುವುದರಿಂದ, ಬಸವಣ್ಣನವರನ್ನು ಗೌರವಿಸುವುದಕ್ಕಿಂತ ಹೆಚ್ಚು ಕನ್ನಡಿಗರು ತಮ್ಮನ್ನು ತಾವು ಗೌರವಿಸಿಕೊಂಡಂತೆ, ಕನ್ನಡ ಭಾಷೆಗೆ ಅಗ್ರಮನ್ನಣೆ ನೀಡಿದಂತೆ, ಎಲ್ಲಕ್ಕಿಂತ ಮಿಗಿಲಾಗಿ ಸಮತಾವಾದಕ್ಕೆ ನಾಂದಿಯನ್ನು ಹಾಡಿದಂತೆ ಆಗುತ್ತದೆ. ಈ ನಿರ್ಣಯದಲ್ಲಿ ವಿವಾದಗಳನ್ನೆಬ್ಬಿಸುವ ಸಂಕುಚಿತತೆ ಕನ್ನಡಿಗರಿಗೆ ಬರದಿರಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುವೆ.

ಜಗದ್ಗುರು ಮಾತೆ ಮಹಾದೇವಿ

ಹೊಲೆಯ ಮಾದಿಗ ಭಕ್ತನಾದರೆ ಆತನ ಮನೆಯ ಸೊಣಗಂಗೆ ಪಂಚಮಹಾ ವಾದ್ಯದಲ್ಲಿ ಸನ್ಮಾನ ಮಾಡುವೆ, ನೆಲವನುಗ್ಘಡಿಪೆ "ಉಘೆ ಚಾಂಗುಭಲರೆ" ಎಂದು.

—ಶ್ರೀ ಬಸವೇಶ್ವರ

ಆಲಸ್ಯ, ಅತಿನಿದ್ರೆ, ಹರಟೆ ಒಂದೇ ತಾಯಿಯ ತ್ರಿವಳಿ ಮಕ್ಕಳು.

—ಅನುಭವವಾಣಿ

ಎಲು ತೊಗಲು ನರಮಾಂಸ ಬಲಿದ ಚರ್ಮದ ಹೊದಿಕೆ ಹೊಲೆ ರಕ್ತ ಶುಕ್ಲ ದಿಂದಾದ ದೇಹಕ್ಕೆ ಕುಲವಾವುದಯ್ಯಾ ?

—ಸರ್ವಜ್ಞ

ತೋಟದಲ್ಲಿ ಕಳೆ ಹೊಲ್ಲ, ಕೀಟ ಬೆಳಸಿಗೆ ಹೊಲ್ಲ, ಬೇಟವದು ಹೊಲ್ಲ ಪರ ಸತಿಯಂ, ದುರ್ಜನರ ಕೂಟವೇ ಹೊಲ್ಲ.

—ಸರ್ವಜ್ಞ

ಏನನಾದರೂ ಕೊಟ್ಟು ಜ್ಞಾನಿಯಾ ಕೆಳೆಕೊಳ್ಳು, ಜ್ಞಾನಹೀನನಾ ಕೆಳೆಗೊಂದು ಹಣವನ್ನು ನೀನಿತ್ತು ಕಳುಹಂ.

—ಸರ್ವಜ್ಞ

ಬಲ್ಲಿದರವಲ್ಲದೆ ಎಲ್ಲರ ಸಲಹೆಗಳನ್ನು ಪಡೆದು ಮನೆ ಕಟ್ಟುವವನು ವಕ್ರವಾದ ಮನೆಯನ್ನೇ ಕಟ್ಟುವನು.

—ಆಂಗ್ಲ ಗಾದೆ

ಸಮಸ್ಯೆ ಸಮಾಧಾನ!

ಕೆ. ವಿ. ರವಿಪ್ರಕಾಶ, ಬೆಂಗಳೂರು

❊ ತಾವು ಪ್ರವಚನ ಮಾಡಲಿಕ್ಕಾಗಿ ಮಹಾ ಕ್ರಾಂತಿಪುರುಷ ಬಸವಣ್ಣ ನವರ ಜೀವನ ಚರಿತ್ರೆ ಆರಿಸಿಕೊಳ್ಳಲಿಕ್ಕೆ ಕಾರಣ ?

* ಜಾತಿ, ವರ್ಣ, ವರ್ಗ, ಲಿಂಗಭೇದವಣಿಸದೆ ಸಮತಾವಾದಿ ಸಮಾಜ ವನ್ನು ಕಟ್ಟಲಿಕ್ಕೆ ಅವರು ಒಂದು ಸೂತ್ರ, ಸಂವಿಧಾನ ಕೊಟ್ಟಿದ್ದಾರೆ. ದೇವರು- ಧರ್ಮಗಳ ತಳಹದಿಯ ಮೇಲೆಯೇ ವೈಚಾರಿಕ ಸಮಾಜವನ್ನು ಕಟ್ಟಿ ತೋರಿದರು. ಆದ್ದರಿಂದ ಮೂಢನಂಬಿಕೆಗಳಿಲ್ಲದ ವೈಚಾರಿಕ ಸಮತಾವಾದಿ ಸಮಾಜ ನಿರ್ಮಾಣಕ್ಕೆ ಸಹಾಯಕವಾಗುವ ತತ್ತ್ವಗಳನ್ನು ಜನಮನದಲ್ಲಿ ಪ್ರಸಾರ ಮಾಡುವ ಉದ್ದೇಶ ನಮ್ಮದು.

❊ ಹರಕೆ ಮಾಡಿಕೊಂಡು ಕೂದಲು ಕೊಡುವುದು, ಪಾಪ ಪರಿಹಾರಾರ್ಥ ತಮ್ಮ ತೂಕದ ಬೆಲ್ಲ ಹಂಚುವುದು, ಪ್ರಾಯಶ್ಚಿತ್ತವೆಂದು ದೇವಾಲಯಗಳ ಕೊಳ ದಲ್ಲಿ ಮುಳುಗಿ ಕೊಬ್ಬರಿ ಸುಡುವುದು ಮುಂತಾದ ಚಟುವಟಿಕೆಗಳಿವೆಯಲ್ಲ. ಇದ ರಿಂದ ಪಾಪ ಪರಿಹಾರ ನಿಜಕ್ಕೂ ಆಗುವುದೆ ?

* ಸುತರಾಂ ಸಾಧ್ಯವಿಲ್ಲ. ಇಷ್ಟು ಸುಲಭವಾಗಿ ಕಳೆದುಕೊಳ್ಳಲು ಬರು ವಂತಹುದಲ್ಲ 'ಪಾಪ'. ಇದು ಕೇವಲ ಮೌಢ್ಯತೆ. ಪಾಪ ಪರಿಹಾರವಾಗುವುದು ಅಂತಃಕರಣಪೂರ್ವಕ ಪಶ್ಚಾತ್ತಾಪದಿಂದ ಮಾತ್ರ ಮತ್ತು ಮುಂದೆ ಅದೇ ಪಾಪ ಸಂಭವಿಸದಂತೆ ಎಚ್ಚರ ವಹಿಸುವುದರಿಂದ. ಪ್ರಾಯಶ್ಚಿತ್ತವೆಂದು ಕೆಲವರು ಮಾಡು ವುದು ಹಣವನ್ನು ಕಳೆದುಕೊಳ್ಳುವ ದಾರಿಗಳೇ ವಿನಾ, ಪಾಪವನ್ನಲ್ಲ.

ಕೆ. ಜಿ. ಮಾಶೆಟ್ಟಿ, ಹುಡಗಿ

❊ ಸುಶಿಕ್ಷಿತರಾಗಿ ಒಬ್ಬರೊಬ್ಬರನ್ನು ಅರಿತು ಮನಃಪೂರ್ವಕವಾಗಿ ಮೆಚ್ಚಿ ಮದುವೆಯಾಗುವುದು ಒಳ್ಳಿತೋ ; ಅಥವಾ ಹೇಗೋ ಸಂಬಂಧ ಬೆಳಸಿ ಮದುವೆ ಯಾದ ನಂತರ ಪರಸ್ಪರರು ಅರಿತುಕೊಳ್ಳುವ ಸಾಂಪ್ರದಾಯಿಕ ಮದುವೆ ಒಳ್ಳೆ ಯದೋ ?

Digitalized by e-Sahithya Documentation Forum
Sponsored by Sarayu Foundation Trust

* ಒಳ್ಳೆಯದು ಯಾವುದು ಎಂಬುದನ್ನು ನಿರ್ಧರಿಸುವುದು ಬಹು ಕಷ್ಟ. ಯಾವುದೇ ಬಗೆಯ ಮದುವೆ ಇರಲಿ ಪರಸ್ಪರ ಅರಿತುಕೊಳ್ಳಬೇಕು, ಸಹನೆ ತಾಳಿ ಬಾಳಬೇಕು. ಸುಖದುಃಖಗಳಲ್ಲಿ ಒಂದೇ ರೀತಿ ಮುಂದುವರಿಯಬೇಕು. ಕೆಲವರು ಉಭಯತರೂ ಅರಿತಿದ್ದೇವೆಂದು ಪ್ರೇಮ ವಿವಾಹ ಆಗಿ ನಂತರ "ನಾನೇನು ಕಡಿಮೆ" ಎಂದು ಹೆಂಡತಿ, "ನನ್ನ ತ್ಯಾಗ ಸಾಮಾನ್ಯವಲ್ಲ ..." ಎಂದು ಗಂಡ ಜಗಳವಾಡಿ ಮನೆ ರಣರಂಗವಾಗುವುದನ್ನು ಕಾಣುತ್ತೇವೆ. ಅನೇಕರು ಮದುವೆಗೆ ಮುನ್ನ ಯಾವ ಯಾವ ಪರಿಚಯವೂ ಇಲ್ಲದೆ ಹಿರಿಯರ ಮಾತಿನಂತೆ ಮದುವೆಯಾಗಿ ನಂತರ ಪರಸ್ಪರ ಅರಿತು ಬಾಳುವುದನ್ನು ಕಾಣುತ್ತೇವೆ.

❊ ಮಠ ಇರುವಲ್ಲಿಗೆ ಜನರನ್ನು ಆಕರ್ಷಿಸಬೇಕೋ, ಅಥವಾ ಜನಜಂಗುಳಿ ಇರುವಲ್ಲಿ ಮಠವನ್ನು ಕಟ್ಟಬೇಕೊ ?

* ಪ್ರಚಾರ_ಆಕರ್ಷಣೆ ದೃಷ್ಟಿಯಿಂದ ಜನಜಂಗುಳಿ ಇರುವಲ್ಲಿಯೇ ಮಠ ಕಟ್ಟಬೇಕು. ಅಧ್ಯಾತ್ಮಿಕ ಚಟುವಟಿಕೆಗಳನ್ನು ನಡೆಸಿ ಮಠವನ್ನು ಜಾಗೃತವಾಗಿಟ್ಟು ಮಠವಿದ್ದಲ್ಲಿಗೂ ಜನರನ್ನು ಆಕರ್ಷಿಸಬೇಕು.

ಬ್ರಹ್ಮಚಾರಿ ಚಿದಾನಂದ, ರತ್ನಗಿರಿ

❊ ಅಧ್ಯಾತ್ಮ ಸಾಧನೆ ಬಯಸಿ, ಗೃಹ ತ್ಯಾಗ ಮಾಡಿ ಸಾಧನೆಯಲ್ಲಿ ತೊಡಗಿರುವ ಮುಮುಕ್ಷು ನಾನು. ಇತ್ತೀಚೆಗೆ ಓರ್ವ ಕೇರಳದ ಮಾಂತ್ರಿಕನ ಪರಿಚಯ ನನಗಾಗಿದೆ. ಅವನು ಬರಿಗೈಯಿಂದ ಬೂದಿ ತರಿಸುವ ವಿದ್ಯೆ, ಖಾಲಿ ಕೊಡದಿಂದ ನೀರು ಬರಿಸುವ ವಿದ್ಯೆ, ಬರಿಗೈಯಿಂದ ವಿಗ್ರಹ ತೆಗೆಯುವುದು ಮುಂತಾದ್ದನ್ನು ಹೇಳಿಕೊಡುತ್ತೇನೆ ಎಂದು ಒಂದೇ ಸಮನೆ ಒತ್ತಾಯಿಸುತ್ತಿದ್ದಾನೆ. ಆದರಿಂದ ಅನೇಕರನ್ನು ಆಕರ್ಷಿಸಬಹುದು, ಬರೀ ಧ್ಯಾನ-ಯೋಗ, ಪಾಠ-ಪ್ರವಚನಗಳಿಂದ ಜನರು ಅಷ್ಟಾಗಿ ಆಕರ್ಷಿತರಾಗರು ಎನ್ನುತ್ತಾನೆ. ಉದಾಸೀನ ಮಾಡದೆ ಉತ್ತರಿಸಿ ಮಾರ್ಗದರ್ಶನ ಮಾಡಿರಿ. ಈಗ ನಾನೇನು ಮಾಡಲಿ ?

* ಅಂತಃಸಾಕ್ಷಿಗೆ ದ್ರೋಹ ಬಗೆದು ಜನರನ್ನು ಆಕರ್ಷಿಸುವುದೇ ನಿಮ್ಮ ಗುರಿಯಾಗಿದ್ದರೆ ಕಲಿಯಿರಿ. ದೇವಸಾಕ್ಷಿಯಾಗಿ, ಉನ್ನತ ಗುರಿಗಾಗಿ ಬದುಕುವುದೇ ಆಗಿದ್ದರೆ ಅಂಥ ಅಪಾಯಕಾರಿ ದಾರಿ ಹಿಡಿಯಬೇಡಿರಿ. ಹೇಗೆ ದಿಢೀರ್ ಶ್ರೀಮಂತ ರಾಗ ಬಯಸಿ ಕೆಲವರು ಕಾಳಸಂತೆ, ಕಳ್ಳಸಾಗಾಣಿಕೆ, ಕಲಬೆರಕೆ ಮಾಡುತ್ತಾರೋ ಮತ್ತು ಅನೆಂತಹ ಅಪಾಯಕಾರಿ ದಾರಿಯೋ, ದಿಢೀರ್ ಜನಾಕರ್ಷಣೆ ಬಯಸಿ ಇಂಥ ಅಡ್ಡದಾರಿ ಹಿಡಿಯುವುದೂ ಅಷ್ಟೇ ಅಪಾಯಕಾರಿ. ಶಂಕರಾಚಾರ್ಯರು,

ಬಸವಣ್ಣನವರು, ಅಕ್ಕಮಹಾದೇವಿ, ಅರವಿಂದರು, ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಮುಂತಾದವರು ಸಾಗಿರುವ ಸಾತ್ವಿಕ ಹೆದ್ದಾರಿ (High way) ಬಿಟ್ಟು ಭಯಾನಕ ಅಡ್ಡದಾರಿ ಹಿಡಿಯಬೇಡಿ. ನಂತರ ನಿಮಗೂ ಶಾಂತಿ ಇರದು, ಸಮಾಜಕ್ಕೂ ದಿಕ್ಕು ತಪ್ಪಿಸಿದ ಪಾಪ ನಿಮ್ಮದಾಗುವುದು. ನಿಮ್ಮ ಸಾಧನೆ ಶಾಂತವಾಗಿ, ವೈಚಾರಿಕವಾಗಿ, ವೈಜ್ಞಾನಿಕವಾಗಿ ಮುಂದುವರೆಯಲಿ.

ವೈ. ಎಸ್. ನೂಲಿ, ಅಥಣಿ. ಚಂ. ಸಂ. 7026

❊ ಬಸವಣ್ಣನವರಿಗೆ ದೀಕ್ಷಾ ಗುರುವೇ ಇಲ್ಲ ಎಂದು ಕೆಲವರ ಅಭಿಪ್ರಾಯ. ಹಾಗಾದರೆ ಜಾತವೇದ ಮುನಿಗಳು ಅವರ ದೀಕ್ಷಾಗುರುಗಳಲ್ಲವೆ ?

* ನಿಜ, ಬಸವಣ್ಣನವರಿಗೆ ದೀಕ್ಷಾಗುರು ಯಾರೂ ಇಲ್ಲ. ಅವರಿಗೆ ನೇರವಾಗಿ ಪರಮಾತ್ಮನ ಅನುಗ್ರಹ ಸಾಕ್ಷಾತ್ಕಾರ (Revelation) ದ ಮುಖಾಂತರ ಆಗಿದೆ. ಹರಿಹರನ ಬಸವರಾಜದೇವರ ರಗಳೆ ಅಂಗೈಯಲ್ಲಿಟ್ಟ ನೆಲ್ಲಿಯಷ್ಟು ಸ್ಪಷ್ಟವಾಗಿ ಇದನ್ನು ಹೇಳುತ್ತದೆ. ಜಾತವೇದ ಮುನಿಗಳು ಕೂಡಲ ಸಂಗಮ ಕ್ಷೇತ್ರದ ಸ್ಥಾನಪತಿಗಳು, ಪಾಶುಪತ ಶೈವರು ; ಅವರು ತಮ್ಮ ಗುರುಕುಲದಲ್ಲಿ ಬಸವಣ್ಣನವರಿಗೆ ಶಿಕ್ಷಣ ಕೊಟ್ಟ ಮಹಾನುಭಾವರು.

ಪ್ರದೀಪಕುಮಾರ, ಊರು ಬೇಡ

❊ ಒಂದು ಸಮಾರಂಭ ನಡೆಯಿತು. ಸಹಸ್ರಾರು ರೂಪಾಯಿಗಳ ವೆಚ್ಚದ ಚಪ್ಪರ ಹಾಕಿದ್ದರು. ಆದರೂ ಜನ ಸೇರುತ್ತಿರಲಿಲ್ಲ. ತಮ್ಮ ಪ್ರವಚನವಾದಾಗ ಬದಿರಿನ ಮಂಟಪ, ಹತ್ತು ಟ್ಯೂಬ್ ಲೈಟು ಬಿಟ್ಟರೆ ಏನೂ ಇಲ್ಲ. ಆದರೂ ಜನರು ಕಿಕ್ಕಿರಿದು ನೆರೆಯುತ್ತಿದ್ದರು. ಹೀಗೇಕೆ ?

* ದುಂಬಿಗಳು ಹಾರಿ ಬರುವುದು ಸೊಂಪಾಗಿ ಬೆಳೆದ ಸೊಪ್ಪು, ಕೊಂಬೆ, ಎಲೆಗಳಿಗಾಗಿ ಅಲ್ಲ. ಹೂವಿನಲ್ಲಿರುವ ಮಕರಂದಕ್ಕೆ. ಹಾಗೆ ಜನರ ಹೃದಯ ಒಲಿಯುವುದು ವೈಭವಕ್ಕಲ್ಲ, ವಿಚಾರವಂತಿಕೆಗೆ.

ಬಸವರಾಜ ಸಂಗಮದ, ಬೀದರ

❊ ಹಣದ ಮಹತ್ವವೇನು ?

* ಕಾಗೆಯನ್ನು ಕೋಗಿಲೆಯನ್ನಾಗಿ ಮಾಡಬಲ್ಲುದು. ದಡ್ಡನನ್ನು ವಿದ್ವಾಂಸನನ್ನಾಗಿ ಏರಿಸಬಲ್ಲುದು. ಬಡವನ ಮಗ ದಡ್ಡನಿದ್ದರೆ ದಡ್ಡ ಎಂದು ಸ್ಪಷ್ಟವಾಗಿ ಆಡುವರು. ಶ್ರೀಮಂತನ ಮಗ ದಡ್ಡನಿದ್ದರೆ 'ತುಂಬಾ ಸಂಭಾವಿತ' ಎನ್ನುವರು. ಸಾಮಾನ್ಯ ಮಠದ ಅಧಿಕಾರಿಯೊಬ್ಬ ದಡ್ಡನಿದ್ದರೆ 'ಆ ಸ್ವಾಮಿ ಅಜ್ಞಾನಿ' ಎನ್ನುವರು. ಶ್ರೀಮಂತ ಮಠದ ಅಧಿಕಾರಿ ಹೇಗಿದ್ದರೂ "ಅವನು ತುಂಬಾ ಶಾಂತ, ಗಂಭೀರ" ಎನ್ನುವರು. ತಾತ್ಕಾಲಿಕವಾಗಿ ಲೋಕದ ವೃತ್ತಿ ಇದಾದರೂ ಇತಿಹಾಸ ಉಳಿಸುವುದು ಹಣವಂತನನ್ನಲ್ಲ. ಗುಣವಂತನನ್ನು, ಜ್ಞಾನಿಯನ್ನು.

Digitalized by e-Sahithya Documentation Forum
Sponsored by Sarayu Foundation Trust

ಸ್ವಾಮಿ ಬ್ರಹ್ಮಾನಂದ, 58065

❊ ನಾನೊಬ್ಬ ಸರ್ವಧರ್ಮಪ್ರಸಾರಕ ಸ್ವಾಮಿ. ಯಾವುದೇ ಮಠ, ಪೀಠ ಆಸ್ತಿಗಳ ಆಮಿಷಕ್ಕೊಳಗಾಗಿ ಸನ್ಯಾಸ ಕೈಗೊಂಡವನಲ್ಲ. ಜಾತ್ಯತೀತ ಮನೋಭಾವನೆಯಿಂದ ಶುದ್ಧ ಅಧ್ಯಾತ್ಮ ಬೋಧೆ ಮಾಡುತ್ತಲಿರುವ ನನಗೆ ಒಂದು ವಿಶೇಷಾನುಭವ. ಯಾವ ಊರಲ್ಲಿ ಸಂಪ್ರದಾಯ ಮಠ ಇಲ್ಲವೋ ಅಲ್ಲಿ ಜನರು ಪೂರ್ವಾಗ್ರಹ ಪೀಡಿತ ದೃಷ್ಟಿಯಿಲ್ಲದೆ ಅಧ್ಯಾತ್ಮ ಜ್ಞಾನ ಪಡೆಯುವರು. ಎಲ್ಲಿ ಸಾಂಪ್ರದಾಯಕ ಮಠಗಳಿರುತ್ತವೋ ಅಲ್ಲಿ ಪ್ರವಚನ ಕೇಳುವ ಆಸಕ್ತಿಯೇ ಕಡಿಮೆ. ಹೀಗೇಕೆ?

* ಪ್ರಶ್ನೆ ಗಂಭೀರವಾಗಿದೆ. ನಿಮ್ಮ ಅನುಭವ ಜ್ವಲಂತ ಸಾಕ್ಷಿಯಾಗಿ ಹೇಳುತ್ತಿದೆ ಸಾಂಪ್ರದಾಯಕ ಮಠಗಳು ಅಧ್ಯಾತ್ಮ ಪ್ರಜ್ಞೆಗಿಂತಲೂ ಹೆಚ್ಚಾಗಿ ಜಾತಿ ಪ್ರಜ್ಞೆಯನ್ನು ಹುಟ್ಟಿಸುತ್ತವೆ ಎಂಬುದನ್ನು. ಜ್ಞಾನವನ್ನು ನಿಷ್ಕಲ್ಮಶ ಹೃದಯದಿಂದ ಸ್ವೀಕರಿಸಬೇಕೆಂಬ ಮನೋಭಾವಕ್ಕೆ ಬದಲಾಗಿ ಪೂರ್ವಾಗ್ರಹಪೀಡಿತ ದೃಷ್ಟಿಯನ್ನು ಬೆಳೆಸುತ್ತವೆ. ಸಮಾಜವನ್ನು ಸಂಘಟಿಸುವ ಉದಾತ್ತ ಕಾರ್ಯಕ್ಕಿಂತಲೂ ಇಂಥ ವಿಧ್ವಂಸಕ ಕಾರ್ಯ ಮಾಡುವ ಸ್ವಾಮಿಗಳನ್ನು ಕಂಡು, ಜನರು ಕಹಿ ಭಾವನೆಯನ್ನು ತಾಳಿ, ನಿಮ್ಮ ಪ್ರವಚನಕ್ಕೆ ಬರಲಿಕ್ಕಿಲ್ಲ, ಮೊದಮೊದಲಿಗೆ. ನಿಮ್ಮ ಉದಾತ್ತ ಧ್ಯೇಯ ತಿಳಿದ ಬಳಿಕ ಬಂದೇ ಬರುವರು.

ವಿದ್ಯಾಧರ ಸೀಳಿನ, ಚಿಂಚೋಳಿ


❊ ಬಸವಣ್ಣನವರು ವಿಶ್ವಧರ್ಮ ಪ್ರಚಾರಕರೇ? ಅಥವಾ ವೀರಶೈವ ಧರ್ಮ ಪ್ರಚಾರಕರೆ?

* ಬಸವಣ್ಣನವರು ಲಿಂಗಾಯಿತ (ಬಸವ) ಧರ್ಮ ಸಂಸ್ಥಾಪಕರು; ವಿಶ್ವ ಧರ್ಮ ಪ್ರಸಾರಕರು. ಅವರು ಒಂದು ಧಾರ್ಮಿಕ ಸಂವಿಧಾನ (constitution) ಮತ್ತು ಸಾಹಿತ್ಯ ಕೊಟ್ಟುದ್ದು ಯಾವುದೇ ಒಂದು ಜಾತಿ ಮತದ ಉದ್ಧಾರಕ್ಕಲ್ಲ; ಮಾನುಕುಲದ ಉತ್ಥಾನಕ್ಕೆ.

ಕುಮಾರಿ ಚಂದ್ರಿಕಾ, ಊರು ಬೇಡ

❊ ಓರ್ವ ಆಶ್ರಮವಾಸಿಯಾಗಿದ್ದವಳು, ತಾನು ಅನ್ನಕ್ಕಾಗಿ ಆಶ್ರಯಿಸಿದ ಸಂಸ್ಥೆಯ ಬಗ್ಗೆಯೇ ನಿಂದಿಸುತ್ತಿದ್ದಳು, ಮತ್ತೂ ಅಲ್ಲೇ ಇದ್ದಳು. ಇದೆಂಥ ವಿಚಿತ್ರ! ನನಗೆ ನೋಡಿ ದಿಗ್ಭ್ರಾಂತಿ ಆಯಿತು.

* ದಿಗ್ಭ್ರಾಂತಿ ಏಕೆ? ಇಂಥ ಪ್ರವೃತ್ತಿ ಸ್ವಾಭಾವಿಕ, ಕೈ ಬಾಯಿ ಶುದ್ಧಿಯಿಲ್ಲದವರ ಕೈಯಲ್ಲಿ ಆರ್ಥಿಕ ಜವಾಬ್ದಾರಿ ಕೊಡಲು ಸಂಸ್ಥೆಯ ವ್ಯವಸ್ಥಾಪಕರು ಇಚ್ಛಿಸುವುದಿಲ್ಲ. ಆಗ ಬೈಯುವುದು ಸ್ವಾಭಾವಿಕ. ಬಿಟ್ಟುಹೋಗದೇ ಅಲ್ಲೇ ಇರುವದೇಕೆಂದರೆ, ಅಂಥವರಿಗೆ ಎಲ್ಲಿಯೂ ಆಶ್ರಯವಿಲ್ಲ. ಈ ಗುಣಕ್ಕಾಗಿಯೇ ಎಲ್ಲರಿಂದ ಅಗೌರವಿಸಲ್ಪಡುವರು ಅವರು.



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ತೊತ್ತಿಂಗೆ ಒಡತಿಯ ಬಲವಯ್ಯ
ಬಡವಂಗೆ ಬಲ್ಲಿದನ ಬಲವಯ್ಯ
ಆಳಿಂಗೆ ಅರಸನ ಬಲವಯ್ಯ
ನನಗೆ ಗುರುಲಿಂಗಜಂಗಮದ ಬಲವಯ್ಯ ಅಖಂಡೇಶ್ವರಾ.

—ಷಣ್ಮುಖ ಶಿವಯೋಗಿಗಳು

ಆಶ್ರಯ ಅನ್ನುವುದು ಬಹಳ ಮಹತ್ವಪೂರ್ಣ. ದೊಡ್ಡವರ ಆಶ್ರಯದಲ್ಲಿದ್ದಾಗ ಎಂಥ ಕ್ಷುದ್ರನಿಗೂ ದೊಡ್ಡ ಸ್ಥಾನ ಸಿಕ್ಕಿರುತ್ತದೆ. ಒಬ್ಬ ದೊಡ್ಡ ಅಧಿಕಾರಿಯ ಬಾಗಿಲು ಕಾಯುವ ಸೇವಕನಿಗೂ ಎಲ್ಲರೂ ಬೆಲೆ ಕೊಡುವರು; ಅವನನ್ನು ಒಲಿಸಿಕೊಂಡು ಅಧಿಕಾರಿಯನ್ನು ಸಂಪ್ರೀತಗೊಳಿಸುವರು. ಒಂದು ಪೌರಾಣಿಕ ಕಥೆ ಹೀಗೆ ಬರುತ್ತದೆ: ಒಮ್ಮೆ ವಿಷ್ಣುವು ಕಾರ್ಯಾರ್ಥ ಗರುಡನನ್ನು ಕೈಲಾಸಕ್ಕೆ ಕಳಿಸಿದನಂತೆ. ಅವನು ಬಂದು ಮಹಾದೇವನನ್ನು ಸಮೀಪಿಸಿದಾಗ, ಮಹಾದೇವನ ಮೈಮೇಲಿದ್ದ ಹಾವು ಬುಸುಗುಟ್ಟಿ ಹೆಡೆ ಬಿಚ್ಚಿತಂತೆ. ಆಗ ಗರುಡ ನುಡಿದನಂತೆ, "ಅಯ್ಯಾ ನಾಗರಾಜ ನಿನ್ನ ಆಶ್ರಯ ದೊಡ್ಡದಿದೆ. ಅದಕ್ಕಾಗಿ ನಾನು ಮೌನ ತಾಳಿರುವೆ. ನೀನು ಆಶ್ರಯಿಸಿರುವ ಸ್ಥಾನವನ್ನು ಬಿಟ್ಟು ಬಾ. ಆಗ ಬುಸುಗುಟ್ಟುವೆಯಂತೆ. ಒಂದು ಕೈ ತೋರಿಸುತ್ತೇನೆ..." ಎಂದು. ದೊಡ್ಡವರ ಆಶ್ರಯದಲ್ಲಿರುವ ಸಣ್ಣವರಿಗೂ ಕೆಲವೊಮ್ಮೆ ಬೆಲೆ ಕೊಡಬೇಕಾಗುತ್ತದೆ. ಆ ಸಣ್ಣವರಿಗೆ ಸಿಕ್ಕ ಗೌರವ ಸ್ವತಂತ್ರವೋ ಅಥವಾ ಅನ್ಯಾಶ್ರಿತವೋ? ಹಾಗೆ ಓರ್ವ ಮಹಾತ್ಮನು ಗೌರವಾರ್ಹನಾಗುವುದು ತನ್ನಿಂದ ತಾನೇ ಅಲ್ಲ; ಗುರುಲಿಂಗಜಂಗಮದ

Digitalized by e-Sahithya Documentation Forum
Sponsored by Sarayu Foundation Trust

ಕರುಣೆಯಿಂದ, ಅವರ ಆಶ್ರಯದಿಂದ. ಈ ಅನುಭವವನ್ನು ಬಸವಣ್ಣನವರು ಇನ್ನೂ ಸಮರ್ಪಕವಾಗಿ ಹೇಳುತ್ತಾರೆ :

ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೆ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯ ?
ಅನುಭಕ್ತನೆಂಬ ನುಡಿ ಸುಡದೆ ಕೂಡಲ ಸಂಗಮದೇವಾ ?

ಮರದ ಕೆಳಗೆ ನಿಂತುಕೊಂಡು ತನ್ನ ನೆರಳನ್ನು ಹುಡುಕುವುದು ಹೇಗೆ ಹಾಸ್ಯಾಸ್ಪದವೋ ಹಾಗೆ ಆಶ್ರಯವಿತ್ತವರಿಂದ ದೊಡ್ಡವನಾದ ಬಳಿಕ ತನ್ನತನ ಅಹಂಕಾರದಿಂದ ಬೀಗುವುದೂ ಅಷ್ಟೇ ಹಾಸ್ಯಾಸ್ಪದ.

ಒಬ್ಬ ಸೇವಕ ಅಥವಾ ಸೇವಕಿಗೆ ತನ್ನ ಒಡತಿಯ ಬಲವಿದ್ದರೇ ಆಕೆ ಅನ್ಯರೊಡನೆ ವಾದವಿವಾದ ಕಾಳಗ ಅಥವಾ ವ್ಯವಹಾರಕ್ಕೆ ಇಳಿಯುವುದು. ಶ್ರೀಮಂತನ ಆಶ್ರಯ ಬಲವಾಗಿದ್ದರೇನೇ ಬಡವನು ಧೈರ್ಯವಾಗಿ ಖರ್ಚು ಮಾಡುವುದು. ಅರಸನ ಆಶ್ರಯ, ರಕ್ಷಣೆ ಇದ್ದರೆ ಮಾತ್ರವೇ ಆಳು ಕಾದಾಡಲು ತೊಡಗುವುದು. ಒಂದೊಂದು ಬೆಂಬಲದಿಂದ ಇವರು ಮುನ್ನುಗ್ಗಿದರೆ, ಸಾಧಕ ಶರಣನು ಮುನ್ನಡೆವುದು ಯಾವ ಬಲದಿಂದ? ಗುರುಲಿಂಗಜಂಗಮದ ಬಲದಿಂದ! ಗುರು ಕರುಣೆ ಅಖಂಡವಾಗಿದ್ದಾಗಲೇ ಇವನು ಸಾಧನಾರಂಗದಲ್ಲಿ ಮುನ್ನಡೆದು ಅಜ್ಞಾನದ ಅರಿಯನ್ನು ಎದುರಿಸುವನು. ಲಿಂಗದೇವನೊಲಿಮೆ ಬಲವಾಗಿದ್ದರೇನೇ ಭವದ ಶತ್ರುವನ್ನು ಎದುರಿಸಬಲ್ಲನು. ಮಹಾತ್ಮರ ಆಶೀರ್ವಾದ ಅತುಳವಾಗಿದ್ದರೇನೇ ಅಡ್ಡಿ ಆತಂಕಗಳನ್ನೆದುರಿಸಿ ದಿವ್ಯಾನುಭೂತಿ ಪಡೆಯಬಲ್ಲನು.

ಸಾಧಕ ಜೀವಿಗಳು ಬಯಸುವುದು ಲೌಕಿಕ ಒಡೆಯನನ್ನಲ್ಲ, ಹಣವನ್ನೀಯುವ ಬಲ್ಲಿದನನ್ನಲ್ಲ, ಸೇನೆ-ತುರಂಗಗಳನ್ನುಳ್ಳ ಅರಸರ ರಾಜಕೀಯ ಬಲವನ್ನಲ್ಲ, ಅಧ್ಯಾತ್ಮ ಶಕ್ತಿಗಳಾದ ಗುರುಲಿಂಗಜಂಗಮದ ಬಲವನ್ನು. ಅದುವೇ ನಿಜವಾದ ಬಲ. ಅದಿಲ್ಲದೆ ಮನುಷ್ಯ ನಿರ್ಬಲ; ಅವನ ಮನಸ್ಸು ದುರ್ಬಲ. ಮಹಾಭಾರತದ ಯುದ್ಧಕಾಲದಲ್ಲಿ ದುರ್ಯೋಧನ ತೋಳ್ಬಲವನ್ನು, ಆಳ್ಬಲವನ್ನು ಆಶ್ರಯಿಸಿಕೊಂಡು ಕಣಕ್ಕಿಳಿದ. ಅರ್ಜುನನು ಗುರುಬಲವನ್ನು ಆಶ್ರಯಿಸಿ ಕಣಕ್ಕಿಳಿದ. ಗೆಲವು ಕಡೆಗೆ ಒಲಿದುದು ಅರ್ಜುನನನ್ನಲ್ಲವೆ! ಅಂತೆಯೇ ಷಣ್ಮುಖ ಸ್ವಾಮಿಗಳು ಗುರುಲಿಂಗಜಂಗಮದ ಬಲವನ್ನು ಆಶ್ರಯಿಸಲು ಹೇಳುತ್ತಾರೆ.

★

ಮತ ಸ್ವಾತಂತ್ರ್ಯ ಮಸೂದೆ

ಜಗದ್ಗುರು ಮಾತೆ ಮಹಾದೇವಿ

ಶ್ರೀ ಓಂ ಪ್ರಕಾಶ ತ್ಯಾಗಿಯವರು ವೈಯಕ್ತಿಕವಾಗಿ ಮಂಡಿಸಿರುವ ಮತೀಯ ಸ್ವಾತಂತ್ರ್ಯ ವಿಧೇಯಕವು ಭಯಂಕರ ಸಾರ್ವಜನಿಕ ಪ್ರತಿಭಟನೆಗಳನ್ನು ಕ್ರೈಸ್ತ ಸಮಾಜದ ಪ್ರತಿಕ್ರಿಯೆಯಾಗಿ ಕಾಣುತ್ತಿದೆ. "ಬಾಯಿದ್ದ ಮಗಳೆ ಬದುಕೀಯ" ಎಂಬ ಗಾದೆಯ ಮಾತನ್ನನುಸರಿಸಿ ಸುಸಂಘಟಿತವಾದ ಕ್ರೈಸ್ತ ಸಮಾಜ ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಮಸೂದೆಯನ್ನು ವಿರೋಧಿಸುತ್ತಿರುವದಕ್ಕೆ ಅರ್ಥವಿದೆಯೆ ? ಎಂಬುದನ್ನು ಚಿಂತನೆ ಗೈಯಬೇಕು.

ಇದೇನೋ ಭಯಾನಕ ಮತವಿರೋಧಿತ್ವ ಎಂಬ ಒತ್ತುಕೊಟ್ಟು ಕ್ರೈಸ್ತರು ವಿರೋಧಿಸುತ್ತಿದ್ದಾರೆ. ಆದರೆ ಈ ಮಸೂದೆಯ ಪ್ರಖರತೆ ಎಷ್ಟೆಂದರೆ ಆನೆಯ ಮೈಯನ್ನು ಒಂದು ಸಣ್ಣ ಸೊಳ್ಳೆ ಕಡಿದಂತೆ ಮಾತ್ರ. ಮತಾಂತರದ ಹೆಸರಿನಲ್ಲಿ ನಡೆಯುವ ಮೋಸ, ವಂಚನೆ, ಕುಟಿಲತೆ, ಕಾರಸ್ಥಾನ, ಗೂಢಚರ್ಯೆಗಳನ್ನು ಗಮನಿಸಿದರೆ ಇನ್ನೂ ಉಗ್ರವಾದ ವಿರೋಧವೇನಾದರೂ ಬೇಕೆನಿಸುತ್ತದೆ.

ಓಂಪ್ರಕಾಶ ತ್ಯಾಗಿಯವರ ಈ ಖಾಸಗಿ ಮಸೂದೆ ಮತಾಂತರವನ್ನೇನೂ ನಿಷೇಧಿಸದು. ಆಮಿಷ, ಮೋಸ, ವಂಚನೆ, ಬಲಾತ್ಕಾರ, ಬೆದರಿಕೆಗಳಿಂದಾಗುವ ಮತಾಂತರವನ್ನು ತಡೆಗಟ್ಟಬಯಸುತ್ತದೆ. ಹೇಗಾದರೂ ಮಾಡಿ ಜನಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶವನ್ನು ಇರಿಸಿಕೊಂಡಿರುವ ಕ್ರೈಸ್ತ ಮತ ಬೋಧಕರು ಬಳಸುವ ದಾರಿ ಒಂದೊಂದಲ್ಲ. "ಯಾವ ದಾರಿಯಾದರೇನು, ಮಾನವೀಯ ಸೇವೆಗಳನ್ನು ಮಾಡುವರು, ಅನಾಥರ, ರೋಗಿಗಳ, ದೀನ-ದುರ್ಬಲರ ಸೇವೆ ಮಾಡುವರು" ಎಂದು ಕೆಲವರ ವಾದ. ಧಾರ್ಮಿಕ ಆಚರಣೆ, ನಂಬಿಗೆ ತೀರಾ ವೈಯಕ್ತಿಕ ; ವೈದ್ಯಕೀಯ ಸೌಲಭ್ಯ, ಶಿಕ್ಷಣ, ಆಶ್ರಯ ಮುಂತಾದ ಮಾನವೀಯ ಸೇವೆಗಳನ್ನು ಮುಂದುಮಾಡಿ, ಧಾರ್ಮಿಕ ಮತಾಂತರ ಮಾಡುವುದು ಮಾನವೀಯತೆಗೆ ಮಾಡುವ ಮಹಾನ್ ಅಪಚಾರ.

"ಹಿಂದೂ ಸ್ವಾಮಿಗಳು ಅಥವಾ ಧರ್ಮಪ್ರಚಾರಕರು ತಾವು ಹಳ್ಳಿಗಳಿಗೆ ಹೋಗಿ ಧರ್ಮಪ್ರಚಾರ, ಸೇವಾಕಾರ್ಯ ಮಾಡರು. ಕ್ರೈಸ್ತ ಮಿಶನರಿಗಳು ಮಾತ್ರ ಮಾಡುತ್ತಾರೆ. ಅವರಲ್ಲಿ ಹೆಚ್ಚಿನ ತ್ಯಾಗವಿದೆ." ಎಂದು ಓರ್ವ ಕ್ರೈಸ್ತ ವಾಚಕರು ಟೈಮ್ಸ್ ಆಫ್ ಇಂಡಿಯಾದಲ್ಲಿ ಬರೆದ ಪತ್ರವನ್ನು ಓದಿದೆ. ಕ್ರೈಸ್ತ ಮಿಶನರಿಗಳು ಮಾಡುವ ಕೆಲಸಕ್ಕೆ ಹೆಚ್ಚು ಹೆಚ್ಚು ಹಣ ಬರುತ್ತದೆ; ಅವರ ಕಾರ್ಯಕ್ಕೆ ಹಣದ ಹೊಳೆ ವಿದೇಶಗಳಿಂದ ಹರಿದು ಬರುತ್ತಿದೆ. ಪ್ರತಿಯೊಂದು

Digitalized by e-Sahithya Documentation Forum
Sponsored by Sarayu Foundation Trust

ಚರ್ಚ್ ವಿದೇಶೀ ಸಂಸ್ಥೆಯೊಡನೆ ಸಂಬಂಧವಿಟ್ಟುಕೊಂಡಿರುವದರಿಂದ ಇಲ್ಲಿ ಮತಾಂತರ ಮಾಡಲಿಕ್ಕೆ ಅಲ್ಲಿಂದ ಹಣ ಸಂದಾಯವಾಗುತ್ತದೆ. ಮತಬೋಧಕರು ಬಂದ ಹಣ ವ್ಯಯಿಸಲು ಸಾಧನದ್ವಾರಗಳೇ ವಿನಾ ಅವರೇನು ಕಷ್ಟಪಟ್ಟು ಗಳಿಸರು. ತಮ್ಮ ತಾಯಿತಂದೆ ಬಂಧುಬಳಗದ ಮೋಹವನ್ನು ಹರಿದೊಗೆದು, ಧರ್ಮ ಪ್ರಸಾರ, ಧರ್ಮಜಾಗೃತಿಯ ಕೈಂಕರ್ಯ ಹೊತ್ತು ಹೊರಡುವ ಅನೇಕ ಹಿಂದೂ ಸನ್ಯಾಸಿಗಳು ಭಿಕ್ಷೆ ಬೇಡುತ್ತ, ಕಾಲುನಡಿಗೆ ನಡೆಯುತ್ತ ಕೈಲಾಗ ಧರ್ಮಪ್ರಚಾರ ಮಾಡುವುದನ್ನು ಕಾಣುತ್ತೇವೆ.

ವಿದೇಶೀ ಮೂಲಗಳಿಂದ ಹಣ ಬರುವುದಷ್ಟೇ ಅಲ್ಲ, ಕ್ರಿಸ್ತೀಯರು ತಮ್ಮ ಧರ್ಮಸಂಸ್ಥೆಗಳಿಗೆ, ಮಾನವೀಯ ಸೇವಾ ಕಾರ್ಯ ಮಾಡುವ ಸೇವಾ ಸಂಸ್ಥೆಗಳಿಗೆ ಎಷ್ಟು ಧನಸಹಾಯ ಮಾಡುವರೋ ಆ ಪ್ರಮಾಣದಲ್ಲಿ ಹಿಂದೂ ಸಿರಿವಂತರು ದಾನ ಮಾಡರು. ಇವರಿನ್ನೂ ಶಿಲಾವಿಗ್ರಹಗಳಿಗೆ ವಜ್ರದ ಕಿರೀಟ, ದೇವಾಲಯ ಗಳಿಗೆ ಚಿನ್ನದ ಕಳಸ, ಯಜ್ಞಯಾಗಗಳಲ್ಲಿ ತುಪ್ಪ - ಪೀತಾಂಬರಗಳ ಹೋಲು ಮುಂತಾದ್ದರಲ್ಲಿಯೇ ಆಸಕ್ತರು. ಇಂಥ ಹಿನ್ನೆಲೆಯಲ್ಲಿ ಹಿಂದೂ ತತ್ತ್ವ ಪ್ರಸಾರ ಕರು ವೈಚಾರಿಕ ಜಾಗೃತಿ ಉಂಟು ಮಾಡಿ, ಜನರ ಆದರ್ಶಗಳನ್ನು ಹಣವನ್ನು ಮಾನವೀಯ ಸೇವೆ, ಶಿಕ್ಷಣ ಪ್ರಸಾರದತ್ತ ಹರಿಸಲು ಬಹಳಷ್ಟು ಶ್ರಮಿಸಬೇಕಾಗು ತ್ತದೆ. ಕ್ರೈಸ್ತ ಮಿಶನರಿಗಳಿಗೆ ಸಿಕ್ಕ ಧನಸಹಾಯ, ನಿರಂತರ ಮಾಸಿಕ ವೇತನ, ಹೆಚ್ಚಿನ ಕಾರ್ಯಕ್ಕೆ ಭಕ್ಷೀಸು ಮುಂತಾದ್ದು ಸಿಕ್ಕರೆ ಕಷ್ಟಸಹಿಷ್ಣುಗಳಾದ ಹಿಂದೂ ಪ್ರಸಾರಕರು ಅದ್ಭುತವಾಗಿ ದುಡಿಯದೆ ಇರರು.

ಕ್ರೈಸ್ತ ಧರ್ಮ ಬೋಧಕರು ಅನುಸರಿಸುವ ಕೆಲ ವಿಧಾನಗಳಂತು ತೀರಾ ಅನ್ಯಾಯ, ಅಂತರಾತ್ಮವಿರೋಧಿ ಚಟುವಟಿಕೆಗಳು. ಒಮ್ಮೆ ಒಬ್ಬ ಮುದುಕ ಹೇಳಿದ: "ಮತಾಂತರಗೊಳ್ಳುವಾಗ ಹಣದ ಆಮಿಷ ತೋರಿದರು. ಕೆಲಸ ಕೊಡಿಸುವುದಾಗಿ ಹೇಳಿದರು. ಸಂಸಾರ ಸಮೇತ ಮತಾಂತರಗೊಂಡೆ; ಮಾತೃಸಮಾಜವೂ ಬಹಿಷ್ಕಾರ ಹಾಕಿತು. ಒಂದು ತಿಂಗಳಷ್ಟೇ ಕಾಳಜಿ ಮಾಡಿ ನಂತರ ಕೈಬಿಟ್ಟರು. ಈಗ ಅತ್ತಲೂ ಇಲ್ಲ; ಇತ್ತಲೂ ಇಲ್ಲ ..." ಹಿಂದೂ ಸಮಾಜ one way ರಸ್ತೆ ಆಗಿರುವ ದೌರ್ಬಲ್ಯವೊಂದು ಕ್ರಿಸ್ತೀಯರ ಮತಾಂತರ ಕಾರ್ಯಕ್ಕೆ ಹೆದ್ದಾರಿ. ತೀರಾ ಮೊನ್ನೆಮೊನ್ನೆ ನಡೆದುದು: ಒಂದು ಹೊಲದಲ್ಲಿ ಕೂಲಿ ಕೆಲಸಕ್ಕೆ ತೆಗೆದು ಕೊಳ್ಳಲು ಮತಾಂತರವಾಗಬೇಕೆಂದು ಕರಾರು ಹಾಕಿದರಂತೆ. ನಿರಂತರ ಕೂಲಿ ಸಿಕ್ಕುವುದಾದರೆ ಆಗಬಾರದೇಕೆ ಎಂದು ಗಂಡಹೆಂಡಿರ ನಡುವೆ ವಾದವಿವಾದ. ಇದು ತೀರಾ ಅನ್ಯಾಯ. 10 k. g. ಅಕ್ಕಿಗಾಗಿ, ಐದು ರೂಪಾಯಿ ಕೂಲಿಗಾಗಿ, ಮತಾಂತರ ಮಾಡುತ್ತ ಹೋದರೆ ಪವಿತ್ರವಾದ ಧರ್ಮಕ್ಕೆ ಯಾವ ಬೆಲೆ ಉಳಿದೀತು?

ಓಂಪ್ರಕಾಶ ತ್ಯಾಗಿಯವರ ಮಸೂದೆಯು ಯಾವುದೇ ಒಂದು ಧರ್ಮವನ್ನು ಕುರಿತು ಹೇಳುತ್ತಿಲ್ಲ. ಒತ್ತಾಯದ ಮತಾಂತರ ಸಲ್ಲದು ಎಂದು ಹೇಳುತ್ತಿದ್ದರೆ, ಕೇವಲ ಕ್ರೈಸ್ತ ಮುಖಂಡರು ಮಾತ್ರ ಏಕೆ ಪ್ರತಿಭಟಿಸಬೇಕು? ಇಸ್ಲಾಂ, ಬೌದ್ಧ ಮುಂತಾದ ಅನೇಕ ಧರ್ಮಗಳು ಮತಾಂತರಕ್ಕೆ ಅವಕಾಶ ನೀಡುವವು. ಹೀಗಿದ್ದರೂ ಅವರು ಪ್ರತಿಭಟಿಸಿಲ್ಲ. ಅಮಾಯಕರಾದ, ಮುಗ್ಧ ಅನಕ್ಷರತೆಯ ಜನತೆಯ ಅಜ್ಞಾನವನ್ನು ಆಹಾರವಾಗಿ ಮಾಡಿಕೊಂಡು ಮತಾಂತರ ರಾಕ್ಷಸ ಕಬಂಧ ಬಾಹು ಗಳನ್ನು ಚಾಚುತ್ತ ಹೋದರೆ ಅದು ದೈವದ್ರೋಹವಲ್ಲವೆ?

ಸಾಮಾನ್ಯ ಕ್ರಿಸ್ತೀಯರು ತಾತ್ತ್ವಿಕವಾದ ಪ್ರಶ್ನೋತ್ತರಗಳ ಮುಖಾಂತರ ಪರಿವರ್ತನೆ ಮಾಡುವುದಕ್ಕಿಂತಲೂ, ಆಮಿಷಗಳ ಮುಖಾಂತರ ಮಾಡುವುದೇ ಹೆಚ್ಚು. ತತ್ತ್ವಜ್ಞಾನ, ಯೋಗ, ಧ್ಯಾನ ಮುಂತಾದ ರಂಗದಲ್ಲಿ ಹಿಂದೂ ತತ್ತ್ವ ಗಳೊಡನೆ ಸ್ಪರ್ಧಿಸಲಾರರು. ಜಾತಿ ಪದ್ಧತಿ, ಬಡತನ, ಆಗಾಗ ಒದಗುವ ಕ್ಷಾಮ ಡಾಮರ, ಗ್ರಾಮಾಂತರ ಆರ್ಥಿಕ ಸೌಲಭ್ಯ—ಈ ಮುಂತಾದವೇ ಅವರ ಸಲಕರಣೆ. ಅತ್ಯಂತ ಪ್ರಬಲವಾದ ಅವರ ಅಸ್ತ್ರ ಕಾನ್ವೆಂಟ್ ಶಿಕ್ಷಣ. ಹಿಂದೂ ಮಕ್ಕಳಿಗೆ 'ಕುಂಕುಮ ಧರಿಸಬಾರದು, ಬಳೆ ತೊಡಬಾರದು, ಹೂ ಮುಡಿಯಬಾರದು' ಎಂದು ಹೇಳುವುದು. ಮನೆಯಿಂದ ಹಾಕಿ ಕಳಿಸಿದರೆ ಛೇಡಿಸಿ ಅಳಿಸುವುದು; ಇವೆಲ್ಲ ಧರ್ಮ ಬಾಹಿರ. ಸರ್ಕಾರದ ಒಪ್ಪಿಗೆಯೊಡನೆ ಸರ್ಕಾರಕ್ಕೆ ಒಪ್ಪಿತವಾದ ಶಿಕ್ಷಣ ಕೊಡುವ ಕರ್ತವ್ಯ ಅವರದೇ ವಿನಾ, ವೈಯಕ್ತಿಕ ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳಿಗೆ ಅವರು ಕೈಹಾಕಕೂಡದು. ಈ (ದಡ್ಡ) ಹಿಂದೂಗಳು ತಮ್ಮ ದುಡ್ಡು ಸುರಿದು, ತಮ್ಮ ಮಕ್ಕಳಿಗೆ ಅವರ ಸಂಸ್ಕೃತಿ ಕಲಿಸಿ ಹೆಮ್ಮೆಯಿಂದ ಬೀಗುತ್ತಾರೆ. ಭಾನುವಾರದಂದು ಮನೆಯಲ್ಲಿ ಮಕ್ಕಳು ತುಂಟಾಟ ಮಾಡುವರೆಂದು ಬೈಬಲ್ ಪಾಠಕ್ಕೆ ಕಳಿಸುತ್ತಾರೆ. ಏನೇನೋ ಕಲಿಯುವುದಕ್ಕಿಂತ ಏನನ್ನೂ ಕಲಿಯದಿರುವುದು ಅತ್ಯಂತ ಉತ್ತಮ; ಈ ಎಲ್ಲ ಒಳದಾರಿ ಅಡ್ಡದಾರಿಗಳನ್ನು ಕ್ರೈಸ್ತ ಮತ ಬೋಧಕರು ಹಿಡಿಯುತ್ತಾರೆಂದೇ ಇಸ್ರೇಲ್ ಮುಂತಾದ ದೇಶಗಳು ಸಂಪೂರ್ಣವಾಗಿ ಮತಾಂತರವನ್ನು ಬಹಿಷ್ಕರಿಸಿವೆ. ಅಲ್ಲಿ ಮತಾಂತರದ ಪ್ರಸಂಗಗಳಲ್ಲಿ ಮಾಡಿಸಿಕೊಂಡವರು, ಮಾಡಿದವರು ಶಿಕ್ಷಾರ್ಹರಾಗುತ್ತಾರೆ.

ಮಸೂದೆ ಜಾರಿಗೆ ಬಂದರೆ ಅಲ್ಪಸಂಖ್ಯಾತರಿಗೆ ಧಕ್ಕೆಯಾಗುತ್ತದೆ ಎಂಬ ವಾದವನ್ನು ಕ್ರೈಸ್ತ ಮುಖಂಡರು ಮಾಡುವುದರಲ್ಲಿ ಅರ್ಥವಿದೆಯೆ? ಅನಕ್ಷರಸ್ಥ ಬಡ, ಅವಿದ್ಯಾವಂತ, ಅಲ್ಪಸಂಖ್ಯಾಕ, ನಿಮ್ನ ವರ್ಗದ ಹಿಂದುಗಳು ತಮಗರಿವಿಲ್ಲದೆ ಮತಾಂತರದ ಬಲೆಯೊಳಗೆ ಸಿಕ್ಕಾಗ, ನಂತರ ಪಶ್ಚಾತ್ತಾಪ ಪಟ್ಟು ಪಾರಾಗ ಬೇಕೆಂದರೂ ಸಾಧ್ಯವಿಲ್ಲದೆ ತೊಳಲಾಡುತ್ತಾರೆ. ಪ್ರಾಯಸ್ಕಳಾದ ಓರ್ವ ತರುಣಿ ತಾನು ಮೆಚ್ಚಿದ ತರುಣನೊಂದಿಗೆ ಪ್ರೇಮಿಸಿ ಹೋದರೆ ಪ್ರಾಪ್ತ ವಯಸ್ಕಳಾಗಿರು

Digitalized by e-Sahithya Documentation Forum
Sponsored by Sarayu Foundation Trust

ವದರಿಂದ ಪ್ರೇಮ ವಿವಾಹ ಅದಾಗುತ್ತನೆ. ಅಪರಾಧವಾಗದು. ಅದೇ ಅಪ್ರಾಪ್ತ ವಯಸ್ಕಳಾದ ಹುಡುಗಿಯನ್ನು ಓಡಿಸಿಕೊಂಡು ಹೋದರೆ ಅದು ಅಪಹರಣ kidnapping ಆಗಿ ಶಿಕ್ಷಾರ್ಹವಾಗುತ್ತದೆ. ಹಾಗೆ, ಅರಿತು ಕ್ರೈಸ್ತ ತತ್ತ್ವಗಳನ್ನು ಅನುಷ್ಠಾನಿಸುವ ಉದ್ದೇಶದಿಂದ ಒಬ್ಬ ಮತಾಂತರ ಹೊಂದಿದರೆ ಅಪರಾಧವಲ್ಲ. ಇಂಥ ಸ್ವಾತಂತ್ರ್ಯ ಮನುಷ್ಯನಿಗೆ ಬೇಕು. ಆದರೆ ತನಗೇ ಅರಿವಿಲ್ಲದ ಅಪ್ರಾಪ್ತ ಬುದ್ಧಿಯವನನ್ನು ಮತಾಂತರಿಸಿ ದಾರಿ ತಪ್ಪಿಸುವುದು ದೈವದ್ರೋಹ, ಧರ್ಮದ್ರೋಹ. ಬಹುಶಃ ಇಂಥ ಸಮಾಜ ಕಟ್ಟುವ ಆಕಾಂಕ್ಷೆ ಏಸುವಿಗೆ ಇದ್ದಿರಲಿಕ್ಕಿಲ್ಲ. ಪ್ರವಾದಿಗಳು ಬಯಸುವದು ಸತ್ಪಥದಲ್ಲಿ ಸಾಗಬಯಸುವ ಜನರ ಸಂಖ್ಯೆಯ ಹೆಚ್ಚಳವನ್ನೇ ವಿನಾ ಖಾನೆಷುಮಾರಿ ಜನರ ಹೆಚ್ಚಳವನ್ನಲ್ಲ. ಆದ್ದರಿಂದ ರಾಷ್ಟ್ರದ ಹಿತದೃಷ್ಟಿಯಿಂದಲೂ ಒತ್ತಾಯದ, ಆಸೆ-ಆಮಿಷಗಳ ಮತಾಂತರ ತಡೆಗಟ್ಟಬೇಕಾದ್ದು ಅತ್ಯಾವಶ್ಯಕ. ಈ ವಿಷಯದಲ್ಲಿ ರಾಜಕೀಯ ಸಲ್ಲ. ಧರ್ಮವು ಒಂದು ವ್ಯಾಪಾರಿ ಕ್ರಿಯೆಯಾಗುವುದನ್ನು ತಡೆಗಟ್ಟಬೇಕು. ಹಿಂದೂ ದೇಶ ಭವ್ಯವಾದ ಪರಂಪರೆ(ಕೆಲವಾರು ಮೂಢನಂಬಿಕೆ, ಜಾತಿ ವ್ಯವಸ್ಥೆ ಬಿಟ್ಟು)ಯನ್ನುಳ್ಳದು. ವಿಚಾರವಾದ, ಏಕದೇವೋಪಾಸನೆ, ಸಮತೆ ಬೋಧಿಸುವ ಉಪನಿಷತ್ ಋಷಿಗಳು, ಬಸವಣ್ಣನವರು, ದಯಾನಂದ ಸರಸ್ವತಿಯವರು, ತಿರುವಳ್ಳುವರು ಮುಂತಾದ ಅನೇಕ ಮಹಾನುಭಾವರ ವಿಚಾರಧಾರೆಗಳು ಇಲ್ಲಿವೆ. ಹಿಂದೂ ತತ್ತ್ವವೆಂದರೆ ಕೇವಲ ಮೂಢನಂಬಿಕೆ, ಜಾತೀಯತೆ ಎಂದು ನಾವು ತಲೆ ಕೆಳಗೆ ಹಾಕಬೇಕಾದುದಿಲ್ಲ. ಅತ್ಯಂತ ಸುಂದರ, ಬಂಧುರ ಪರಂಪರೆಯುಳ್ಳ ಹಿಂದೂ ತತ್ತ್ವ ಉಳಿದಿರುವುದು ಈ ನೆಲದಲ್ಲಿ. ಅಕಸ್ಮಾತ್ ಕ್ರೈಸ್ತ ಧರ್ಮ ಭರತಖಂಡದಲ್ಲಿ ಉಳಿಯದಿದ್ದರೆ (ಹಾಗಾಗದಿರಲಿ. ಅವರು ಚಿರಾಯುಗಳಾಗಲಿ) ಆ ಧರ್ಮವೇನೂ ನಾಶವಾಗದು, ಸಮಾಜ ಇಲ್ಲವಾಗದು. ಅನೇಕ ರಾಷ್ಟ್ರಗಳಲ್ಲಿ ಅದು ಬೇರು ಬಿಟ್ಟಿದೆ. ಕಾರಣಾಂತರದಿಂದ ಮುಸ್ಲಿಂ ಧರ್ಮ ಅಳಿದರೆ (ಅವರೂ ಚಿರಾಯುಗಳಾಗಲಿ) ಭೂಪಟದಿಂದ ಇಸ್ಲಾಂ ಧರ್ಮ ಅಳಿಸದು. ಅದನ್ನು ಅಳವಡಿಸಿಕೊಂಡ ಅನೇಕ ರಾಷ್ಟ್ರಗಳಿವೆ. ಆದರೆ ಹಿಂದೂ ಸಮಾಜ ಈ ನೆಲದಲ್ಲಿ ಅನೇಕರಿಂದ ತುಳಿಯಲ್ಪಟ್ಟು, ಹತ್ತಿಕ್ಕಲ್ಪಟ್ಟು ನಾಶವಾದರೆ (ಬಸವ ಕೃಪೆಯಿಂದ ಹಾಗಾಗದಿರಲಿ) ಇನ್ನೆಲ್ಲೂ ಇದಕ್ಕೆ ಸ್ಥಾನವಿಲ್ಲ, ಇತಿಹಾಸ ಪುಸ್ತಕ ಮತ್ತು ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಬಿಟ್ಟು. ಇಂಥ ಗಂಭೀರ ಪ್ರಸಂಗ ಸನಿಹದಲ್ಲಿದೆ. **"ಆಕ್ರಮಣ ಮಾಡದಿದ್ದರಷ್ಟೇ ; ಆತ್ಮರಕ್ಷಣೆ ಮಾಡಿಕೊಳ್ಳಲಾದರೂ ಹಿಂದುಗಳು ಕಲಿಯಲಿ. ಪ್ರತೀಕಾರ ಮಾಡದಿದ್ದರಷ್ಟೇ ಪ್ರತಿಭಟನೆ ಮಾಡಲಿಕ್ಕಾದರೂ ಹಿಂದುಗಳು ಕಲಿಯಲಿ."** "ಈ ವಿಷಯದಲ್ಲಿ ರಾಜಕಾರಣಿಗಳು ತೀರಾ ಅನ್ಯಾಯ ಮಾಡದಿರಲಿ." ಈ ನೆಲದಲ್ಲಿ ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಳ್ಳುವ, ಹಿಂದುಗಳು ಉಸಿರಾಡುವ ಹಕ್ಕನ್ನು ಪಡೆದಿದ್ದಾರೆ," ಎಂಬುದನ್ನಾದರೂ ಕ್ರಿಸ್ತೀಯರು ಅರಿಯಲೆಂದು ಹಾರೈಸುವೆ. ★

ದಾಂಪತ್ಯ ಧರ್ಮ - 3

ಕರ್ನಾಟಕದ ಗಾಂಧಿ, ರಾಷ್ಟ್ರಧರ್ಮ ದ್ರಷ್ಟಾರ
ಶ್ರೀ ಹರ್ಡೇಕರ್ ಮಂಜಪ್ಪನವರ ವಿಚಾರಗಳು

ಪತಿಯ ಕರ್ತವ್ಯ

ವಿವಾಹದ ಉದ್ದೇಶ ಮತ್ತು ಪದ್ಧತಿಗಳನ್ನು ಕುರಿತು ಕಳೆದ ಎರಡು ಪ್ರಕರಣಗಳಲ್ಲಿ ಸಂಕ್ಷಿಪ್ತವಾಗಿ ವಿವೇಚಿಸಿದ್ದಾಯಿತಷ್ಟೆ. ಆ ಸಂಗತಿಗಳು ದಾಂಪತ್ಯ ಧರ್ಮಕ್ಕೆ ಪ್ರತ್ಯಕ್ಷ ಸಂಬಂಧವಾದವುಗಳೇನೂ ಅಲ್ಲ. ಆದರೆ ದಾಂಪತ್ಯ ಧರ್ಮವು ದಂಪತಿಗಳಿಂದ ತೃಪ್ತಿಕರವಾಗಿ ಆಚರಿಸಲ್ಪಡಬೇಕಾಗಿದ್ದರೆ ಆ ವಿಷಯಗಳನ್ನು ಉಪೇಕ್ಷಿಸಲಿಕ್ಕೆ ಬರುವುದಿಲ್ಲ. ಏಕೆಂದರೆ ದಾಂಪತ್ಯ ಧರ್ಮವನ್ನು ಆಚರಿಸಲು ಪ್ರತಿಕೂಲವಾಗುವ ಪದ್ಧತಿಯಲ್ಲಿಯೇ ವಿವಾಹವಾಗುತ್ತಿದ್ದರೆ ಆಗ ದಂಪತಿಗಳಾದರೂ ಏನು ಮಾಡುವರು ?

ಅಂತೆಯೇ ವಿವಾಹವಾಗುವಾಗಲೇ ದಾಂಪತ್ಯ ಧರ್ಮವನ್ನನುಸರಿಸಲು ಅನುಕೂಲವಾದ ಉದ್ದೇಶ ಮತ್ತು ಪದ್ಧತಿಗಳನ್ನಿಟ್ಟುಕೊಂಡಿರಬೇಕು. ಒಕ್ಕಲತನದ ವಿದ್ಯೆಯನ್ನು ಕಲಿತ ಮಾತ್ರದಿಂದ ಒಳ್ಳೆಯ ಬೆಳೆಯನ್ನು ಹೊಂದಲಿಕ್ಕಾಗುವುದೆ? ಆ ತನ್ನ ವಿದ್ಯೆಯು ಕಾರ್ಯರೂಪದಲ್ಲಿ ಬರಲಿಕ್ಕೆ ಬೀಜ, ಹೊಲ, ಗೊಬ್ಬರ ಮೊದಲಾದ ಉಪಕರಣಗಳೆಲ್ಲಾ ಒಳ್ಳೆಯವುಗಳಾಗಿರಬೇಕಾದುದೂ ಅಗತ್ಯವಾಗಿಲ್ಲವೇ? ಅದೇ ಪ್ರಕಾರ ದಾಂಪತ್ಯ ಧರ್ಮವು ತೃಪ್ತಿಕರವಾಗಿ ಜರುಗಬೇಕಾದರೆ ಅದಕ್ಕೆ ಕಾರಣವಾಗಿರತಕ್ಕ ದಂಪತಿಗಳು ಮೊದಲು ಸರಿಯಾದವರಿರಬೇಕಲ್ಲವೆ? ಲಗ್ನವಾದರೂ ಅಂತಹ ಸರಿಯಾದ ದಂಪತಿಗಳನ್ನು ಜೊತೆಗೊಳಿಸುವ ಪವಿತ್ರ ಕಾರ್ಯವೇ ಸರಿ. ಅದುದರಿಂದ ದಾಂಪತ್ಯ ಧರ್ಮವನ್ನನುಸರಿಸಲಿಚ್ಛಿಸುವವರು ಮೊದಲು ವಿವಾಹದ ಉದ್ದೇಶ ಮತ್ತು ಪದ್ಧತಿಗಳ ಕಡೆಗೆ ಲಕ್ಷಿಸುವುದು ಅಗತ್ಯವಾಗಿದೆ. - ಅಂತೆಯೇ ಮೊದಲು ಆ ಸಂಗತಿಗಳು ಪ್ರಸ್ತಾಪಿಸಲ್ಪಟ್ಟಿವೆ.

ದಂಪತಿಗಳ ಕರ್ತವ್ಯಗಳಲ್ಲಿ ಪತಿಯು ಸತಿಗಾಗಿಯೂ, ಸತಿಯು ಪತಿಗಾಗಿಯೂ ಮಾಡತಕ್ಕವುಗಳೂ ಕೆಲವಿವೆ. ಅವುಗಳನ್ನೇ ಅವರು ತೃಪ್ತಿಕರವಾಗಿ ನಡೆಯಿಸ

Digitalized by e-Sahithya Documentation Forum
Sponsored by Sarayu Foundation Trust

ಎರಡೂ ರೆಕ್ಕೆಗಳು ಸರಿಯಾಗಿದ್ದರಲ್ಲವೇ ಅದು ಹಾರಾಡಿ ಜೀವಿಸುವುದು. ಬಂಡಿಯ ಎರಡು ಗಾಲಿಗಳಲ್ಲಿ ಒಂದರ ಹಳಿ ಕಳಚಿಬಿದ್ದರೆ ಆ ಬಂಡಿಯು ಬಂಡಾಟವೆಷ್ಟು ?

ಸತಿಪತಿಗಳಲ್ಲಿ ಅವರವರ ಕರ್ತವ್ಯಗಳ ಜ್ಞಾನವೇ ಇಲ್ಲದಿದ್ದ ಮೇಲೆ ಆ ಸಂಸಾರ ನಿಸ್ಸಾರವಾಗುವುದು ಆಶ್ಚರ್ಯವೆ ? ಆದಕಾರಣ ಮೊದಲು ಸತಿಪತಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ಚೆನ್ನಾಗಿ ತಿಳಿದುಕೊಂಡು ಆ ಪ್ರಕಾರ ಆಚರಿಸಲು ಸಿದ್ಧರಾಗಬೇಕು.

ಸತಿಯ ವಿಷಯದಲ್ಲಿ ಪತಿಯ ಕರ್ತವ್ಯವಿದೆಯೆಂಬ ಕಲ್ಪನೆಯು ಕೂಡ ಅನೇಕರಿಗಿಲ್ಲ. ಪತಿಯ ಸಂಬಂಧವಾಗಿ ಸತಿಯು ನಡೆದುಕೊಳ್ಳಬೇಕಾದ ರೀತಿ-ನೀತಿಗಳನ್ನೇ ಅನೇಕರು ಬಲ್ಲರು. ಪತಿಯೇ ದೇವರೆಂದು ಸತಿಯು ತಿಳಿಯಬೇಕೆಂಬ ಅಪ್ಪಣೆಯಿದೆಯೇ ವಿನಾ ಸತಿಯು ದೇವಿಯೆಂದು ಪತಿಯು ತಿಳಿಯಬೇಕಾಗಿ ಹೇಳಿರುವುದು ಅಪರೂಪವಲ್ಲವೇ ? ಸತಿಯು ಪತಿವ್ರತೆಯಾಗಿರಬೇಕಾದುದು ಅವಳ ಪವಿತ್ರವಾದ ಪ್ರಥಮ ಕರ್ತವ್ಯವೆಂದು ಹೇಳಿರುವುದುಂಟು. ಆದರೆ ಪತಿಯು ಸತಿವ್ರತನಾಗಿರಬೇಕೆಂದು ಹೇಳಿರುವುದು ವಿರಳವಲ್ಲವೆ ?

ಆದುದರಿಂದಲೇ ಸತಿಯ ವಿಷಯದಲ್ಲಿ ಪತಿಯ ಕರ್ತವ್ಯಗಳಿವೆಯೆಂಬ ಕಲ್ಪನೆಯು ಕೂಡ ಬಹು ಜನರಲ್ಲಿಲ್ಲ. ಇದು ತಪ್ಪು. ಇಷ್ಟೇ ಅಲ್ಲ, ಅನರ್ಥಕರವಾದ ಅನ್ಯಾಯ. ಪತಿಯು ತನ್ನ ಸತಿಯು ಪತಿವ್ರತೆಯಿರಬೇಕೆಂದು ಹೇಗೆ ಇಚ್ಛಿಸುತ್ತಾನೆಯೋ ಹಾಗೆಯೇ ಪತಿಯು ಸತಿವ್ರತನಾಗಿರಲೇಬೇಕೆಂದು ಅಪೇಕ್ಷಿಸಲು ಸತಿಯು ಅಧಿಕಾರವುಳ್ಳವಳಾಗಿದ್ದಾಳೆಂತಲೂ ತಿಳಿಯಬೇಕು. ಹಾಗಾದರೇನೇ ದಾಂಪತ್ಯ ಧರ್ಮವು ಆಚರಣೆಯಲ್ಲಿ ಬರುವುದು.

ಪುರುಷನು ಈ ವಿಷಯದಲ್ಲಿ ತಾನು ಹೆಚ್ಚು ಅಧಿಕಾರವುಳ್ಳವನಾಗಿದ್ದೇನೆಂದು ತಿಳಿಯುವುದು ಅನ್ಯಾಯ. ಪುರುಷನೂ ಕೂಡ ಏಕಪತ್ನೀವ್ರತಸ್ಥನಾಗಿರಬೇಕಾದುದು ಪವಿತ್ರವಾದ ಪ್ರಥಮ ಕರ್ತವ್ಯವೆಂದೇ ತಿಳಿಯಬೇಕು. ತಾನು ಈ ವ್ರತವನ್ನು ಭಂಗಗೊಳಿಸಿದರೆ ವಿವಾಹ ಕಾಲದಲ್ಲಿ ತಾನು ತನ್ನ ಸತಿಗೆ ಬಹುಜನಗಳ ಮಧ್ಯದಲ್ಲಿ ಕೊಟ್ಟ ವಚನವನ್ನು ಮೀರಿದಂತಾಯಿತು. ಆ ತನ್ನ ಅರ್ಧ ಶರೀರಕ್ಕೆ ದ್ರೋಹ ಮಾಡಿದಂತಾಯಿತು. ತಾನೇನೋ ಗಂಡು. ಹೇಗೆ ನಡೆದರೂ ಅಡ್ಡಿ

ಯಿಲ್ಲವೆಂದು ತಿಳಿದು ತಪ್ಪುದಾರಿಯಲ್ಲಿ ಆಚರಿಸಿದ್ದಾದರೆ ದಾಂಪತ್ಯ ಧರ್ಮವನ್ನು ಮೀರಿದಂತೆಯೇ ಸರಿ.

ಹೆಂಡತಿಯನ್ನು ಕಡ್ಡಿಗಿಂತ ಕಡೆಯಾಗಿ ಕಾಣುವುದು, ಸಾಕಿದ ಪಶುಗಳಿಗಿಂತ ಹೀನವಾಗಿ ತಿಳಿಯುವುದು, ಅವಳ ಇಚ್ಛೆ, ಕೊರತೆ, ಬೇನೆ, ಬೇಸರಿಕೆ ಮೊದಲಾದವುಗಳ ಕಡೆಗೆ ನಿರ್ಲಕ್ಷಿಸುವುದು ಇವೆಲ್ಲಾ ದಾಂಪತ್ಯ ಧರ್ಮಕ್ಕೆ ವಿರೋಧವಾದ ಪತಿಯ ನಡವಳಿಕೆಗಳು. ಹೀಗೆ ಹೆಂಡತಿಯನ್ನು ಕೆಲವರು ಕೀಳಾಗಿ ಕಾಣುತ್ತಿದ್ದರೆ ಕೆಲವರು ಹೆಂಡತಿಯೇ ಸರ್ವಸ್ವವೆಂದು ತಿಳಿದು ಅವಳ ಅಪ್ಪಣೆಯಂತೆಯೇ ನಡೆಯುತ್ತಿರುವುದೂ ಉಂಟು.

ಹೀಗೆ ಹೆಂಡತಿಯನ್ನು ಸೇವಕಳನ್ನಾಗಿಯಾಗಲಿ ಅಥವಾ ಯಜಮಾನಿಯನ್ನಾಗಿಯಾಗಲಿ ತಿಳಿದರೆ ದಾಂಪತ್ಯ ಧರ್ಮಕ್ಕೆ ಲೋಪ ಬರುತ್ತದೆ. ಆದಕಾರಣ ಹೆಂಡತಿಯು ಸೇವಕಳೂ ಅಲ್ಲ, ಯಜಮಾನಿಯೂ ಅಲ್ಲ, ಮಿತ್ರಳೆಂದು ತಿಳಿದು ಅವಳ ಸಂಗಡ ನಡೆದುಕೊಳ್ಳಬೇಕಾದುದು ಪತಿಯ ಕರ್ತವ್ಯ.

ತನ್ನ ಸತಿಯು ತನಗೆ ಮಿತ್ರಳೆಂದು ತಿಳಿದಮೇಲೆ ತಾನು ತನ್ನ ಮಿತ್ರರೊಂದಿಗೆ ಹೇಗೆ ಪ್ರೇಮಾದರಗಳಿಂದ ನಡೆದುಕೊಳ್ಳುತ್ತಾನೆಯೋ ಹಾಗೆಯೇ ನಡೆದುಕೊಳ್ಳಬೇಕಾದುದು ವಿಹಿತವಲ್ಲವೆ ? ಅವಳ ಸುಖದುಃಖಗಳೇ ತನ್ನ ಸುಖದುಃಖಗಳೆಂದು ತಿಳಿಯಬೇಕು; ಅವಳ ಮಾನಾಪಮಾನಗಳೇ ತನ್ನ ಮಾನಾಪಮಾನಗಳೆಂದು ಭಾವಿಸಬೇಕು. ಇಂತಹ ಸ್ಥಿತಿಯು ಸತಿಯ ವಿಷಯದಲ್ಲಿ ಪತಿಗುಂಟಾದುದೇ ಅವಳನ್ನು ಮಿತ್ರಳೆಂದು ತಿಳಿದುದರ ಹೆಗ್ಗುರುತು.

ತಾರುಣ್ಯದಲ್ಲೇನೋ ಮೊದಲು ಇಂತಹ ತಿಳಿವಳಿಕೆಯಿರಬಹುದು. ಅದು ದಿನೇ ದಿನೇ ಕಡಿಮೆಯಾಗುತ್ತ ಹೋದದ್ದಾದರೆ ಕೇವಲ ವಿಷಯೋಪಭೋಗಕ್ಕಾಗಿಯೇ ಉಂಟಾದ ಮಿತ್ರತ್ವವೆಂದು ತಿಳಿಯಬೇಕು. ಅದು ಬಹು ಕ್ಷುದ್ರವಾದುದು. ಒಬ್ಬಾತನಿಂದ ಏನೋ ಸಾಧಿಸಿಕೊಳ್ಳುವುದಕ್ಕಾಗಿ ಆತನಲ್ಲಿ ಮಿತ್ರತ್ವವನ್ನು ಬೆಳೆಸಿ ಪ್ರಾಣಕ್ಕಿಂತಲೂ ಹೆಚ್ಚಾಗಿ ಆತನನ್ನು ಪ್ರೀತಿಸಿ ಆ ತನ್ನ ಕಾರ್ಯ ಸಾಧಿಸಿದ ನಂತರ ಆತನನ್ನು ದೂರ ಮಾಡಿದರ ಆತನಿಗೆ ಮಿತ್ರನೆನ್ನಬಹುದೆ ? ಮಿತ್ರನ ವೇಷ ಹಾಕಿಕೊಂಡ ಮಹಾ ವಂಚಕನೆಂದು ಹೇಳುವುದೇ ವಿಹಿತವಲ್ಲವೆ ?

Digitalized by e-Sahithya Documentation Forum
Sponsored by Sarayu Foundation Trust

ಅದೇ ಪ್ರಕಾರ ಮೊದಲು ಹೆಂಡತಿಯನ್ನು ಮಿತ್ರಳೆಂದು ತಿಳಿದು ಅವಳ ಪ್ರಾಯವು ಹೋದನಂತರ ಇಲ್ಲವೇ ಬೇನೆ ಮೊದಲಾದವುಗಳಿಂದ ಅಸಮರ್ಥಳಾದ ನಂತರ ಅವಳನ್ನು ಉಪೇಕ್ಷಿಸಿದ್ದಾದರೆ ಆ ಮುಂಚಿನ ಪ್ರೇಮವು ಮಿತ್ರತ್ವದ ಪ್ರೇಮವಲ್ಲ. ಅದು ವಂಚಕತ್ವದ ಪ್ರೇಮವು; ವಿಷಯೋಪಭೋಗದ ಮಹಾ ಮೋಸಗಾರಿಕೆಯು. ದಾಂಪತ್ಯ ಧರ್ಮವನ್ನಾಚರಿಸಬೇಕೆಂಬ ಪತಿಗೆ ಇದು ಅತ್ಯಂತ ನಿಂದ್ಯವಾದ ನಡತೆಯು.

ಸತಿಯನ್ನು ಮೊದಲು ಅವಳ ರೂಪ ಲಕ್ಷಣಾದಿಗಳಿಗೇನೇ ಪ್ರೀತಿಸುತ್ತಿದ್ದರೆ ಮುಂದೆ ಅವಳ ಗುಣ ಸ್ವಭಾವಗಳಿಗೂ ಪ್ರೇಮಾದರಗಳನ್ನು ತೋರಿಸಬೇಕು. ಅನಂತರ ತನ್ನ ಆತ್ಮೋನ್ನತಿಗೆ ನೆರವಾದ ಪವಿತ್ರ ಆತ್ಮಳೆಂದೇ ಅವಳಲ್ಲಿ ಆತ್ಮೀಯ ಭಾವವು ನೆಲೆಸಬೇಕು. ಹೀಗೆ ದಿನೇ ದಿನೇ ಸತಿಯ ವಿಷಯದಲ್ಲಿ ಪ್ರೇಮಾದರಗಳು ಹೆಚ್ಚುತ್ತಾ ಹೋದರೇನೇ ಅವಳನ್ನು ಮಿತ್ರಳೆಂದು ತಿಳಿದುದು ನಿಜ.

ತಾಯಿಗೆ ತನ್ನ ಮಗುವಿನ ವಿಷಯದಲ್ಲಿ ಬಹು ಪ್ರೇಮವಿರುತ್ತದಷ್ಟೆ. ಆದರೆ ದಿನೇ ದಿನೇ ಅದೇನಾದರೂ ಕಡಿಮೆಯಾಗುತ್ತದೆಯೋ ? ಇಲ್ಲವೇ ಇಲ್ಲ. ಮಗನು ಬೆಳೆದಂತೆ ಆತನ ವಿಷಯದಲ್ಲಿದ್ದ ಪ್ರೇಮವೂ ಬೆಳೆಯುತ್ತಲೇ ಹೋಗುತ್ತದೆ. ಆತನ ನಾನಾ ಸೌಕರ್ಯಗಳಿಗಾಗಿ ವಿಶೇಷ ಪರಿಶ್ರಮ ಪಡುತ್ತಾಳೆ. ಅಂತೆಯೇ ಆ ಪ್ರೇಮವು ಸಹಜವಾದ ಪ್ರೇಮ. ಮಗುವು ಮೊಲೆಹಾಲನ್ನು ಕುಡಿಯುತ್ತಿರುವಾಗ ಅದರ ಕ್ಷೇಮಕ್ಕಾಗಿ ತಾನು ಪಥ್ಯಕರವಾದ ಆಹಾರವನ್ನೇ ಸೇವಿಸುವುದಿಲ್ಲವೆ ? ಮಗುವಿನ ಸುಖವೇ ತನ್ನ ಸುಖವೆಂದು ತಾಯಿಯು ತಿಳಿದುದಕ್ಕೆ ಅದೇ ದೃಷ್ಟಾಂತವಲ್ಲವೇ ?

ಹಾಗೆಯೇ ಹೆಂಡತಿಯ ಕ್ಷೇಮಕ್ಕಾಗಿಯೂ ಗಂಡನು ಪಥ್ಯಕರವಾದ ನಡತೆಯುಳ್ಳಿರಬೇಕಾದುದು ಮುಖ್ಯ ಕರ್ತವ್ಯವಾಗಿದೆ. ತನ್ನ ನಡತೆಯ ಹಿತಾಹಿತಗಳ ಪರಿಣಾಮವು ತನ್ನ ಹೆಂಡತಿಯ ಮೇಲೆಯೂ ಆಗುತ್ತದೆಂಬ ತಿಳಿವಳಿಕೆಯು ಗಂಡನಿಗೆ ಯಾವಾಗಲೂ ಇರಬೇಕು. ತಾನು ವಿಷಯಲಂಪಟನಾಗುವುದರಿಂದ ಅದರ ದುಷ್ಪರಿಣಾಮವು ತನ್ನ ಹೆಂಡತಿಯ ಮೇಲೆಯೂ ಆಗುತ್ತಿದ್ದರೆ ಆಗ ಪತಿಯು ಸತಿಗಾಗಿಯೇ ಮನೋನಿಗ್ರಹ ಮಾಡಬೇಕಾದುದು ಆತನ ಕರ್ತವ್ಯವು. ಸತಿಯಲ್ಲಿ ನಿಜವಾದ ಮಿತ್ರತ್ವ ಉಂಟಾಗಿದ್ದರೆ ಈ ಮನೋನಿಗ್ರಹವೇನೂ ಅಶಕ್ಯವಲ್ಲ.

ಸತಿಯು ಹೆಚ್ಚು ಮಕ್ಕಳನ್ನು ಹೆತ್ತು ನಿರ್ಬಲಳಾದಾಗ ಪತಿಯು ಮನೋನಿಗ್ರಹ ಮಾಡಬೇಕಾದುದು ಆತನ ಕರ್ತವ್ಯವು. ಸತಿಯಲ್ಲಿ ನಿಜವಾದ ಮಿತ್ರತ್ವವುಂಟಾಗಿದ್ದರೆ ಈ ಮನೋನಿಗ್ರವೇನೂ ಅಶಕ್ಯವಲ್ಲ. ಅದು ದಾಂಪತ್ಯ ಧರ್ಮದ ಜೀವಾಳ. ಸತಿಯನ್ನು ಮಿತ್ರಳಂತೆ ತಿಳಿದುದರ ಬಣ್ಣವು ಆಗಲೇ ಗೊತ್ತಾಗುವುದು. ಪತಿಯು ಸತಿಯ ವಿಷಯದಲ್ಲಿರತಕ್ಕ ಈ ತನ್ನ ಮಹತ್ವದ ಹೊಣೆಗಾರಿಕೆಯನ್ನು ಅರಿತುಕೊಂಡು ಆಚರಣೆಯಲ್ಲಿ ತಂದದ್ದಾದರೆ ಈ ಕಾಲದಲ್ಲಿ ಸೂಚಿಸಲ್ಪಡುತ್ತಿರುವ ಸಂತಾನ ನಿರೋಧದ ಅನೇಕ ಉಪಾಯಗಳ ಅವಶ್ಯಕತೆಯು ಎಷ್ಟೋ ಮಟ್ಟಿಗೆ ಕಡಿಮೆಯಾಗಬಹುದು.

ಹೆಂಡತಿಯ ಮನರಂಜನೆ, ಬುದ್ಧಿವಿಕಾಸಗಳಿಗೆ ನೆರವಾಗುವುದೂ ಗಂಡನ ಕರ್ತವ್ಯವು. ಧಾರ್ಮಿಕ, ಸಾಮಾಜಿಕ, ರಾಜಕೀಯ ಮೊದಲಾದ ಅನೇಕ ಸಂಗತಿಗಳನ್ನು ತಿಳಿಸುತ್ತ ಅವಳ ಬೌದ್ಧಿಕ ಉನ್ನತಿಗಾಗಿ ಪ್ರಯತ್ನಿಸಬೇಕು. ಅವಳು ಜಾಣಳಾದಷ್ಟು ತನ್ನ ಮೇಲಿರುವ ಸಂಸಾರದ ಭಾರವು ಕಡಿಮೆಯಾಗುತ್ತದೆಂಬುದನ್ನು ಮರೆಯಬಾರದು. ಮತ್ತು ಅನೇಕರಿಂದ ಸಂಭವಿಸತಕ್ಕ ನಾನಾ ವಿಪತ್ತುಗಳು ಕೂಡ ದೂರವಾಗುತ್ತವೆಂದೇ ತಿಳಿಯಬೇಕು. ಪತಿಯು ತಾನು ಗಳಿಸುವ ಹಣದಲ್ಲಿ ತನ್ನ ಸತಿಗೂ ಸರಿಯಾದ ಭಾಗವಿದೆಯೆಂದು ತಿಳಿದೇ ಅದನ್ನು ವಿನಿಯೋಗಿಸುತ್ತಿರಬೇಕು. ನಾನು ಗಳಿಸುತ್ತೇನೆ ; ನಾನು ಬೇಕಾದಷ್ಟು ಬೇಕಾದುದಕ್ಕೆ ವೆಚ್ಚ ಮಾಡಲು ಅಧಿಕಾರವುಳ್ಳವನು, ಹೆಂಡತಿಯನ್ನು ಈ ವಿಷಯದಲ್ಲಿ ಕೇಳಬೇಕಾದುದೇಕೆ ? ಎಂಬ ತಪ್ಪು ತಿಳಿವಳಿಕೆಯನ್ನು ತೆಗೆದುಹಾಕಬೇಕು.

ಮನೆತನದ ಮತ್ತು ಮಕ್ಕಳ ಕ್ಷೇಮಕ್ಕಾಗಿ ಪ್ರಯತ್ನಿಸುವ ಹೊಣೆಗಾರಿಕೆಯು ಹೆಂಡತಿಯ ಮೇಲೆಯೂ ಇದೆ. ಕುಟುಂಬಕ್ಕೆ ಸಂಪತ್ತು ಅತ್ಯವಶ್ಯಕವಾದುದು. ಆದುದರಿಂದ ಹಣದ ಆದಾಯ ವೆಚ್ಚಗಳಲ್ಲಿ ಹೆಂಡತಿಯ ಇಚ್ಛೆ, ಸಲಹೆ, ಸಹಾಯಗಳೆಲ್ಲಾ ಅಗತ್ಯವಾದವುಗಳೆಂದೇ ಪತಿಯು ತಿಳಿಯಬೇಕು. ಹಣಕಾಸಿನ ವಿಚಾರದಲ್ಲಿ ಬರಕೂಡದೆಂದು ತನ್ನ ಮನ ಬಂದಂತೆ ವೆಚ್ಚಮಾಡಿಬಿಟ್ಟರೆ ಆಮೇಲೆ ಅವಳು ನಿರಾಶ್ರಿತಳಾಗುವ ಪ್ರಸಂಗ ಬರಬಹುದಲ್ಲವೇ ? ತನ್ನನ್ನು ನಂಬಿ ಬಂದವಳಿಗೆ ಮಹಾ ವಿಪತ್ತು ಬರಬಹುದಲ್ಲವೆ ? ಎಂಬ ಸಂಗತಿಗಳನ್ನು ಯೋಚಿಸಿ ತನ್ನ ಆದಾಯದಲ್ಲಿ ತನ್ನ ಸತಿಗೂ ಸಮಭಾಗವಿದೆಯೆಂದು ತಿಳಿದು ಅವಳ ಇಚ್ಛೆಯನ್ನು ಅನುಸರಿಸಿ ವೆಚ್ಚ ಮಾಡುತ್ತಿರಬೇಕು.

Digitalized by e-Sahithya Documentation Forum
Sponsored by Sarayu Foundation Trust

ಈ ಪ್ರಕಾರ ಆರ್ಥಿಕ ವಿಷಯದಲ್ಲಿಯೂ ಪತಿಯು ಸತಿಯನ್ನು ಸಮಭಾಗಿಯೆಂದೇ ತಿಳಿದು ನಡೆದದ್ದಾದರೆ ಈಗ ಸ್ತ್ರೀಯರು ತಮಗೆ ಆರ್ಥಿಕ ಸ್ವಾತಂತ್ರ್ಯವಿರಬೇಕೆಂದು ನಡೆಸಿರುವ ಚಟುವಟಿಕೆಯು ಎಷ್ಟೋ ಕಡಿಮೆಯಾಗಬಹುದು.

ಈ ಪ್ರಕಾರ ಪತಿಯು ಸತಿಯ ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ಆರ್ಥಿಕ ವಿಷಯಗಳನ್ನು ಲಕ್ಷಿಸಿ ತನ್ನ ಕರ್ತವ್ಯವನ್ನು ತೃಪ್ತಿಕರವಾಗಿ ನಡೆಯಿಸಿದ್ದಾದರೆ ದಾಂಪತ್ಯ ಧರ್ಮದ ಆದರ್ಶ ಪತಿಯಾಗುತ್ತಾನೆ.

ಸತಿಯ ವಿಷಯದಲ್ಲಿ ಪತಿಯ ಮುಖ್ಯ ಕರ್ತವ್ಯಗಳನ್ನು ಕುರಿತು ಕಳೆದ ಪ್ರಕರಣದಲ್ಲಿ ವಿವರಿಸಿದ್ದಾಗಿದೆಯಷ್ಟೆ. ಅವುಗಳಿಗಿಂತ ಸತಿಯು ಪತಿಗಾಗಿ ಮಾಡತಕ್ಕ ಕಾರ್ಯಗಳು ವಿಶೇಷವಾಗಿವೆ. ಅವುಗಳನ್ನು ಅವಳು ತೃಪ್ತಿಕರವಾಗಿ ಮಾಡಿದರೇನೇ ಪತಿಗೆ ತನ್ನ ಕರ್ತವ್ಯಗಳನ್ನು ಮಾಡಲು ಅವಕಾಶವೂ, ಪ್ರೋತ್ಸಾಹವೂ ದೊರೆಯುವುವು. ಮತ್ತು ದಾಂಪತ್ಯ ಧರ್ಮವು ನೆರವೇರುವುದು. ಇಲ್ಲದಿದ್ದರೆ ದಾಂಪತ್ಯ ಧರ್ಮಕ್ಕೆ ಅಸ್ತಿತ್ವವೇ ಇಲ್ಲದಂತಾಗುವುದು. ಕುಟುಂಬದಲ್ಲಿ ಹೆಂಡತಿಯ ಕಾರ್ಯಗಳೇ ಹೆಚ್ಚಾಗಿಯೂ, ಬಹು ಮುಖ್ಯವಾಗಿಯೂ ಇರುವುದರಿಂದಲೇ ಬಹುಕಾಲದಿಂದಲೂ ಅವಳ ಕರ್ತವ್ಯಗಳ ಸಂಬಂಧವಾಗಿ ಅನೇಕ ರೀತಿ ನೀತಿಗಳು ಏರ್ಪಟ್ಟಿವೆ.

ಸತಿಯ ಕರ್ತವ್ಯಗಳಲ್ಲಿ ಪತಿವ್ರತಾಧರ್ಮವನ್ನು ಪಾಲಿಸುವುದು ಅತ್ಯಂತ ಮುಖ್ಯವಾದುದು. ಅದೇ ಅವಳಿಗೆ ಬಹು ಪವಿತ್ರವಾದುದೂ ಭೂಷಣವಾದುದೂ ಆಗಿದೆ. ತನ್ನ ದೇಹವೇ ಪತಿಯ ಅರ್ಧದೇಹವಷ್ಟೆ. ಎಂದಮೇಲೆ ಅದಕ್ಕೆ ಪತಿಯೇ ಅಧಿಕಾರಿಯು. ಪತಿಗೆ ಮೀಸಲಾಗಿದ್ದ ದೇಹವನ್ನು ಪತಿಯ ಸೇವೆಯಲ್ಲಿ ಸವೆಸುವುದೇ ಅವಳ ಪವಿತ್ರ ಕರ್ತವ್ಯವು. ಈ ಕರ್ತವ್ಯದಿಂದಲೇ ಅಸಂಖ್ಯ ಹೆಣ್ಣು ಮಕ್ಕಳು ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ಸತಿಯ ಜೀವಿತದಲ್ಲಿ ತನ್ನ ಪತಿಯ ಸೇವೆಯಷ್ಟು ಮುಖ್ಯವಾದ ಕರ್ತವ್ಯವು ಬೇರೊಂದಿಲ್ಲ.

ಶಿಕ್ಷಿತ ಹೆಣ್ಣುಮಕ್ಕಳು ಗಂಡನ ಸೇವೆಯನ್ನು ಸರಿಯಾಗಿ ಮಾಡುವುದಿಲ್ಲವೆಂಬ ಕಲ್ಪನೆಯು ಜನರಲ್ಲಿ ಹೆಚ್ಚುತ್ತಿರುವುದರಿಂದ ಶಿಕ್ಷಿತರಾದ ಹೆಣ್ಣುಮಕ್ಕಳ ಮೇಲೆ ಹೆಚ್ಚಾದ ಹೊಣೆಗಾರಿಕೆಯು ಬಂದಿದೆ. ಅವರು ಪತಿಸೇವೆಯನ್ನು ಪ್ರೇಮಾದರಗಳಿಂದ ಮಾಡಿ ಶಿಕ್ಷಣದ ಮಹತ್ವವನ್ನು ತೋರಿಸಿಕೊಡಬೇಕು.

ಸತಿಗೆ ಸಮಾನತ್ವವಿದೆಯೆಂದು ತಿಳಿದು ಅದರ ದುರುಪಯೋಗವನ್ನು ಮಾಡಿಕೊಳ್ಳಕೂಡದು. ತಾನು ತಿಳಿದವಳೆಂದು ಪತಿಯ ಮಾತುಗಳನ್ನು ಉಪೇಕ್ಷಿಸಬಾರದು. ತನ್ನ ವಿದ್ಯೆ-ಬುದ್ಧಿಗಳೆಲ್ಲಾ ಪತಿಯ ಕಾರ್ಯಕ್ಕೆ ನೆರವಾಗುವಂತೆ ನಡೆದುಕೊಳ್ಳಬೇಕು. ನಿರುತ್ಸಾಹಿಯಾದ ಪತಿಗೆ ಉತ್ಸಾಹದ ಮೂರ್ತಿಯಾಗಿ ಪರಿಣಮಿಸಬೇಕು. ಜೀವಿತ ಯಾತ್ರೆಯಲ್ಲಿ ನಿರಾಶನಾದ ಪತಿಗೆ ಆಸೆಯ ಸ್ಫುರಿಯನ್ನುಂಟುಮಾಡಬೇಕು. ಪತಿಗೆ ಕೋಪತಾಪಗಳುಂಟಾದಾಗ ಅವುಗಳನ್ನು ಶಮನಗೊಳಿಸುವ ಶಾಂತಿದೇವಿಯಾಗಿಯೇ ಪರಿಣಮಿಸಬೇಕು. ಹೀಗೆ ಪತಿಯ ಪ್ರತಿಯೊಂದು ಪ್ರಸಂಗದಲ್ಲಿಯೂ ತಾನು ಜಾಣತನದಿಂದ ನೆರವಾಗಬೇಕಾದುದೇ ಅವಳ ಕರ್ತವ್ಯವು.

ಪತಿಯ ಬೌದ್ಧಿಕ ಮತ್ತು ಮಾನಸಿಕ ಉನ್ನತಿಗಾಗಿ ಸತಿಯು ಹೀಗೆ ಸಹಾಯ ಮಾಡುವುದು ತನ್ನ ಕರ್ತವ್ಯವೆಂದೇ ತಿಳಿದಿರಬೇಕು. ಪತಿಯ ಉನ್ನತಿಯಲ್ಲಿಯೇ ತನ್ನ ಉನ್ನತಿಯಿದೆಯೆಂಬ ದೃಢವಾದ ನಂಬಿಕೆಯು ಸತಿಗೆ ಇದ್ದ ವಿನಾ ಈ ಪ್ರಕಾರ ನೆರವಾಗುವ ಪ್ರವೃತ್ತಿಯೇ ಉಂಟಾಗುವುದಿಲ್ಲ. ಕೈಕಾಲುಗಳು ದೇಹದ ಬೇರೆ ಭಾಗಕ್ಕೆ ಏನಾದರೂ ಸಂಭವಿಸಿದರೆ ಅದರ ನಿವಾರಣೆಗಾಗಿ ಹೇಗೆ ಕೂಡಲೇ ನೆರವಾಗುತ್ತವೆಯೋ ಹಾಗೆಯೇ ಗಂಡನ ಯಾವ ವಿಧವಾದ ತೊಂದರೆಗಳನ್ನು ಕಂಡರೂ ಕೂಡಲೇ ಅವುಗಳನ್ನು ಕಳೆಯಲು ಹೆಂಡತಿಯು ತಾನಾಗಿಯೇ ಮುಂದುವರಿಯಬೇಕು. ಹಾಗಾದರೇನೇ ಹೆಂಡತಿಯು ಗಂಡನ ಅರ್ಧಾಂಗಿನಿಯೆಂಬುದು ಸಾರ್ಥಕವಾಗುವುದು.

ಗಂಡನ ಮೇಲೆ ಕುಟುಂಬ ಪೋಷಣೆಯ ಬಹು ಹೆಚ್ಚಿನದಾದ ಹೊಣೆಗಾರಿಕೆಯು ಇದೆಯೆಂಬುದು ಹೆಂಡತಿಗೆ ಚೆನ್ನಾಗಿ ತಿಳಿದಿರಬೇಕು. ಆ ತನ್ನ ಹೊಣೆಗಾರಿಕೆಗೆ ತಕ್ಕಂತೆ ಗಂಡನು ಹಣ ಸಂಪಾದಿಸುವುದರಲ್ಲಿ ಎಷ್ಟು ಕಷ್ಟಪಡುತ್ತಿದ್ದಾನೆಂಬುದರ ಅರಿವು ಹೆಂಡತಿಗಿರಬೇಕು. ತನಗೆ ಬೇಕಾದ ನಗ-ನಾಣ್ಯ, ವಸ್ತ್ರಾಭರಣ, ಪಾತ್ರೆ-ಪಡಗ ಮೊದಲಾದ ವಸ್ತುಗಳನ್ನು ಗಂಡನು ತಂದುಕೊಟ್ಟಾಗ ಒಂದು ರೀತಿ, ಕೊಡದಿದ್ದಾಗ ಮತ್ತೊಂದು ರೀತಿಯಾಗಿರಬಾರದು. ದುಡಿಯುವವನು ಹೇಗಾದರೂ ಗಂಡನೆಂದು ತಾನು ದುಂದುಗಾರಳಾಗಬಾರದು. ಮನೆತನದ ಸಾಮಾನುಗಳನ್ನು ಜೋಕೆಯಾಗಿಟ್ಟುಕೊಳ್ಳುವುದು ಅವಳ ಕರ್ತವ್ಯವು. ಗಂಡನ ಆದಾಯವನ್ನು ನೋಡಿಯೇ ತಾನು ವೆಚ್ಚ ಮಾಡುತ್ತಿರಬೇಕು. ಗಂಡನು ಹಣಕಾಸಿನ ಕಷ್ಟನಷ್ಟಗಳಿಗೆ ಗುರಿಯಾಗುವಂತಹ ಯಾವ ಕೆಲಸಗಳನ್ನೂ ಮಾಡಕೂಡದು.

Digitalized by e-Sahithya Documentation Forum
Sponsored by Sarayu Foundation Trust

ನೆರೆಮನೆಯವರ ಅಥವಾ ಸಂಬಂಧಿಗಳ ಮೆಚ್ಚಿಗೆಗೆ ಮನಸೋತು ಗಂಡನನ್ನು ನಾನಾ ವಸ್ತುಗಳಿಗಾಗಿ ಕಾಡಿ, ಪೀಡಿಸಿ, ಆತನು ಹಣದ ತೊಂದರೆಗೆ ಗುರಿಯಾಗುವಂತೆ ಮಾಡಬಾರದು. ಕುಟುಂಬಕ್ಕೆ ಸಂಪತ್ತು ಬಹು ಮುಖ್ಯವಾದುದು. ಅದನ್ನು ಕಾದಿಟ್ಟುಕೊಳ್ಳಲು ಗಂಡನಿಗೆ ನೆರವಾಗಬೇಕು. ಗಂಡನು ತನ್ನ ಆದಾಯದ ಅಳತೆಗೆಟ್ಟು ವೆಚ್ಚ ಮಾಡುತ್ತಿದ್ದರೆ ಹಾಗೆ ಮಾಡದಂತೆ ವಿನಯದಿಂದ ಹೇಳಿಕೊಂಡು ಪ್ರೇಮದ ಬಲದಿಂದ ಅದನ್ನು ತಡೆಯುವುದೂ ಅವಳ ಕರ್ತವ್ಯವು.

ಗಂಡನ ಮಾನ-ಮನ್ನಣೆಗಳಿಗೂ ಧರ್ಮಕಾರ್ಯಗಳಿಗೂ ಕೊರತೆ ಬರದಂತೆ ನಡೆದುಕೊಳ್ಳುವುದೂ ಹೆಂಡತಿಯ ಕರ್ತವ್ಯವು. ಮನೆಗೆ ಬಂದವರ ಆದರ ಸತ್ಕಾರಗಳನ್ನು ಮಾಡುವಾಗ ಅವರವರ ಘನತೆಗೆ ತಕ್ಕಂತೆ ತಾನು ನಡೆಯಬೇಕು. ಅತಿಥಿಗಳಿಗೆ ಅಪ್ರಿಯವಾಗುವ ರೀತಿಯಲ್ಲಿ ನಡೆದದ್ದಾದರೆ ತನ್ನ ಗಂಡನಿಗೆ ಅಗೌರವವು ಬರುತ್ತದೆಂದೇ ತಿಳಿಯಬೇಕು. ಮನೆಯ ಮರ್ಯಾದೆಯನ್ನು ಕಾಯುವುದು ತನ್ನ ಕೈಯಲ್ಲಿದೆಯೆಂಬುದನ್ನು ಮರೆಯಬಾರದು.

ಪ್ರಾಮಾಣಿಕನಾದ ಚತುರ ಸೇವಕನು ತನ್ನ ಯಜಮಾನನ ಸೇವೆಯನ್ನು ಹೇಗೆ ಮಾಡುತ್ತಿರುತ್ತಾನೆಯೋ ಹಾಗೆಯೇ ಸತಿಯು ಪತಿಯ ಸೇವೆಯನ್ನು ಮಾಡಬೇಕು. ಗಂಡನು ಹೆಂಡತಿಯನ್ನು ತನ್ನ ಸಮಾನಳಂತೆ ತಿಳಿಯುತ್ತಿದ್ದರೂ ಮಿತ್ರಳಂತೆ ಪ್ರೇಮಾದರಗಳಿಂದ ಕಾಣುತ್ತಿದ್ದರೂ ತಾನು ಮಾತ್ರ ಹಾಗೆ ಸಮಾನಳೆಂದು ತಿಳಿದು ನಡೆಯಬಾರದು. ತಾನು ಸೇವಕಳೆಂದೇ ತಿಳಿದು ನಡೆಯುವುದು ಕ್ಷೇಮಕರವು ಮತ್ತು ತನಗೆ ಭೂಷಣವಾದುದು. ಹೀಗೆ ನಡೆಯುವ ಸತಿಯು ದಾಂಪತ್ಯ ಧರ್ಮವನ್ನು ಸಾಂಗಗೊಳಿಸುವಳು. (ಸಶೇಷ)

ಸತಿಪತಿಗಳೊಂದಾದ ಭಕ್ತಿ
ಹಿತವಪ್ಪುದು ಶಿವಂಗೆ।
ಸತಿಪತಿಗಳೊಂದಾಗದ ಭಕ್ತಿ
ಅಮೃತದಲ್ಲಿ ವಿಷವ ಬೆರೆಸಿದಂತೆ ಕಾಣಾ ರಾಮನಾಥಾ

—ಜೇಡರ ದಾಸಿಮಯ್ಯ

ಕವಿಯಾಗಿ ಬಸವಣ್ಣನವರು

ಶ್ರೀಯುತ ಸಿ. ಪಿ. ಕೃಷ್ಣಕುಮಾರ್
ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು

೧

ಹನ್ನೆರಡನೆಯ ಶತಮಾನ ಕರ್ನಾಟಕದ ಪಾಲಿಗೊಂದು ಪುಣ್ಯ ಮಂಗಳ ಮನ್ವಂತರವಾಗಿ ಪರಿಣಮಿಸಿತು. ರೋಮಾಂಚನಕಾರಿಯಾದ ಸರ್ವೋದಯ ಸಂಕ್ರಾಂತಿಯೊಂದನ್ನು ದರ್ಶಿಸುವ ಭಾಗ್ಯ ಆ ಶತಮಾನದ್ದಾಯಿತು. ವೀರಶೈವ ಧರ್ಮ ಅಂದು ಸ್ಥಾಪಿಸಿದ ಆಧ್ಯಾತ್ಮಿಕ ಪ್ರಜಾಪ್ರಭುತ್ವ ಸಾಹಿತ್ಯಿಕ ಪ್ರಜಾಪ್ರಭುತ್ವಕ್ಕೂ ಅವಕಾಶ ಮಾಡಿಕೊಟ್ಟು ನೂತನ ಯುಗಧರ್ಮವೊಂದಕ್ಕೆ ಪ್ರೇರಕ ಶಕ್ತಿಯಾಗುವುದನ್ನು ನೋಡುತ್ತೇವೆ. ಆ ಶಕ್ತಿಯ ಸೂತ್ರಧಾರಿಯಾಗಿ, ಪಾತ್ರಧಾರಿಯೂ ಆಗಿ ಕಂಡುಬರುತ್ತಾರೆ ಮಹಾನುಭಾವ ಬಸವಣ್ಣನವರು.

ಅವರು ನವೀನ ಯುಗಧರ್ಮದ ಅಧ್ವರ್ಯುವೂ ಹೌದು, ಪ್ರತಿನಿಧಿಯೂ ಹೌದು. ಅವರ ದಿವ್ಯ ಜೀವನ, ಸಾಧನೆ, ಬೋಧನೆಗಳನ್ನು ಸಮೀಕ್ಷಿಸಿದರೆ ಅಂದಿನ ಮಹಾಕ್ರಾಂತಿಯ ಸುಸ್ಪಷ್ಟವಾದ ಚಿತ್ರ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಆ ಚಳುವಳಿಯ ಫಲವಾಗಿ ನಾಡಿಗೆ ಅಪೂರ್ವವಾದ ಧಾರ್ಮಿಕ, ಸಾಮಾಜಿಕ ಮೌಲ್ಯಗಳು ದೊರಕಿದಂತೆಯೆ, ಅದರ ಅಂಗವಾಗಿ ನಡೆದ ವಚನಸೃಷ್ಟಿಯ ಪರಿಣಾಮವಾಗಿ ನೂತನ ಸಾಹಿತ್ಯಿಕ ಮೌಲ್ಯಗಳು ಕೂಡ ದೊರಕಿದವು. ಈ ನಾನಾ ಮುಖವಾದ ಮೌಲ್ಯಗಳನ್ನೂ ಅವುಗಳಿಂದಾದ ವ್ಯಾಪಕ ಪ್ರಯೋಜನಗಳನ್ನೂ ಎಚ್ಚರಿಕೆಯಿಂದ ಗಮನಿಸಿದಾಗ, ಇಪ್ಪತ್ತನೆಯ ಶತಮಾನದ ಎಷ್ಟೋ ಮುಂಗುರುಹುಗಳನ್ನು ಹನ್ನೆರಡನೆಯ ಶತಮಾನದಲ್ಲೇ ಕಂಡು ವಿಸ್ಮಿತರಾಗುತ್ತೇವೆ.

ಅಂದು ಧಾರ್ಮಿಕ ಕ್ರಾಂತಿಗೆ ಪೂರಕವಾಗಿ ಮೂಡಿದ ವಚನರಾಶಿ ಕನ್ನಡದಲ್ಲಿ ಹೊಸ ಸಾಹಿತ್ಯ ಪ್ರಕಾರವೊಂದನ್ನು ತೆರೆಯಿತು. ತತ್ಫಲವಾಗಿ ಅದುತನಕ ವಸ್ತು

Digitalized by e-Sahithya Documentation Forum
Sponsored by Sarayu Foundation Trust

ನಿಷ್ಠವಾಗಿದ್ದ ಸಾಹಿತ್ಯಕ್ಕೆ ಮೊದಲ ಬಾರಿಗೆ ವ್ಯಕ್ತಿನಿಷ್ಠತೆ ಪ್ರವೇಶಿಸಿತು. ಕೆಲವೇ ಮಂದಿ ಪಂಡಿತ ಕವಿಗಳಿಗೆ, ಕೇವಲ ಪುರಾಣೇತಿಹಾಸಗಳಿಂದ ಆಯ್ದ ವಿಶೇಷ ವಸ್ತುಗಳಿಗೆ, ರಾಜಾಸ್ಥಾನಗಳಿಗೆ ಸೀಮಿತವಾಗಿದ್ದ ಸಾಹಿತ್ಯ ಈಗ ಸಾಮಾನ್ಯ ಜನತೆಯ ಸೊತ್ತಾಗಿ ಪರಿಣಮಿಸಿತು. ಎಲ್ಲರ ವೈಯಕ್ತಿಕ ಭಾವಾನುಭಾವಗಳಿಗೆ, ಅಂತರಂಗದ ತುಡಿತಕ್ಕೆ ಈಗ ಅಭಿವ್ಯಕ್ತಿ ಸಿಕ್ಕಿತು. ಸಾಮಾನ್ಯರೂ ಕವಿಗಳಾದರು ; ಸಾಮಾನ್ಯರ ಬದುಕೂ ಕಾವ್ಯಕ್ಕೆ ಸಾಮಗ್ರಿಯಾಯಿತು. ಇಲ್ಲಿ ನಾವು ಕನ್ನಡ ಭಾವಗೀತಸಾಹಿತ್ಯದ ಅರುಣೋದಯವನ್ನು ನಿಚ್ಚಳವಾಗಿ ಗುರುತಿಸಬಹುದು. ಕಾವ್ಯಸೃಷ್ಟಿ ಒಂದು ಮನೋಧರ್ಮವೇ ಹೊರತು ವೃತ್ತಿಯಲ್ಲವೆಂಬುದನ್ನು ಅಂದಿನ ಯುಗ ತೋರಿಸಿಕೊಟ್ಟಿತು. ಆಗಿನ ಜನ ಕಾವ್ಯ ಬರೆಯಬೇಕೆಂದು ಹೊರಟವರಲ್ಲ, ಅವರು ಪ್ರಾಮಾಣಿಕವಾಗಿ, ಹೃದಯಾಂತರಾಳದಿಂದ ಆಡಿದ್ದೆಲ್ಲ ಅವರಿಗರಿವಿಲ್ಲದಂತೆಯೆ ಕಾವ್ಯರೂಪವನ್ನು ಪಡೆಯಿತು.

ಪರಿವರ್ತನೆಯಾದುದು ವಸ್ತುವಿನಲ್ಲಿ ಮಾತ್ರವಲ್ಲ ; ರೂಪ ಶೈಲಿಗಳಲ್ಲಿ ಕೂಡ ಅದು ಸುವ್ಯಕ್ತವಾಯಿತು. ವಚನಗಳ ಶೈಲಿ ಅಚ್ಚಗನ್ನಡದ್ದು ; ಸಂಸ್ಕೃತಭೂಯಿಷ್ಠವಾದ ಮಾರ್ಗಶೈಲಿಯಿಂದ ಭಿನ್ನವಾದುದು. ರೂಪದಲ್ಲಿ ಕೂಡ ವಚನಸಾಹಿತ್ಯ ವಿಶಿಷ್ಟವಾದುದು ; ಅದು ಶುಷ್ಕ ಗದ್ಯವಲ್ಲದ, ಶುದ್ಧ ಪದ್ಯವೂ ಅಲ್ಲದ ಅಪೂರ್ವ ಕಾವ್ಯಜಾತಿ. ಅದು ತಾನೆ ಸ್ವತಂತ್ರವಾದ ಒಂದು ಪ್ರಕಾರವಾಗಿ ಉಗಮಗೊಂಡುದು ಮಾತ್ರವಲ್ಲದೆ, ಮುಂದೆ ಹಲವು ಸಾಹಿತ್ಯ ಪ್ರಕಾರಗಳಿಗೆ ಮಾತೃಶಕ್ತಿಯಾಯಿತು. ಇಂತಹ ವಚನ ವಾಙ್ಮಯಕ್ಕೆ ಶಿಖರಪ್ರಾಯವಾಗಿವೆ ಬಸವೇಶ್ವರರ ವಚನಗಳು.

ಬಸವಣ್ಣನವರು ಅಂದು ಪ್ರಧಾನವಾಗಿ ಕವಿಯಾಗಿರಲಿಲ್ಲ, ನಿಜ. ಆದರೆ ಇಂದು ಅವರು ನಮ್ಮ ಪಾಲಿಗೆ ಹಿರಿಯ ಅನುಭಾವಿ ಮತ್ತು ಧಾರ್ಮಿಕ ಮಹಾಪುರುಷರಾಗಿರುವಂತೆಯೆ ದೊಡ್ಡ ಕವಿಯೂ ಆಗಿದ್ದಾರೆ. ಅವರ ಸಾಧನೆ ಸಿದ್ಧಿಗಳಷ್ಟೆ ಅವರ ವಚನಸೃಷ್ಟಿ ನಮಗಿಂದು ಅಮೂಲ್ಯವಾಗಿ ತೋರುತ್ತದೆ. ಏಕೆಂದರೆ, ಅವರ ಸಾಧಕ ಜೀವನದ ವಿಪುಲ ಮನಃಪರಿಪಾಕದ ದಾಖಲೆಗಳು ಈ ವಚನಗಳಲ್ಲಿ ಅತ್ಯಂತ ವಿಶದವಾಗಿ, ಇತಿಹಾಸಕ್ಕಿಂತ ಸಮೃದ್ಧ ವಿಶ್ವಾಸಾರ್ಹವಾಗಿ ಲಿಖಿತಗೊಂಡಿವೆ. ಒಂದು ವೇಳೆ ಅವರು ಪ್ರಧಾನವಾಗಿ ಕವಿಯಲ್ಲ ಎನ್ನುವುದನ್ನು ಒಪ್ಪಿಕೊಂಡರೂ, ದ್ವಿತೀಯವಾಗಿಯಾದರೂ ಅವರು ಗಣ್ಯ ಕವಿ ಎಂಬುದರಲ್ಲಿ ಸಂಶಯವಿಲ್ಲ. ಇದು ಬಸವಣ್ಣನವರ ಅನೇಕಮುಖ ವ್ಯಕ್ತಿತ್ವವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳುವ

ಮಾತಷ್ಟೆ. ಆದರೆ ತೌಲನಿಕವಾಗಿ ವಿಚಾರ ಮಾಡಿದಾಗ, ಬಸವಣ್ಣನವರು ಬೇರಾವ ಕವಿಗೂ ಎರಡನೆಯವರಾಗದ ಪ್ರತಿಭಾಶಾಲಿಗಳು ; ಅವರ ಬಹುಪಾಲು ವಚನಗಳು ಶುದ್ಧ ಕಾವ್ಯದ ಶ್ರೇಣಿಯಲ್ಲಿ ನಿಲ್ಲುತ್ತವೆ. ಅವರು ಕವಿ ಮಾತ್ರವಲ್ಲ, ಮಹಾಕವಿಯ ಸತ್ವವುಳ್ಳವರು ಎಂದರೂ ಉತ್ಪ್ರೇಕ್ಷೆಯಾಗುವುದಿಲ್ಲ.

ಬಸವಣ್ಣನವರು ಉದ್ದೇಶಪೂರ್ವಕವಾಗಿ ಕಾವ್ಯರಚನೆಗೆ ಕೈಹಾಕಲಿಲ್ಲ ; ಅವರ ಉತ್ತುಂಗ ಜೀವನದ ಸಹಜ ಉಪಾಂಗವಾಗಿ ಅವರ ವಚನಗಳು ಅರಳಿದವು. ಆ ಕಾರಣದಿಂದಲೆ ಅವು ಉತ್ತಮವಾದ ಕಾವ್ಯವಾದುವು. ಪ್ರಜ್ಞಾಪೂರ್ವಕವಾಗಿ ಅವರು ಕಾವ್ಯನಿರ್ಮಿತಿಗೆ ತೊಡಗಿದ್ದರೆ ಏನೆಲ್ಲ ಸಂಪ್ರದಾಯಗಳನ್ನು ಅವರು ತೃಪ್ತಿಪಡಿಸಬೇಕಾಗಿತ್ತೊ! ಆದರೆ ಅದೃಷ್ಟವಶಾತ್ ಹಾಗಾಗಲಿಲ್ಲ. ಬುದ್ಧಿಪುರಸ್ಸರವಾಗಿ ಕಾವ್ಯ ರಚಿಸಲು ಹೊರಟಾಗ ಎಂತಹ ವರಕವಿಯ ಕಾವ್ಯದಲ್ಲೂ ಸಾಂಪ್ರದಾಯಿಕ ಅಂಶಗಳು ನುಸುಳುತ್ತವೆ. ಬಸವಣ್ಣನವರು ಆ ದೋಷದಿಂದ ಮುಕ್ತರಾದರು. ತಮ್ಮ ಅಂತರಂಗವನ್ನು ಅವರು ನೇರವಾಗಿ, ನಿಸ್ಸಂಕೋಚವಾಗಿ ವಚನಗಳಲ್ಲಿ ಹೇಳಿಕೊಂಡುದರಿಂದ ಅಲ್ಲಿ ಕವಿತೆಯ ಮೂಲಭೂತ ಗುಣಗಳು ಉದ್ಭವಿಸಿದುವು ; ಕಾವ್ಯದ ನೆಲಗಟ್ಟು ಅವರಿಗೆ ಸಿದ್ಧಿಸಿತು. ಯಾವ ನಿಯತಿ ನಿಯಮಗಳಿಗೂ ಬದ್ಧರಾಗದೆ, ಸಂಪ್ರದಾಯದ ತೊಡರುಗಳಿಗೆ ಸಿಲುಕದೆ ಮನಸ್ಸಿಗೆ ಬಂದಂತೆ ಹಾಡಿಕೊಂಡುದರಿಂದ ಬಸವಣ್ಣನವರ ವಚನಗಳು ಜೀವಂತವಾದ, ಅತ್ಯಂತ ಸುಂದರವಾದ ಭಾವಗೀತೆಗಳಾಗುವುದು ಸಾಧ್ಯವಾಯಿತು. ತೀವ್ರಾನುಭವದ ಒತ್ತಡದಿಂದ ಹೊಮ್ಮಿದ ಅವರ ವಾಗ್ಧಾರೆಯಲ್ಲಿ ಶಕ್ತಿಸರಸ್ವತಿ ಅಪ್ರಾರ್ಥಿತವಾಗಿ ಮೈದೋರಿದಳು.

"ಕೂಡಲ ಸಂಗಮದೇವ, ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ!" ಎಂದು ಹೇಳಿಕೊಂಡಿದ್ದಾರೆ ಬಸವಣ್ಣ. ಹೌದು ಅವರು ತಾವು ಒಲಿದಂತೆ ಹಾಡಿದರು ; ಕವಿಸಮಯ ಅಥವಾ ಪರಂಪರೆ ಒಲಿದಂತೆ ಹಾಡಲಿಲ್ಲ. ಕೂಡಲಸಂಗಮನನ್ನು ತಾವು ಒಲಿದಂತೆ ಹಾಡಿದರು ಎಂದೂ ಇಟ್ಟುಕೊಳ್ಳಬಹುದು. ಭಾವಭಕ್ತಿಯೆ ಅವರ ವಚನವಾಹಿನಿಯ ಹೈಮಗಂಗೋತ್ರಿ; ಅದೇ ಸ್ಥಾಯಿ, ಉಳಿದುವೆಲ್ಲ ಸಂಚಾರಿ. ಬಸವಣ್ಣನವರ ಕವಿತೆಯೊಂದು ಚೇತೋಹಾರಿಯಾದ ವಿಸ್ಮಯವಾಗಿ ವಿಕಾಸಗೊಂಡುದರ ಕಾರಣ ಅವರ ಈ ಸ್ವತಂತ್ರ ನಿರ್ಭಯ ಪ್ರವೃತ್ತಿಯಲ್ಲಿದೆ.

ಬಸವಣ್ಣನವರ ವಚನಗಳಲ್ಲಿ ಗೋಚರಿಸುವ ಎಷ್ಟೋ ಅಭೂತಪೂರ್ವ ಗುಣಲಕ್ಷಣಗಳು ನಮ್ಮನ್ನು ಪುಳಕಗೊಳಿಸುತ್ತವೆ. ನಾವು ಆಧುನಿಕ, ನವ್ಯ ಎಂದು

Digitalized by e-Sahithya Documentation Forum
Sponsored by Sarayu Foundation Trust

ತೆರೆಯುವ ಎಷ್ಟೋ ಪ್ರವೃತ್ತಿಗಳನ್ನೂ ಧೋರಣೆಗಳನ್ನೂ ಮೂಡಲಿಸುವಂತೆ ಅವರ ವಚನಗಳಲ್ಲಿ ನವ್ಯತೆ ಕಂಗೊಳಿಸುತ್ತಿದೆ. ಅನುಭವದ ವ್ಯಾಪಕತೆ, ತೀವ್ರತೆ ಮತ್ತು ಸಂಕೀರ್ಣತೆ ; ಆಳವಾದ ಸಾಮಾಜಿಕ ಪ್ರಜ್ಞೆ ಮತ್ತು ಸೂಕ್ಷ್ಮಸಂವೇದನೆ ; ಅಭಿವ್ಯಕ್ತಿಯ ಸಾಮರ್ಥ್ಯ ಮತ್ತು ಮಾರ್ಮಿಕ ಧ್ವನಿಪೂರ್ಣತೆ ; ಭಾಷಾಪ್ರಭುತ್ವ ಮತ್ತು ಭಾಷೆಯ ಸತ್ವಸಾಧ್ಯತೆಗಳನ್ನೆಲ್ಲಾ ಸೂರೆಮಾಡುವ ಕೌಶಲ ; ಆಡುಮಾತಿನ ತಿರುವು-ಮುರುವು ಕಾಕು ಭಂಗಿಗಳು ; ಮಡಿವಂತಿಕೆಯ ಭಾವನೆಯಿಲ್ಲದೆ ಬದುಕಿನ ಎಲ್ಲ ಶಾಖೆಗಳನ್ನೂ ಕ್ಷೇತ್ರಗಳನ್ನೂ ಆಲಿಂಗಿಸುವ ಉದಾರ ದೃಷ್ಟಿಯಿಂದ ಸೃಷ್ಟವಾದ ಪ್ರತಿಮೆ, ರೂಪಕಗಳ ಪ್ರಖರ ವೈಭವ—ಇವೇ ಮುಂತಾದ ಅದೆಷ್ಟೋ ಸ್ಪೃಹಣೀಯವಾದ ಅಂಶಗಳು ಅನ್ಯತ್ರ ದುರ್ಲಭವಾದ ಲೋಕವೊಂದನ್ನು ಬಸವವಚನಗಳಲ್ಲಿ ನಮಗೆ ಪರಿಚಯ ಮಾಡಿಕೊಡುತ್ತವೆ. ಅಲಂಕಾರ, ರಸ, ಧ್ವನಿ, ರೀತಿ, ವಕ್ರೋಕ್ತಿ-ಎಲ್ಲವೂ ಅಯಾಚಿತವಾಗಿ ಅಲ್ಲಿ ಮನೆ ಮಾಡಿವೆ. ಪ್ರಾಚೀನ ಅರ್ವಾಚೀನ, ಪ್ರಾಚ್ಯ ಅಥವಾ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಯಾವ ನಿಕಷವನ್ನು ಅನ್ವಯಿಸಿ ನೋಡಿದರೂ ಬಸವಣ್ಣನವರ ಕಾವ್ಯ ಗೆದ್ದು ಬದುಕಬಲ್ಲುದು. ಮಹಾತ್ಮರಾಗಿ ಅವರು ಏರಿದ ಎತ್ತರದಿಂದ ಅವರ ಕವಿತೆಗೆ ಅಪರಿಮಿತ ಲಾಭವಾಗಿದೆ. ಬದುಕಿನಲ್ಲೆಂತೊ ಅಂತೆ ಸಾಹಿತ್ಯದಲ್ಲೂ ಅವರ ನಿರ್ವಿಕಾರ ಸಮದರ್ಶನ ಕಂಡುಬರುತ್ತದೆ. ಸಾಮಾನ್ಯ ಕವಿಗಳು ಸಮೀಪಿಸಲು ಸಂಕೋಚಪಡುವಂತಹ ಸಂಗತಿಗಳನ್ನು ಅವರು ಅದ್ಭುತವಾದ ರೀತಿಯಲ್ಲಿ ರೂಪಕವಾಗಿ ಬಳಸಿಕೊಳ್ಳಬಲ್ಲರು. ಪ್ರಕೃತಿ, ಮಾನವಪ್ರಕೃತಿ, ಪ್ರಾಣಿಪ್ರಕೃತಿ ಯಾವುದೂ ಅವರ ಸರ್ವಂಕಷ ದೃಷ್ಟಿ, ಪರಿಭಾವನೆಗಳಿಂದ ವಂಚಿತವಾಗಿಲ್ಲ. ಈ ಎಲ್ಲ ದೃಷ್ಟಿಗಳಿಂದ ನೋಡಿದಾಗ, ಅವರೊಡನೆ ಸ್ಪರ್ಧಿಸಬಲ್ಲ ಕವಿಗಳು ಸಾಹಿತ್ಯದಲ್ಲಿ ಬಹಳ ಮಂದಿಯಿಲ್ಲವೆನಿಸುತ್ತದೆ.

ಈ ವಚನಗಳು ಸ್ವಚ್ಛಂದ ರಚನೆಗಳಾಗಿದ್ದರೂ ಛಂದಶ್ಶೂನ್ಯವಾಗಿಲ್ಲ. ನಿರ್ದಿಷ್ಟವಾದ ಛಂದಸ್ಸು ಅಲ್ಲಿ ಕಾಣಿಸದಿದ್ದರೂ, ತಿರುಳಿಗೆ ಅನುಗುಣವಾದ ಲಯವಿನ್ಯಾಸ ಎಲ್ಲ ವಚನಗಳಲ್ಲೂ ಅನುಭವಕ್ಕೆ ಬರುತ್ತದೆ ; ಕೆಲವು ವಚನಗಳ ಗೇಯಮಾಧುರ್ಯ ಅತ್ಯಂತ ಸುಖಾವಹವಾದುದು. ಹೀಗೆ ಭಾವಗೀತೆಯ ಪ್ರಮುಖ ಗುಣಗಳಾದ ಭಾವಸಾಂದ್ರತೆ, ಸಂಕ್ಷಿಪ್ತತೆ ಮತ್ತು ಗೇಯತೆ ಬಸವಣ್ಣನವರ ಕೃತಿಯಲ್ಲಿ ಸಲೀಲವಾಗಿ ಒಡಮೂಡಿವೆ. ಈ ಭಾವಗೀತೆಗಳಲ್ಲಿ ಲಕ್ಷಿಸಬೇಕಾದ ಇನ್ನೂ ಒಂದು ವೈಶಿಷ್ಟ್ಯವೇನೆಂದರೆ, ಇಲ್ಲಿನ ಭಾವಗಳು ಉಕ್ಕುಕ್ಕುವ ಬರಿಯ ನೊರೆಯ ವಿಲಾಸವಾಗಿಲ್ಲ ; ಬೌದ್ಧಿಕಸೌಷ್ಠವದಿಂದ ಕೂಡಿ ಸಬಲ, ಘನ, ವಾಸ್ತವ ಅನುಭೂತಿ

ಗಳಾಗಿವೆ. "ಬುದ್ಧಿ ಭಾವಗಳ ವಿದ್ಯುದಾಲಿಂಗನ'ಕ್ಕೆ ಎಷ್ಟೋ ಪ್ರೋಜ್ವಲ ನಿದರ್ಶನಗಳನ್ನು ನಾವು ಬಸವೇಶ್ವರ ವಚನಗಳಲ್ಲಿ ಕಾಣಬಹುದು.

ಕೆಲವು ಅತ್ಯುತ್ಕೃಷ್ಟ ವಚನಗಳನ್ನು ಮಾತ್ರ ಆರಿಸಿಕೊಂಡು, ಅವುಗಳಲ್ಲಿ ಬಸವಣ್ಣನವರ ಪ್ರತಿಭೆಯನ್ನು ಯಥಾಮತಿಯಾಗಿ ಕಂಡುಕೊಳ್ಳುವ ಪ್ರಯತ್ನ ಮುಂದೆ ನಡೆದಿದೆ. ಆದರೆ ಉಳಿದ ವಚನಗಳಲ್ಲೂ ಬೇಕಾದಷ್ಟು ಕಡೆ ಕಾವ್ಯಶ್ರೀಯ ಅಮೃತ ಸ್ಪರ್ಷವಿದೆಯೆಂಬುದನ್ನು ಮರೆಯಬಾರದು. ಕೇವಲ ಸೌಕರ್ಯದೃಷ್ಟಿಯಿಂದ ಇಲ್ಲಿನ ವಚನಗಳ ಆಯ್ಕೆ.

೨

ಬಸವಣ್ಣನವರ ವಚನಗಳನ್ನು ಸ್ಥೂಲವಾಗಿ ಎರಡು ವಂಗಡ ಮಾಡಬಹುದು. ಅವರ ಅಂತರಂಗ ಪ್ರಪಂಚವನ್ನು ಚಿತ್ರಿಸುವ ವಚನಗಳು ಒಂದು ವರ್ಗ : ಇವುಗಳಲ್ಲಿ ಅವರ ಸಾಧಕಾವಸ್ಥೆಯ ಒಳತೋಟಿ ತುಮುಲ, ತಳಮಳಗಳೂ ಅನಂತರದ ಪರಿಣತಿ ಸಾಕ್ಷಾತ್ಕಾರಗಳೂ ನಿರೂಪಣಗೊಂಡಿವೆ. ಬಾಹ್ಯಲೋಕದ ನಡವಳಿಕೆಗೆ ಪ್ರತಿಕ್ರಿಯೆಯಾಗಿ ಅವರು ನುಡಿದಿರುವ ವಚನಗಳು ಮತ್ತೊಂದು ವರ್ಗ : ಮಾರ್ಮಿಕ ವ್ಯಂಗ್ಯ, ವಿಡಂಬನ, ಉಪದೇಶ ಮುಂತಾದುವು ಇಲ್ಲಿ ಬರುತ್ತವೆ. ಹೀಗೆ ಎರಡು ದಿಶೆಗಳಲ್ಲಿ ಬಸವೇಶ್ವರರ ಗಾಢಾನುಭವ ವಚನವಿಸ್ಫುಲಿಂಗಗಳನ್ನು ಹೊರಚೆಲ್ಲಿದೆ. ಒಂದು ಕಲ್ಪನೆ, ಒಂದು ಉಪಮೆ, ಒಂದು ರೂಪಕ, ಒಂದು ಪ್ರತಿಮೆ, ಒಂದು ಚಿತ್ರ ಅಥವಾ ಒಂದು ಸ್ವಭಾವೋಕ್ತಿ ಆಯಾ ವಚನದಲ್ಲಿ ಕಂಡುಬಂದು ಬಸವಣ್ಣನವರ ಕವಿಹೃದಯವನ್ನು ಪ್ರಮಾಣೀಕರಿಸುವ ಸಾಕ್ಷಿಯಾಗುತ್ತದೆ.

ಅವರು ತಮ್ಮ ವಚನ ರಚನೆಯಲ್ಲಿ ಏನೊ ಕೊರತೆಯನ್ನು ಮನಗಂಡು ಅತೃಪ್ತರಾಗಿ ಹಿಂದಿನವರ ಸೂಕ್ತಿಗಳನ್ನು ಕೊಂಡಾಡುವಾಗ ಮಾಡಿರುವ ಈ ಚಿತ್ರವೊಂದು ಸಾಕು ಅವರ ಕವಿಮನೋಧರ್ಮದ ಪ್ರಕಾಶನಕ್ಕೆ :

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು,
ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ ಉಪ್ಪುನೀರನುಂಬವನ
ವಿಧಿಯಂತಾಯಿತ್ತೆನ್ನ ಮತಿ !

Digitalized by e-Sahithya Documentation Forum
Sponsored by Sarayu Foundation Trust

ಈ ತೊರೆಯ ಚಿತ್ರ ಅತ್ಯಂತ ಮನೋಹರವಾಗಿದೆ; ಭಾವಿಸಿದಷ್ಟೂ ಸಂತೋಷಪ್ರದವಾಗಿದೆ. ಇದು ಕಲ್ಪನೆಯಾದರೂ ಉತ್ಪ್ರೇಕ್ಷೆ ಇಲ್ಲಿ ಲೇಶಮಾತ್ರವಾದರೂ ಇದೆಯೆಂದೆನಿಸುವುದಿಲ್ಲ. ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆತೆರೆ ಎಂಬ ರೂಪಕಗಳು ವಸ್ತುಸ್ಥಿತಿಯ ನೈಜ ಚಿತ್ರಗಳೇ ಆಗಿವೆ; ಬೆಲ್ಲಕ್ಕೂ ಕೆಸರಿಗೂ, ಸಕ್ಕರೆಗೂ ಮಳಲಿಗೂ, ತವರಾಜಕ್ಕೂ ನೊರೆತೊರೆಗೂ ನಿಕಟವಾದ ರೂಪಸಾಮ್ಯವಿದೆಯಷ್ಟೆ. ಇಲ್ಲಿ ಬಸವಣ್ಣನವರು ಆದ್ಯರ ವಚನವನ್ನು ಅಮೃತದ ಹೊಳೆಗೂ ಮಧುವಿನ ತೊರೆಗೂ ಹೋಲಿಸಿಲ್ಲ; ಭೂಮಿಯದೇ ಆಗಿದ್ದು ಸುಪರಿಚಿತವಾಗಿರುವ, ತುಷ್ಟಿಪುಷ್ಟಿವರ್ಧಕವಾದ ಹಾಲಿನ ತೊರೆ ಅವರಿಗೆ ಪ್ರಿಯವಾಗಿದೆ. ಅದು ಸುಲಭ್ಯವಾಗಿರುವಾಗ ಬೇರೆ ಬಾವಿಯನ್ನೇಕೆ ತೋಡಬೇಕು! ಅದರಿಂದ ವೃಥಾ ಶ್ರಮ; ತೋಡಿದ ಮೇಲೆ ಸಿಕ್ಕುವುದಾದರೊ ಉಪ್ಪುನೀರು. ಆದ್ಯರ ವಚನಕ್ಕೂ ತಮ್ಮ ವಚನಪ್ರಯತ್ನಕ್ಕೂ ಇರುವ ವೈಷಮ್ಯವನ್ನು ಬಸವಣ್ಣನವರು ಇಲ್ಲಿ ಪರಿಣಾಮಕಾರಿಯಾಗಿ ಮೂಡಿಸಿದ್ದಾರೆ. ಬರಿಯ ನೀರ ತೊರೆಯನ್ನು ಪ್ರಸ್ತಾಪಿಸಿದ್ದರೂ ಅವರ ಉದ್ದೇಶಕ್ಕೆ ಅದು ಸಾಕಾಗುತ್ತಿತ್ತು; ಆದರೆ ಅವರ ಪ್ರತಿಭೆ ಹಾಲ ತೊರೆಯನ್ನೆ ಹರಿಸಿದೆ.

ಈ ವಚನದ ಅಭಿಪ್ರಾಯದಲ್ಲಿ ಭಕ್ತಸಹಜವಾದ ಸದ್ವಿನಯ ವ್ಯಕ್ತವಾಗುತ್ತದೆಯೆ ಹೊರತು, ಬಸವಣ್ಣನವರ ಮಟ್ಟಿಗೆ ಈ ಮಾತು ಸತ್ಯದೂರವಾದುದು. ಅವರ ವಚನಕ್ಕಿಂತ ಶ್ರೇಷ್ಠವಾದ ಹಾಲತೊರೆಯನ್ನು ಬೇರೆಲ್ಲಿಂದ ತರೋಣ? ಅವರು ತೋಡಿರುವುದು ಬರಿಯ ಬಾವಿಗಳನ್ನು ಎಂದಿಟ್ಟುಕೊಂಡರೂ ಅವು ಸಿಹಿನೀರಿನ ಬಾವಿಗಳು. ತೊರೆಗಳು ಮನೆಯಿಂದ ಸ್ವಲ್ಪವಾದರೂ ದೂರವಿರುತ್ತವೆ; ಅಲ್ಲದೆ, ಎಂತಹ ತೊರೆಯೂ ಬೇಸಗೆಯಲ್ಲಿ ಬತ್ತಿಹೋಗದಿರದು. ಆದರೆ ಬಸವಣ್ಣನವರು ಮನೆ ಮನೆಯ ಮುಂದೆ ತೋಡಿರುವ ಸಿಹಿನೀರಿನ ಬಾವಿಗಳು ಎಂದೂ ಆರದ ಒರತೆಗಳು; ಅವು ನಮಗೆ ಸಾಕು. ಅವರು ಮಾಡಿದ ಈ ಲೋಕೋಪಕಾರ, ಜನಸೇವೆ ಅನುಪಮವಾದುದು.

ಬಸವಣ್ಣನವರ ಚಿತ್ತವೃತ್ತಿ ಮೂಲತಃ ಕವಿಯದು ಎಂಬುದನ್ನು ಕೆಳಗಿನ ವಚನ ಕೂಡ ಚೆನ್ನಾಗಿ ತೋರಿಸಿಕೊಡುತ್ತದೆ. ಜಂಗಮಕ್ಕೆ ನೀಡಿದ್ದು ಲಿಂಗಕ್ಕೆ ಸಮರ್ಪಿತವೆಂದು ಸಾರುವಾಗ ಅವರು ಹೀಗೆ ಉದ್ಗರಿಸುತ್ತಾರೆ :

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ
ಮೇಲೆ ಪಲ್ಲವಿಸಿತ್ತು ನೋಡಾ!!

"ಎಲ ಎಲಾ! ಇದೇನು! ಬುಡದಲ್ಲಿ ನೀರು ಕುಡಿದು ಮೇಲೆಲ್ಲೊ ಪಲ್ಲವಿಸುತ್ತದಲ್ಲ ಈ ಮರ! ಇಲ್ಲಿ ಹಾಕಿದ ನೀರು ಅಲ್ಲಿಗೆ ಹೇಗೆ ಹೋಗಿ ಚಿಗುರಾಯಿತು? ಎಂತಹ ಸೃಷ್ಟಿ ವೈಚಿತ್ರ್ಯ!" ಎಂದು ಬೆರಗಾಗಿ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಭಂಗಿಯನ್ನು ಅಭಿನಯಿಸಿ ತೋರುವಂತಿದೆ ಬಸವಣ್ಣನವರ ಮಾತಿನ ಧಾಟಿ. ಈ ಮುಗ್ಧ ವಿಸ್ಮಯವೆ ಕವಿಮನೋಧರ್ಮದ ಮೂಲ; ಕಾವ್ಯದ ಸೆಲೆ. ಇಂತಹ ವಿಸ್ಮಯ ಪ್ರವೃತ್ತಿಯ ವ್ಯಕ್ತಿ ಕವಿಯಲ್ಲವೆನ್ನುವುದಾದರೆ ಬೇರಾರಿಗೆ ಆ ಹೆಸರು?

ಭಗವಂತನ ನಿಲುವನ್ನು ಬಣ್ಣಿಸುವಾಗ ಬಸವಣ್ಣನವರು ಸಾರ್ಥಕವಾದ ಈ ಉಪಮಾಪರಂಪರೆಯನ್ನು ನಿಲ್ಲಿಸುತ್ತಾರೆ :

ಉದಕದೊಳಗೆ ಬೈಚಿಟ್ಟ ಬಯಕೆಯ ಕಿಚ್ಚಿನಂತೆ ಇದ್ದಿತ್ತು;
ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು;
ನನೆಯೊಳಗಣ ಪರಿಮಳದಂತೆ ಇದ್ದಿತ್ತು;
ಕೂಡಲ ಸಂಗಮದೇವರ ನಿಲುವು
ಕನ್ಯೆಯ ಸ್ನೇಹದಂತೆ ಇದ್ದಿತ್ತು!

ಪರಮಾತ್ಮ ಸಚರಾಚರಗಳಲ್ಲೆಲ್ಲ ಇದ್ದಾನೆ, ಅವನು ಸರ್ವಾಂತರ್ಯಾಮಿ ಎಂಬ ಭಾವನೆ ಪ್ರಾಚೀನವಾದದ್ದೆ. ಆದರೆ ಅವನು ವಸ್ತುಗಳಲ್ಲಿ ಹೇಗೆ ಇದ್ದಾನೆ ಎಂಬ ಪ್ರಶ್ನೆಗೆ ಬಸವಣ್ಣನವರಂತೆ ಅನನ್ಯವಾದ ರೀತಿಯಲ್ಲಿ, ಕಾವ್ಯಾತ್ಮಕವಾಗಿ ಬೇರೆ ಯಾರೂ ಉತ್ತರ ಕೊಟ್ಟಿರಲಿಲ್ಲ. ನೀರಿನೊಳಗಿರುವ ಬೆಂಕಿ, ಶಶಿ (ಸಸಿ) ಯೊಳಗಿರುವ ರಸದ ರುಚಿ, ಮೊಗ್ಗಿನೊಳಗಿರುವ ಪರಿಮಳ, ಕನ್ಯೆಯಲ್ಲಿರುವ ಸ್ನೇಹ ದೃಗ್ಗೋಚರವಲ್ಲ. ಆದರೆ ಅವು ಸುಪ್ತವಾಗಿರುವುದು ಸತ್ಯ. ಈ ಗುಣಗಳನ್ನು ಆಯಾ ವಸ್ತುವಿನಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ; ಅಷ್ಟರಮಟ್ಟಿಗೆ ಅವುಗಳಲ್ಲಿ ಅವಿನಾಭಾವ ಸಂಬಂಧವುಂಟು, ಭಗವಂತನ ಇರವಾದರೂ ಇಂತೆಯೆ. ಅವನು ಎಲ್ಲದರಲ್ಲೂ ಅವ್ಯಕ್ತವಾಗಿ ಅಡಗಿಕೊಂಡಿದ್ದಾನೆ; ಬಾಹ್ಯಚಕ್ಷುವಿಗೆ ಕಾಣುತ್ತಿಲ್ಲ. ಅವನು ಹೃದಯಾನುಭವ ವೇದ್ಯ; ಸಾಧನೆಯಿಂದ ಸಾಕ್ಷಾತ್ಕಾರ ಸಾಧ್ಯ. ಬೇರೆ

Digitalized by e-Sahithya Documentation Forum
Sponsored by Sarayu Foundation Trust

ಬೇರೆ ದಿಕ್ಕುಗಳಿಂದ ತಂದ ಸರಳವಾದ ಉಪಮೆಗಳಿಂದ ಬಸವಣ್ಣನವರು ಹಿರಿಯ ಸತ್ಯವೊಂದನ್ನು ಇಲ್ಲಿ ಮನಮುಟ್ಟುವಂತೆ ಪ್ರಕಟಿಸಿದ್ದಾರೆ.

ಪರಮಭಕ್ತರಾದ ಬಸವೇಶ್ವರರ ಭಗವದ್‌ರತಿಯ ಪರಾಕಾಷ್ಠೆಯನ್ನು ಈ ವಚನ ಸುಂದರವಾಗಿ ಧ್ವನಿಸುತ್ತದೆ :

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ;
ಅಂಬುಜಕೆ ಭಾನುವಿನ ಉದಯದ ಚಿಂತೆ ;
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ ;
ಎನಗೆ ನಮ್ಮ ಕೂಡಲ ಸಂಗಮದೇವರ ನೆನೆವುದೇ ಚಿಂತೆ !

ಇಲ್ಲಿ ಬಸವಣ್ಣನವರು ಚಕೋರ, ಅಂಬುಜ, ಭ್ರಮರಗಳ ಸಾಲಿನಲ್ಲಿ ತಮ್ಮನ್ನು ತಾವು ನಿಲ್ಲಿಸಿಕೊಂಡಿದ್ದಾರೆ. ಚಕೋರಕ್ಕೆ ಚಂದ್ರನ ಬೆಳಗು, ತಾವರೆಗೆ ಸೂರ್ಯನ ಉದಯ, ಭ್ರಮರಕ್ಕೆ ಹೂವಿನ ಜೇನು ಬರಿಯ ಚಿಂತೆಯ ಅಥವಾ ವ್ಯಸನದ ವಸ್ತುಗಳಲ್ಲ; ಜೀವಿತಕ್ಕೆ ಅನಿವಾರ್ಯವಾದ ಆಲಂಬನಗಳು. ಚಂದ್ರನಿಲ್ಲದ ಚಕೋರ, ಸೂರ್ಯನಿಲ್ಲದ ತಾವರೆ, ಬಾಡಿಲ್ಲದೆ ಭ್ರಮರ ಬದುಕಲಾರವು; ಬೇರೆ ಆಶ್ರಯ ಅವಕ್ಕಿಲ್ಲ. ಹಾಗೆಯೆ ಬಸವಣ್ಣನವರಿಗೆ ಕೂಡಲ ಸಂಗಮದೇವನೇ ಜೀವಾಳ. ಆ ಶರಣ ಚೇತನಕ್ಕೆ ಭಗವಂತನ ಕೃಪೆಯೆ ಆಧಾರ, ಆಹಾರ. ಆದ್ದರಿಂದಲೇ ಸದಾ ಅವನನ್ನು ನೆನೆಯುವ ಚಿಂತೆ ಬಸವಣ್ಣನವರಿಗೆ.

ಅನನ್ಯ ಶರಣಾಗತಿಯ ಈ ಭಾವವನ್ನೆ ಕೆಳಗಿನ ವಚನ ಮತ್ತೂ ಸ್ಪಷ್ಟವಾಗಿ ನಿರೂಪಿಸುತ್ತದೆ :

ಎನಗೆ ನಿಮ್ಮ ನೆನಹಾದಾಗಲೇ ಉದಯ !
ಎನಗೆ ನಿಮ್ಮ ಮರಹಾದಾಗಲೇ ಅಸ್ತಮಾನ !
ಎನಗೆ ನಿಮ್ಮ ನೆನಹೇ ಜೀವ....ಕಾಣಾ ತಂದೆ ;
ಸ್ವಾಮಿ, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯ !

ಮೊದಲಿನ ಎರಡು ಪಂಕ್ತಿಗಳು ಶಕ್ತಿವತ್ತಾಗಿವೆ. ಬಸವಣ್ಣನವರು ಇಲ್ಲಿ ಹೇಳುತ್ತಿರುವುದು ಬಾಹ್ಯ ಭೌತಿಕ ಉದಯಾಸ್ತಮಾನಗಳನ್ನಲ್ಲ. ಯಾವ ಕಾಲ ನಿಯಮವೂ ಇಲ್ಲದೆ ಯಾವಾಗ ಬೇಕಾದರೂ ಸಂಭವಿಸಬಹುದಾದ ಆತ್ಮದ

ಉದಯಾಸ್ತಗಳನ್ನು ಅವರಿಲ್ಲಿ ಉಲ್ಲೇಖಿಸುತ್ತಿದ್ದಾರೆ. ಮನದಲ್ಲಿ ಭಗವಂತನ ನೆನಹು ತುಂಬಿ ನಿಂತಿರುವಾಗ ಅದೇ ಉದಯಕಾಲ, ಹಿಗ್ಗಿನ ಮೂಲ ; ಅದೇ ಸ್ವರ್ಗ. ಒಂದು ವೇಳೆ ಭಗವಂತನ ಮರೆವು ಕವಿದರೆ ಅದೇ ಅಸ್ತಮಾನ, ಕಗ್ಗತ್ತಲು; ಅದೇ ಮರ್ತ್ಯ. ಹೀಗೆ ಜ್ಞಾನ–ಅಜ್ಞಾನಗಳಿಗೆ, ಉದ್ಧಾರ-ಪತನಗಳಿಗೆ ಉದಯಾಸ್ತಮಾನಗಳು ಇಲ್ಲಿ ಪ್ರತೀಕವಾಗಿವೆ. ["ಅರಿತರೆ ಶರಣ, ಮರೆತರೆ ದಾನವ" ಎಂಬ ಸುಭಾಷಿತದಲ್ಲೂ ಇದೇ ಅರ್ಥ ಇಂಗಿತವಾಗಿದೆ.] ಆದರೆ "ಎನಗೆ ನಿಮ್ಮ ನೆನಹವೇ ಜೀವ...." ಎಂಬ ಮಾತಿನಲ್ಲಿ ಮೇಲಿನ ಚರಣಗಳ ಧ್ವನಿ ವಾಚ್ಯಗೊಂಡಿದೆ. ಬಸವಣ್ಣನವರು ಎಷ್ಟೋ ಕಡೆ ಹೀಗೆ ಮಾಡುತ್ತಾರೆ. ಅವರ ಉದ್ದೇಶ ಬರಿಯ ಕಾವ್ಯಸೃಷ್ಟಿಗಿಂತ ಭಿನ್ನವಾದುದರಿಂದ, ತಮ್ಮ ಆಶಯ ಸುಸ್ಪಷ್ಟವಾಗಲೆಂದೊ ಏನೊ ಅವರು ತಮಗೆ ತಾವೆ ವ್ಯಾಖ್ಯಾನಕಾರರಾಗುವುದುಂಟು.

"ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯ" ಎಂಬ ನುಡಿ ಬಹಳ ಸೊಗಸಾಗಿದೆ. ಭಗವಂತನ ಚರಣಮುದ್ರೆ ತಮ್ಮ ಹೃದಯದಲ್ಲಿ ಸುಪ್ರತಿಷ್ಠಿತವಾಗಲೆಂದು ಹಾರೈಸುತ್ತಿದ್ದಾರೆ ಬಸವಣ್ಣ. ಈ ಭಗವನ್ಮುದ್ರೆಯಿಂದ ಭಕ್ತ–ಭಗವಂತರ ಸಂಬಂಧದ ಕರಾರು ಪರಿಪೂರ್ಣವಾಗುತ್ತದೆ. ಆ ಪತ್ರದಲ್ಲಿ ಮತ್ತಾರೂ ಮತ್ತೇನನ್ನೂ ಬರೆಯುವಂತಿಲ್ಲ. ಇನ್ನು ಅದು ದೇವಾರ್ಪಿತ, ಸುರಕ್ಷಿತ, ಮೀಸಲು.

ಬೇರೊಂದು ಸಂದರ್ಭದಲ್ಲಿ ಬಂದಿರುವ ಈ ವಚನ ಭಗವತ್‌ಕೃಪೆಯ ಅನಿವಾರ್ಯ ಅವಶ್ಯಕತೆಯನ್ನು ಅತ್ಯಂತ ಜ್ವಲಂತವಾದ ರೂಪಕದ ಮೂಲಕ ಮನಗಾಣಿಸುತ್ತದೆ :

ಒಲೆ ಹತ್ತಿ ಉರಿದಡೆ ; ಲಬಹುದಲ್ಲದೆ ಧರೆ ಹತ್ತಿ ಉರಿದರೆ
ನಿಲಬಾರದು !
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವೊಡೆ, ನಾರಿ ತನ್ನ
ಮನೆಯಲ್ಲಿ ಕಳುವೊಡೆ,
ತಾಯ ಮೊಲೆವಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂರುವೆ ?
ತಂದೆ ಕೂಡಲ ಸಂಗಮದೇವ,
ನೀ ಹುಟ್ಟಿಸಿ ಜೀವನ ಭವದುಃಖಿಯ ಮಾಡಿದ ಬಳಿಕ
ಬಿಡಿಸುವರಾರುಂಟು ?

Digitalized by e-Sahithya Documentation Forum
Sponsored by Sarayu Foundation Trust

ತನಗೆ ದೇವರು ಒಲಿಯಲಿಲ್ಲವೆನಿಸಿದಾಗ ಬಸವಣ್ಣನವರಿಗಾದ ಯಾತನೆಯ ಚಿತ್ರವಿದು. ಪ್ರಚಂಡಾನುಭವವೊಂದರ ವಿಶಿಷ್ಟ ಅಭಿವ್ಯಕ್ತಿ ಇಲ್ಲಿದೆ. ಒಲೆ ಹತ್ತಿ ಉರಿಯತೊಡಗಿದರೆ ಏನೂ ತೊಂದರೆಯಾಗದು; ಮೈ ಸುಡದಂತೆ ದೂರ ಹೋಗಬಹುದು. ಒಂದು-ವೇಳೆ ಮನೆಯೆ ಹೊತ್ತಿಕೊಂಡರೂ ಯೋಚನೆಯಿಲ್ಲ, ಹೊರ ಹೋಗಿ ಬದುಕಿಕೊಳ್ಳಬಹುದು. ಆದರೆ ನಮ್ಮ ಅಸ್ತಿತ್ವಕ್ಕೆ ಆಧಾರಭೂತವಾದ ಭೂಮಂಡಲವೇ ಹೊತ್ತಿಕೊಂಡು ಧಗಧಗಿಸತೊಡಗಿದರೆ ಗತಿಯೇನು? ಆಗ ನಿಲ್ದಾಣ ಯಾವುದು, ಆಶ್ರಯ ಸ್ಥಾನ ಯಾವುದು? ಯಾವ ಶಕ್ತಿ ತಾನೆ ಆ ಘೋರ ವಿಲಯಜ್ವಾಲೆಗಳನ್ನು ನಂದಿಸೀತು? ಅಂಥ ಸಮಯದಲ್ಲಿ ಉಂಟಾಗುವುದು ಒರಿಯ ನಿರಾಶ್ರಿತ ಸ್ಥಿತಿಯಷ್ಟೆ ಅಲ್ಲ; ದೇಹವೆಲ್ಲ ಅಗ್ನಿಸ್ನಾತವಾಗಿ ಅಸಹ್ಯ ವೇದನೆಯಿಂದ ಮಿಡುಕತೊಡಗುತ್ತದೆ. ಭಗವತ್ಕಾರುಣ್ಯದಿಂದ ವಂಚಿತವಾಗುವ ಜೀವಕ್ಕೆ ಆಗುವ ಅನುಭವ ಇಂಥದು; ಬಸವಣ್ಣನವರಿಗೆ ಆದದ್ದು ಹೀಗೆ. ಈ ವಚನದಲ್ಲಿ ಇಡೀ ಪೃಥ್ವಿ ಭಗವಂತನಿಗೆ ಪ್ರತೀಕವಾಗಿದೆ. ಹೌದು, ಅವನ ಸೃಷ್ಟಿಯೆ ಅವನಿಗೆ ಭವ್ಯವಾದ ಪ್ರತಿಮೆ; ಬೇರಾವುದೂ ಅಲ್ಲ. ಸಾಮಾನ್ಯ ಸಾಂಸಾರಿಕ ಸ್ಥಿತಿಗತಿಗಳಿಗೆ ಒಲೆ ಪ್ರತೀಕವಾಗಿ ಬಂದಿದೆ. ಈ ಪ್ರಥಮ ರೂಪಕದ ರುಂದ್ರಸತ್ವ ವಚನದ ಉಳಿದ ರೂಪಕಗಳಿಗಿಲ್ಲ; ಅವು ಸಾಂಪ್ರದಾಯಿಕವಾಗಿದ್ದು, ಮೇಲಿನ ಭಾವಕ್ಕೆ ವಿವರಣೆ ನೀಡುತ್ತವೆ.

(ಸಶೇಷ)

ಪರಹಿತ

ತೀವಿದರೂ ಫಲಗಳಿಂ ಮರವೊಂದಂ ತಾನು
ಸವಿಯುವುದೆ ಮಧುರ ರುಚಿರವನು ಎಂದು ?
ಬೆಳೆದರೆ ಧನವದು ಸಾಧು-ಸಜ್ಜನರಲ್ಲಿ
ಬಳಕೆಯಾಗದೆ ಪರಹಿತಕೆ ಮರದ ತೆರದಿ ?

—ಗುರುಪಾದ ಸೂರಗೊಂಡ

ಚಿಂತನಾ

ಸಂಗ್ರಹ: ಎಂ. ಗಂಗಮ್ಮ

ಮೂರು ಪ್ರಕಾರದ ಗುರುಗಳು

ತಾಯಂದಿರಲ್ಲಿ ಮೂರು ಪ್ರಕಾರ. ಮಗುವಿನ ಹಸಿವು ಆವಶ್ಯಕೆಗಳನ್ನನುಸರಿಸಿ ತಾನಾಗಿಯೇ ತಿಳಿದು ಹೊತ್ತಿಗೆ ಸರಿಯಾಗಿ ಹಾಲನ್ನೂಡಿಸಿ, ಅನ್ನವನ್ನುಣ್ಣಿಸಿ ಪೋಷಿಸುವವಳು ಸಾತ್ವಿಕಳಾದ ಉತ್ತಮ ತಾಯಿ. ಮಗುವು ಹಸಿವಿನಿಂದ ಅತ್ತಾಗ ತನ್ನ ಚಿತ್ತವನ್ನು ಹರಿಸಿ ಪೋಷಿಸುವವಳು ಮಧ್ಯಮ ವರ್ಗದ ರಾಜಸಿಕ ತಾಯಿ. ಮಗುವು ಅತ್ತರೂ, ಚೀರಾಡಿದರೂ, ಬೊಬ್ಬೆ ಹಾಕಿದರೂ ತನ್ನ ಚಿತ್ತವನ್ನೇ ಅತ್ತ ಹರಿಸದೆ ಕೇವಲ ತನ್ನ ವೈಭವ, ವಿಲಾಸ, ಆಸಕ್ತಿಗಳಲ್ಲಿ ತಲ್ಲೀನವಾಗುವವಳೇ ಅಧಮಳಾದ ತಮೋಗುಣಿಯಾದ ತಾಯಿ. ಅದೇ ರೀತಿ ಗುರುಗಳಲ್ಲಿ ಮೂರು ವಿಧ. ಉತ್ತಮನಾದವನು ಸಮಾಜದ ಆಗು-ಹೋಗು, ಆವಶ್ಯಕತೆಯನ್ನನುಸರಿಸಿ ತಾನಾಗಿಯೆ ಮುಂದಾಗಿ ಧರ್ಮ ಜಾಗೃತಿ, ಸಮಾಜ ಸೇವೆಗಳಲ್ಲಿ ತಲ್ಲೀನನಾಗುವನು. ಅದರ ಹಿತ ಅಹಿತಗಳ ಬಗ್ಗೆ ನಿತ್ಯಾನಿತ್ಯ ವಿವೇಕ ಪ್ರಜ್ಞೆಯಿಂದ ಚಿಂತಿಸಿ ಒಳಿತನ್ನೇ ಮಾಡುವನು. ಎರಡನೆಯ ಪ್ರಕಾರದ ಗುರುವೆಂದರೆ, ಜನರು ತಾವಾಗಿಯೇ ಆಮಂತ್ರಿಸಿದಾಗ, ಕಾರ್ಯಕ್ರಮ ಏರ್ಪಡಿಸಿದಾಗ ಅವರ ಕರಗೆ ಓಗೊಟ್ಟು ಜನರ ಬಳಿಗೆ ಹೋಗಿ ಅಷ್ಟಿಷ್ಟು ಧರ್ಮಬೋಧೆ ಮಾಡುವವರು. ಇನ್ನು ಮೂರನೆಯ ಪ್ರಕಾರದ ಗುರುವೆಂದರೆ, ಸಮಾಜದ ಹಿತದ ಬಗ್ಗೆ ಎಳ್ಳಷ್ಟೂ ಗಮನ ಕೊಡದೆ, ಕೇವಲ ಮಠದ ಆವರಣದಲ್ಲಿಯೇ ಬಂಧಿತರಾಗಿ ಅಥವಾ ಸೀಮಿತವಾಗಿ, ಮಠ, ಪೀಠ, ಆಸ್ತಿಗಳ ಬೆಳವಣಿಗೆಯಲ್ಲಿಯೇ ಆಸಕ್ತರಾಗಿ ಸಮಾಜದ ಸುಖದುಃಖಗಳ ಚಿಂತನೆಯ ಬಗ್ಗೆ ಗಮನವನ್ನೇ ಹರಿಸದ ಬಗೆ ಇವರದು.

—ಜಗದ್ಗುರು ಮಾತೆ ಮಹಾದೇವಿ

ವಿಶ್ವ ಕಲ್ಯಾಣ ಮಿಷನ್—ಉಗಿಬಂಡಿ

ಒಂದು ಉಗಿಬಂಡಿ ಸಾವಿರಾರು ಜನರನ್ನು ಕೂಡಿಸಿಕೊಂಡು, ವೇಗದಿಂದ ಓಡುತ್ತಿರುತ್ತದೆ. ಅದು ಬೆಂಗಳೂರಿನಿಂದ ಕಾಶಿಗೆ ಹೊರಟಿರುತ್ತದೆ. ಆಗ

Digitalized by e-Sahithya Documentation Forum
Sponsored by Sarayu Foundation Trust

ಕೆಲವರು ಕಾಶಿಗೆ ಈ ಉಗಿಬಂಡಿ ಹೋಗುವುದಿಲ್ಲ ಎಂದು ಕಲ್ಪಿಸಿಕೊಂಡು ರೇಲ್ವೆ ಪ್ಲಾಟ್‌ಫಾರ್ಮಿನಲ್ಲಿ ಅಪನಂಬಿಕೆಯಿಂದ ಕುಳಿತುಕೊಳ್ಳುತ್ತಾರೆ. ಇನ್ನು ಕೆಲವರು ಈ ಉಗಿಬಂಡಿ ಹೋಗುವುದಿಲ್ಲ, ಎಲ್ಲ ಸುಳ್ಳು ಎಂದು ಅಪಹಾಸ್ಯ ಮಾಡುತ್ತಾರೆ. ಬಂಡಿಯನ್ನು ಹತ್ತುವುದೂ ಇಲ್ಲ. ಇನ್ನು ಕೆಲವರು ಈ ಉಗಿಬಂಡಿಯನ್ನು ಮುಂದೆ ಹೋಗಲೇ ಬಿಡುವುದಿಲ್ಲ ಎಂದು ಟ್ರೇನಿನ ಕಿಟಕಿಗೆ ಕೈಹಾಕಿ ಹಿಂದಕ್ಕೆ ಎಳೆಯಲು ಪ್ರಯತ್ನಿಸುತ್ತಾರೆ. ಆದರೆ ಉಗಿಬಂಡಿಯ ಶಕ್ತಿ ದೊಡ್ಡದು. ಅದು ಮುಂದಕ್ಕೆ ಹೋಗಿಯೇಬಿಡುತ್ತದೆ. ಅಲ್ಲದೆ ಕೆಲವರು ಬಲವಾದ ಟ್ರೇನ್ ಮುಂದಕ್ಕೆ ಹೋಗಿಯೇಬಿಟ್ಟಾಗ ಕೈಕಾಲುಗಳನ್ನೇ ಮುರಿದುಕೊಳ್ಳುವರು. ಅದೇ ರೀತಿ ಈ ವಿಶ್ವ ಕಲ್ಯಾಣ ಮಿಷನ್ ಎಂಬ ಟ್ರೇನ್ ಹೊರಟಿದೆ. ಇದು ವಿಶ್ವ ಕಲ್ಯಾಣ ಮತ್ತು ಮಾನವ ಕಲ್ಯಾಣವೆಂಬ ಗುರಿ ಹೊತ್ತು ದೈವೀರಾಜ್ಯಕ್ಕೆ ಹೊರಟಿದೆ. "ಇದೇನು ಗುರಿ ಸಾಧಿಸುವುದು ?" ಎಂದು ಅವಿಶ್ವಾಸ ಮಾಡಿ ಕೆಲವರು ಹತ್ತದಿರಬಹುದು, ಅಸಹಕಾರ ಮಾಡಬಹುದು ಅಥವಾ ಗುರಿಯನ್ನು ತಲ್ಪದು ಎಂದು ಅಪಹಾಸ್ಯ ಮಾಡಬಹುದು ಅಥವಾ ಮುಂದಕ್ಕೆ ಶಕ್ತಿಯುತವಾಗಿ ಸಾಗುತ್ತಿರುವ ಸಂಸ್ಥೆಯನ್ನು ಹಿಂದಕ್ಕೆಳೆಯಲು ಪ್ರಯತ್ನಿಸಬಹುದು. ಆದರೆ ವಿಶ್ವಗುರು ಬಸವಣ್ಣನವರೆಂಬ ಚಾಲಕನನ್ನು ಕುಳ್ಳಿರಿಸಿಕೊಂಡು, ದೈವೀಶಕ್ತಿಯ ವಿದ್ಯುತ್ ಬಲದಿಂದ ಸಾಗುವ ಈ ವಿಶ್ವ ಕಲ್ಯಾಣ ಮಿಷನ್ ಗಾಡಿ ಖಂಡಿತಾ ಗುರಿಯನ್ನು ಮುಟ್ಟುವುದೆಂಬ ವಿಶ್ವಾಸ ನನಗಿದೆ.

—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಸತ್ಸಂಗವೆಂದರೇನು ?

ಒಂದು ಆಶ್ರಮದಲ್ಲಿ ಅಥವಾ ಭಜನಾಮಂಡಲಿಯಲ್ಲಿ ಕೂಡಿ ಬದುಕಿದ ಮಾತ್ರಕ್ಕೆ ಅದು ಸತ್ಸಂಗವಾಗದು. ಒಂದು ಭವನದಲ್ಲಿ ಸಾಧಕ ಜೀವಿಗಳು ಇರುತ್ತಾರೆ, ಒಟ್ಟಿಗೆ ಉಣ್ಣುತ್ತಾರೆ, ತಿನ್ನುತ್ತಾರೆ, ಮಲಗುತ್ತಾರೆ, ಏಳುತ್ತಾರೆ ಎಂದ ಮಾತ್ರಕ್ಕೆ ಸತ್ಸಂಗದಲ್ಲಿ ಇದ್ದಂತಾಗದು. ಕುರಿಗಳು ಮಂದೆಯಲ್ಲಿ ಹಾಗೇ ಬಾಳುತ್ತವೆ; ದನಗಳು ಹಾಗೆಯೇ ಹಿಂಡಿನಲ್ಲಿ ಬಾಳುತ್ತವೆ. ಅವಕ್ಕೆಲ್ಲ ಒಟ್ಟಿಗೆ ಹುಲ್ಲು ಹಾಕುತ್ತಾರೆ. ಮುಸುರೆ ಕುಡಿಸುತ್ತಾರೆ, ಕಟ್ಟುತ್ತಾರೆ. ಆಶ್ರಮವಾಸಿಗಳಾದವರು ಗುರುಬಾಂಧವರೆಂಬ ಭಾವಸಂಗಮದಿಂದ ಆತ್ಮೀಯತೆಯಿಂದ ಇರಬೇಕು. ಸದಾಕಾಲ ಸತ್‌ಕಾರ್ಯಕ, ಸತ್‌ಚಿಂತನೆಗಳಲ್ಲಿ ತೊಡಗಬೇಕು. ತನಗೆ ತಿಳಿದುದನ್ನು ಸಹಪಾಠಿಗಳಿಗೆ ಹೇಳಬೇಕು. ಅವರಿಂದ ಮತ್ತೆ ಮತ್ತೆ ಜ್ಞಾನವನ್ನು ಪಡೆಯಬೇಕು, ಚಿಂತನೆ ಮಾಡಬೇಕು, ಚರ್ಚಿಸಬೇಕು. ಬಿಮ್ಮನೆ ಮುಖ ಬಿಗಿದುಕೊಂಡು ತಮ್ಮಷ್ಟಕ್ಕೆ ತಾವು ಇರುವುದು ದೊಡ್ಡಸ್ಥಿಕೆಯಲ್ಲ. ಜ್ಞಾನಮಂಥನ ಸತ್ಸಂಗದಲ್ಲಿ ಸದಾ ನಡೆಯುತ್ತಿರಬೇಕು. ಅದನ್ನೇ ಅಕ್ಕಮಹಾದೇವಿ ಹೇಳುತ್ತಾರೆ :

ಆಡುವುದು ಪಾಡುವುದು ಹೇಳುವುದು ಕೇಳುವುದು
ನಡೆವುದು ನುಡಿವುದು
ಸರಸ ಸಮ್ಮೇಳನವಾಗಿಪ್ಪುದಯ್ಯ.
ಚೆನ್ನಮಲ್ಲಿಕಾರ್ಜುನದೇವಯ್ಯ ನೀ ಕೊಟ್ಟ ಆಯುಷ್ಯ ಉಳ್ಳನ್ನಕ್ಕ
ಲಿಂಗ ಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು.

—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಲೋಕದೃಷ್ಟಿ-ದಿವ್ಯದೃಷ್ಟಿ

ವಿದ್ಯುತ್ತನ್ನು ಬೆಳಗಿಸಿದಾಗ ಬೆಳಕು ಎಲ್ಲರ ಮೇಲೆ ಬೀಳುವುದು. ಆಗ ಸ್ವಾಭಾವಿಕವಾಗಿ ನೋಡುವವರು ಸುತ್ತಲಿನವರು. ಉಟ್ಟ ಬಟ್ಟೆಯ ಆಧಾರದ ಮೇಲೆ ಅಂತಸ್ತನ್ನು ಅಳೆದರೆ ; ಚರ್ಮದ ಆಧಾರದ ಮೇಲೆ ಸೌಂದರ್ಯವನ್ನು ಅಳೆಯುವರು. ಒಟ್ಟಾರೆ ದೃಷ್ಟಿಯು ತುಂಬಾ ಸೀಮಿತ. ಕ್ಷ ಕಿರಣಗಳ ಯಂತ್ರದ ಮುಂದೆ ನಿಲ್ಲಿಸಿದರೆ ಆ ಯಂತ್ರವು ಹೊರಗಣ ದೃಷ್ಟಿಯಿಂದ ಅಳೆಯದೆ ಒಳಗಿನ ಲೋಪಗಳನ್ನು ಮತ್ತು ಆರೋಗ್ಯಕರ ಅಂಶಗಳನ್ನೂ ಎತ್ತಿ ತೋರಿಸುವುದು. ಅದೇ ರೀತಿ ಲೌಕಿಕರ ದೃಷ್ಟಿ ಹೊರಗಿನ ವೇಷಭೂಷಣ–ಅಲಂಕಾರ, ಕುರೂಪ–ಸುರೂಪಗಳ ಕಡೆಗೆ ಇದ್ದರೆ, ಶರಣರ, ಜ್ಞಾನಿಗಳ, ಗುರುಗಳ ದೃಷ್ಟಿ ಬಹಿರಂಗಿಕ ಕೊರತೆಗಳಿಗಿಂತಲೂ ಆಂತರಂಗಿಕ ಕುರೂಪದ ಕಡೆಗಿದ್ದು, ಒಳಗಣ ದೋಷಗಳನ್ನು ಎತ್ತಿ ತೋರಿ, ತಿದ್ದಿಕೊಳ್ಳಲು ಮಾರ್ಗದರ್ಶಕವಾಗುತ್ತದೆ.

ದಕ್ಕನುಂಗಿದಂತೆ ಬಿರೆತುಕೊಂಡಿರಬೇಡ, ಬೀಗಿ ಬೆಳೆದ ಗೊನೆ–ಬಾಳೆಯಂತೆ ಬಾಗಿಕೊಂಡಿರಬೇಕು.

—ವಿಶ್ವಗುರು ಬಸವಣ್ಣ

Digitalized by e-Sahithya Documentation Forum
Sponsored by Sarayu Foundation Trust

ಸ್ವಾಮಿ ವಿವೇಕಾನಂದರ ಬಾಲ್ಯದ ಕೆಲವು ಪ್ರಸಂಗಗಳು

ಶುಭಾಮಣಿ, ಮೈಸೂರು

ಪುಟ್ಟ ಮಕ್ಕಳೇ,

ಈ ವರ್ಷ ನಿಮ್ಮಂತಹ ಮಕ್ಕಳ ವರ್ಷವೆಂದು ನಿಮಗೆ ಈಗಾಗಲೇ ಗೊತ್ತಿದೆಯಲ್ಲವೆ? ನಮ್ಮ ದೇಶದಲ್ಲಿ ಅನೇಕ ಜ್ಞಾನಿಗಳು, ಮಹಾತ್ಮರು ಆಗಿ ಬಂದು ಅಮರರಾಗಿದ್ದಾರೆ. ಅವರನ್ನು ಸ್ಮರಿಸುವುದು ಮತ್ತು ಅವರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳುವುದು ನಮ್ಮೆಲ್ಲರ ಮುಖ್ಯ ಕರ್ತವ್ಯ. ಇದೇ ಜನವರಿ 22 ರಂದು ಸ್ವಾಮಿ ವಿವೇಕಾನಂದರ ಜಯಂತಿ, ಇವರು ನಮ್ಮ ದೇಶದ ಅನೇಕ ಮಹಾಪುರುಷರಲ್ಲಿ ಒಬ್ಬರು. ಇವರು ಭುವನೇಶ್ವರಿ, ವಿಶ್ವನಾಥದತ್ತರ ಮಗ. ರಾಮಕೃಷ್ಣ ಪರಮಹಂಸರ ಶಿಷ್ಯರು. ಅವರ ಮೊದಲ ಹೆಸರು ನರೇಂದ್ರ. ಆ ನರೇಂದ್ರನೇ ಎಲ್ಲರಿಗೂ ವಿವೇಕದ ಬೆಳಕನ್ನು ನೀಡಿ, ಆನಂದವನ್ನು ಉಂಟುಮಾಡಿ ವಿವೇಕಾನಂದ ಆದರು. ಅವರೂ ಸಹ ನಿಮ್ಮ ಹಾಗೆ ಪುಟ್ಟವರಾಗಿದ್ದಾಗ ತುಂಬಾ ತುಂಟರಾಗಿದ್ದರಂತೆ. ಆದರೆ ಅವರ ತುಂಟತನ ಸಾಮಾನ್ಯವಾದ ತುಂಟತನವಾಗಿರಲಿಲ್ಲ. ಅಂತಹ ಒಂದೆರಡು ಪ್ರಸಂಗಗಳನ್ನು ನಿಮಗೆ ತಿಳಿಸುತ್ತೇನೆ.

ಪುಟ್ಟ ನರೇಂದ್ರ ಅಂಜಿಕೆ-ಹೆದರಿಕೆಗಳಿಗೆ ಸ್ವಲ್ಪವೂ ಒಗ್ಗುತ್ತಿರಲಿಲ್ಲ. ಅನೇಕ ಬಾರಿ ಅವನ ತುಂಟತನ ಮಿತಿ ಮೀರಿದಾಗ ಅವನ ತಾಯಿ ಅವನ ತಲೆಯ ಮೇಲೆ ನೀರನ್ನು ಸುರಿದು "ಶಿವ ಶಿವ" ಎನ್ನುತ್ತಿದ್ದಳು. "ನೋಡು ನರೇನ್, ನೀನು ಹೀಗೆಲ್ಲಾ ತುಂಟತನ ಮಾಡಿದರೆ ಶಿವ ಆಮೇಲೆ ನಿನ್ನನ್ನು ಕೈಲಾಸಕ್ಕೆ ಸೇರಿಸುವುದೇ ಇಲ್ಲ" ಎಂದು ಕೋಪಿಸಿಕೊಂಡು ಹೇಳುತ್ತಿದ್ದಳು. ಪುಟ್ಟ ನರೇಂದ್ರ 'ಶಿವನಾಮ' ಮತ್ತು 'ಕೈಲಾಸ' ಎಂಬ ಪದಗಳನ್ನು ಕೇಳಿದೊಡನೇ ನಾಗಸ್ವರವನ್ನು ಆಲಿಸಿದ ನಾಗರದಂತೆ ಸಮ್ಮೋಹನಾಸ್ತ್ರಕ್ಕೆ ಬಲಿಯಾಗಿ ಸುಮ್ಮನಾಗುತ್ತಿದ್ದನಂತೆ. ಇದನ್ನು ನಾವು ವಿಚಾರ ಮಾಡಿದಾಗ "ಬೆಳೆಯುವ ಸಿರಿ ಮೊಳಕೆಯಲ್ಲಿಯೇ" ಎಂಬ ಮಾತಿನ

ಸತ್ಯ ನಮ್ಮೆಲ್ಲರಿಗೂ ಅರಿವು ಆಗದೆ ಇರದು. ಎಷ್ಟು ಚಿಕ್ಕ ವಯಸ್ಸಿಗೇ ಅವರಿಗೆ ದೇವರ ಮೇಲೆ ಭಕ್ತಿ!

ನರೇಂದ್ರ ಒಮ್ಮೊಮ್ಮೆ ತಾಯಿಯೊಡನೆ ಪುರಾಣ ಕೇಳಲು ಹೋಗುತ್ತಿದ್ದ. ಆಗ ರಾಮಾಯಣದ ಪುರಾಣ ಹೇಳುತ್ತಿದ್ದರು. ಒಂದು ದಿನ ಪುರಾಣ ಕೇಳಲು ಹೋಗಿದ್ದಾಗ ಹನುಮಂತನ ಶೌರ್ಯ, ಸ್ವಾಮಿಭಕ್ತಿ ಮುಂತಾದ ವರ್ಣನೆ ಬಾಲಕ ನರೇಂದ್ರನ ಮನಸ್ಸಿನ ಮೇಲೆ ಪರಿಣಾಮ ಬೀರಿತು. ಮುಗ್ಧನಾದ ನರೇಂದ್ರ, ಚಿರಂಜೀವಿಯಾದ ಹನುಮಂತನು ಎಲ್ಲಿ ಸಿಗುತ್ತಾನೆ ಎಂದು ಪುರಾಣ ಹೇಳುವವರನ್ನೇ ಕೇಳಿದ! ಆ ಪುರಾಣಿಕಾರರು ತಮಾಷೆ ಮಾಡಬೇಕೆಂದು ಮನೆಯ ಹಿಂದಿನ ಬಾಳೆಯ ತೋಟದಲ್ಲಿ ಅರ್ಧ ರಾತ್ರಿ ಹೊತ್ತು ಕಾದರೆ ಅಲ್ಲಿಗೆ ಬರುತ್ತಾನೆ ಎಂದರು. ಅದರಂತೆ ರಾತ್ರಿ ಎಷ್ಟು ಹೊತ್ತು ಕಾದರೂ ಹನುಮಂತನ ದರ್ಶನವೇ ಇಲ್ಲ! ಬೆಳಕು ಹರಿದ ಮೇಲೆ ತಾಯಿಯನ್ನು "ಪುರಾಣ ಹೇಳಿದವರು ಬಾಳೆ ತೋಟದಲ್ಲಿ ಅರ್ಧ ರಾತ್ರಿಯಲ್ಲಿ ಬರುತ್ತಾನೆ ಎಂದು ಹೇಳಿದ್ದರು. ಬರಲೇ ಇಲ್ಲವಲ್ಲಾ" ಎಂದು ಕೇಳಿದ. ಆದರೆ ಅವನ ತಾಯಿ ಅದನ್ನು ತಾನೇಕೆ ಸುಳ್ಳು ಹೇಳಲಿ, ಮಗುವೇ ನಿರ್ಣಯಕ್ಕೆ ಬರಲಿ ಎಂದು "ಹನುಮಂತನಿಗೆ ಒಂದು ದಿನ ಕಾದರೆ ಸಾಕೆ? ಇನ್ನೂ ಕೆಲವು ದಿನ ಕಾದು ನೋಡು" ಎಂದಳು. ನರೇಂದ್ರ ಹಾಗೇ ಮಾಡಿ ಕೊನೆಗೆ ಇದೆಲ್ಲಾ ಸುಳ್ಳು ಎಂಬ ನಿರ್ಣಯಕ್ಕೆ ಬಂದನು. ಇಲ್ಲಿ ನಾವು ನರೇಂದ್ರನ ತಾಯಿ ಮಗುವನ್ನು ಯಾವ ರೀತಿ ಬೆಳೆಸುತ್ತಿದ್ದಳು ಎಂಬುದನ್ನು ನಾವು ಗಮನಿಸಬೇಕು. ಒಂದು ನಿರ್ಧಾರವನ್ನು ದೊಡ್ಡವರು ಹೇಳುವುದಕ್ಕಿಂತ ಪುಟ್ಟ ಮಕ್ಕಳಾದ ನೀವೇ ಪ್ರಯೋಗ ಮಾಡಿ ಪಡೆದರೆ ಬಂದಂಥ ಜ್ಞಾನ ಭದ್ರವಾಗಿ ನಿಲ್ಲುತ್ತದೆ.

ನರೇಂದ್ರನಿಗ ೬ ವರ್ಷ ತುಂಬುವ ಹೊತ್ತಿಗೆ ಶಾಲೆಗೆ ಹೋಗಲು ಶುರು ಮಾಡಿದನು. ಅಲ್ಲಿ ಎಲ್ಲಾ ಪಾಠಗಳನ್ನೂ ಚತುರತೆಯಿಂದ ಕಲಿತು ಎಲ್ಲಾ ಉಪಾಧ್ಯಾಯರ ಪ್ರೀತಿಯನ್ನು ಗಳಿಸಿಕೊಂಡನು. ಆದರೆ ತರಗತಿಯಲ್ಲೂ ಸಹ ಶಾಂತಿಯಿಂದ ಇರುತ್ತಿರಲಿಲ್ಲ. ಅವನ ಚುರುಕು ಬುದ್ಧಿಗೆ ಉಪಾಧ್ಯಾಯರು ಹೇಳುವ ಪಾಠ ಸಾಲುತ್ತಿರಲಿಲ್ಲ, ಏಕೆಂದರೆ ಅವನದು ಪ್ರಚಂಡ ಬುದ್ಧಿಶಕ್ತಿ. ಉಪಾಧ್ಯಾಯರು ಹೇಳುವುದನ್ನು ಕ್ಷಣಾರ್ಧದಲ್ಲಿ ಗ್ರಹಿಸಿಬಿಡುತ್ತಿದ್ದ. ಉಳಿದ ಸಮಯವನ್ನು ಸ್ನೇಹಿತರೊಡನೆ ಹಾಸ್ಯ, ಪರಿಹಾಸ್ಯ ಮಾಡುವುದು, ತಾನು ಓದಿದ ಹಾಗೂ ಕೇಳಿದ ಕಥೆಗಳನ್ನು ಹೇಳುವುದು, ಗಲಾಟೆ ಮಾಡುವುದು ಇದರಲ್ಲೇ ಕಾಲ

Digitalized by e-Sahithya Documentation Forum
Sponsored by Sarayu Foundation Trust

ಕಳೆಯುತ್ತಿದ್ದ. ಒಂದು ದಿನ ಉಪಾಧ್ಯಾಯರು ಪಾಠ ಹೇಳುತ್ತಿದ್ದಾಗ ಹಿಂದಿನ ಬೆಂಚಿನ ಹುಡುಗರು ಗಮನ ಇಟ್ಟು ಪಾಠ ಕೇಳುತ್ತಿರಲಿಲ್ಲ. ಅದನ್ನು ಉಪಾಧ್ಯಾಯರು ಗಮನಿಸಿ "ನಾನು ಈಗ ಏನು ಹೇಳುತ್ತಿದ್ದೆ ಹೇಳಿ?" ಎಂದು ಅವರನ್ನು ಕೇಳಿದರು. ಆಗ ಚೇಷ್ಟೆ ಗಲಾಟೆಯಲ್ಲೇ ನಿರತರಾಗಿದ್ದ ಮಕ್ಕಳು ಏನೂ ಉತ್ತರವನ್ನು ಕೊಡದೆ ಪಿಳಿಪಿಳಿ ಕಣ್ಣು ಬಿಡುತ್ತಾ ನಿಂತರು. ಉಪಾಧ್ಯಾಯರು ಅವರನ್ನು ಶಿಕ್ಷಿಸಲು ಬೆಂಚಿನ ಮೇಲೆ ನಿಲ್ಲಿಸಿದರು. ಅದೇ ಬೆಂಚಿನಲ್ಲಿ ಕುಳಿತು ಚೇಷ್ಟೆ ಮಾಡುತ್ತಿದ್ದ ನರೇಂದ್ರನನ್ನೂ ಪಾಠದ ವಿಷಯ ಕೇಳಿದರು. ಆಗ ನರೇಂದ್ರ ಸ್ವಲ್ಪವೂ ತಪ್ಪದೆ ಉತ್ತರವನ್ನು ಹೇಳಿದರು. ಆದ್ದರಿಂದ ಸಂತೋಷಗೊಂಡ ಉಪಾಧ್ಯಾಯರು ನರೇಂದ್ರನು ಬೆಂಚಿನ ಮೇಲೆ ನಿಲ್ಲಬೇಕಾಗಿಲ್ಲ ಎಂದರು. ಆದರೆ ನರೇಂದ್ರ "ನಾನೂ ಕೂಡ ಇತರ ಹುಡುಗರೊಡನೆ ಗಲಾಟೆ ಚೇಷ್ಟೆ ಮಾಡುತ್ತಿದ್ದೆ. ಆದ್ದರಿಂದ ಅವರಿಗೆ ಆದ ಶಿಕ್ಷೆ ನನಗೂ ಆಗಬೇಕು" ಎಂದು ಉಪಾಧ್ಯಾಯರು ಬೇಡವೆಂದರೂ ಕೇಳದೆ ಬೆಂಚಿನ ಮೇಲೆ ನಿಂತನು. ಇದನ್ನು ನಾವು ವಿಚಾರ ಮಾಡಿದಾಗ ಸಾಮಾನ್ಯರಾದ ನಾವೆಲ್ಲರೂ ಬೀಸುವ ದೊಣ್ಣೆ ತಪ್ಪಿದರೆ ಸಾಕೆನ್ನುತ್ತೇವೆ. ಆದರೆ ನರೇಂದ್ರ ತಾನೇ ಬುದ್ಧಿವಂತ ಎಂಬ ಅಹಂಕಾರ ಇಲ್ಲದೆ ಇತರ ಮಕ್ಕಳ ಹಾಗೆ ತಾನೂ ಒಬ್ಬ ಎಂಬ ಸಮಾನಭಾವದಿಂದ ಶಿಕ್ಷೆ ತಗೆದುಕೊಂಡ. ಅವನ ಗುಣವನ್ನು ನಾವೆಲ್ಲರೂ ಮೆಚ್ಚಬೇಕು.

ಕೊಡುಗೈಯುಳ್ಳವನು, ಕ್ಷಮಾಶೀಲನು, ಪರರಲ್ಲಿಯ ಸದ್ಗುಣಗಳನ್ನು ಕಂಡುಕೊಳ್ಳುವಂತಹನೂ ಆದ ಒಡೆಯನು ಸಿಗುವುದು ಕಠಿಣ. ಹಾಗೆಯೇ ಪರಿಶುದ್ಧನೂ, ಪ್ರಾಮಾಣಿಕನೂ, ವಿಶ್ವಾಸಿಯೂ ಆದ ಸೇವಕನೂ ಕೂಡ ದೊರೆಯುವುದು ವಿರಳ.

—ಸುಭಾಷಿತ

ನಿದ್ರೆ ಹತ್ತದವನಿಗೆ ರಾತ್ರಿ ದೀರ್ಘ
ಬಳಲಿದವನಿಗೆ ದಾರಿ ದೀರ್ಘ
ಜ್ಞಾನೋದಯವಾಗದವನಿಗೆ ಜೀವನದ ಚಕ್ರವೇ ದೀರ್ಘವಾಗುತ್ತದೆ.

—ಬುದ್ಧ

ನನ್ನ ಹಣದಲ್ಲಿ ದೇವರಿಗೆ ಎಷ್ಟು ಕೊಡುವೆ ಎಂಬುದು ಮುಖ್ಯವಲ್ಲ. ದೇವರ ಹಣದಲ್ಲಿ ನನಗಾಗಿ ಎಷ್ಟು ಉಳಿಸಿಕೊಳ್ಳುವೆನು ಎಂಬುದು ಮುಖ್ಯ.

—ರಾಬರ್ಟ್ ಲಾಟೂರ್ನೋ

ಓಂ ಶ್ರೀ ಗುರುಬಸವಲಿಂಗಾಯ ನಮಃ

ದಕ್ಷಿಣ ಭಾರತ ಪ್ರವಾಸ

ಹದಿನೇಳು ದಿವಸಗಳ ಕಾಲ

ದಿನಾಂಕ 10-6-1979 ರಿಂದ 26-6-1979ರ ವರೆಗೆ

ಸಹೃದಯರಾದ ಸದ್ಭಕ್ತರು,

ಬಹುದಿವಸಗಳಿಂದ ದಕ್ಷಿಣ ಭಾರತ ಪ್ರವಾಸ ಕೈಗೊಳ್ಳುವ ಬಯಕೆ ಇದೀಗ ಪೂರ್ಣಗೊಳ್ಳಲಿದ್ದು, ವಿಶ್ವಕಲ್ಯಾಣ ಮಿಷನ್ ದಿನಾಂಕ 10-6-1979 ರಿಂದ ಪ್ರವಾಸವನ್ನು ಏರ್ಪಡಿಸಿದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರ ದಿವ್ಯ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಈ ಪ್ರವಾಸವು ನಡೆಯಲಿದ್ದು, ಆಸಕ್ತಿಯುಳ್ಳ ಸದ್ಭಕ್ತರು ಬೇಗನೇ ಹೆಸರನ್ನು ಹಣದೊಡನೆ ಕಳಿಸಬೇಕು.

ಪ್ರತಿಯೊಬ್ಬರಿಗೆ 450-00 ರೂಪಾಯಿಗಳು

(ಊಟ, ವಸತಿ, ಸಂದರ್ಶನ ಸೇರಿ)

---

1. ಸಂದರ್ಶಿಸುವ ಊರುಗಳ ವಿವರಗಳನ್ನು ಪಕ್ಕದ ಪುಟದಲ್ಲಿ ನೋಡಿರಿ.
2. ನಿಮ್ಮೊಡನೆ ಹಾಸಿಗೆ (ಹಗೂರವಾಗಿರುವದು) ಹೊದ್ದಿಕೆ, ಊಟದ ತಟ್ಟೆ, ಲೋಟ ತನ್ನಿರಿ.
3. ಕೇವಲ ಎರಡೇ ಬಸ್ಸುಗಳನ್ನು ಹೊರಡಿಸುವ ಸಾಧ್ಯತೆ ಇರುವದರಿಂದ ಮತ್ತು ಈಗಾಗಲೇ ಬಹಳಷ್ಟು ಬೇಡಿಕೆ ಇರುವದರಿಂದ ದಯಮಾಡಿ ವಿಳಂಬ ಮಾಡದೆ ಹೆಸರು ಮತ್ತು ಹಣವನ್ನು ಕಳಿಸಿಕೊಡಿ. ಮುಂದಿನ ವ್ಯವಹಾರಕ್ಕಾಗಿ ವಿವರವಾದ ವಿಳಾಸ ಕೊಡಲು ಮರೆಯದಿರಿ.

ಹೆಸರು ನೋಂದಾಯಿಸುವ ವಿಳಾಸ :

ಶರಣೆ ಗಂಗಮ್ಮ
ಶಿವಾನುಭವ ಪ್ರವಾಸ ಸಮಿತಿ,
ಬಸವ ಮಂಟಪ, ನಂ. 24, ಎರಡನೇ ಬ್ಲಾಕು,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು-560 010.
ದೂರವಾಣಿ ; 8 2 3 3 5

Digitalized by e-Sahithya Documentation Forum
Sponsored by Sarayu Foundation Trust

17 ದಿನಗಳ ದಕ್ಷಿಣ ಭಾರತ ಪ್ರವಾಸ
10-6-1979 ರಿಂದ 26-6-1979ರ ವರೆಗೆ

10-6-1979 **ತಿರುಚಿ** — ಸುಪ್ರಭಾತದ 6-30 ಗಂಟೆಗೆ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಿಂದ ಹೊರಡುವದು.

ಶ್ರೀರಂಗಂ—ಆಗಮಿಸಿ, ಸಂದರ್ಶಿಸುವ ಸ್ಥಳುಗಳು. ತಿರುಚಿಯ ಕಲ್ಲಿನ ಕೋಟೆ, ಜಂಬುಕೇಶ್ವರ ಜ್ಯೋತಿರ್ಲಿಂಗ ದೇವಸ್ಥಾನ ಸಂದರ್ಶನ. ಮರುದಿನ ಮುಂಜಾನೆ ಕಾವೇರಿ ಸ್ನಾನ, ರಂಗನಾಥ ದೇವಸ್ಥಾನ ಸಂದರ್ಶನ. ಮಧ್ಯಾಹ್ನ ಪ್ರಯಾಣ.

11 ಮತ್ತು 12 **ರಾಮೇಶ್ವರಂ** :—ಮಂಟಪಂಗೆ ಬಂದು ರಾತ್ರಿ ತಂಗಿ, ಮರುದಿನ ಬೆಳಿಗ್ಗೆ ರೇಲ್ವೆಯಲ್ಲಿ ರಾಮೇಶ್ವರಕ್ಕೆ ಪ್ರಯಾಣ. ರಾಮೇಶ್ವರ ದೇವ ಸ್ಥಾನ ಸಂದರ್ಶನ, ಕೋಟಿ ತೀರ್ಥ ಸ್ನಾನ, ಸ್ಪಟಿಕ ಲಿಂಗದರ್ಶನ.

13 **ನವಪಾಸ್ನಮ್** :—ಸುಪ್ರಭಾತದಲ್ಲಿ ರಾಮೇಶ್ವರದಿಂದ ಹೊರಟು, ಮಂಟಪಂಗೆ ಬಂದು, ಬಸ್ಸಿನಲ್ಲಿ ನವಪಾಶನವ್‌ಗೆ ಆಗಮನ.

ತಿರುಚಂದೂರು :—ಸುಪ್ರಸಿದ್ಧ ದೇವಾಲಯ ಸಂದರ್ಶನ. ಮನ್ನಾರ್ ಕೊಲ್ಲಿಯ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ದರ್ಶನ.

14 **ಕನ್ಯಾಕುಮಾರಿ**:—ಮೂರು ಸಮುದ್ರಗಳ ಸಂಗಮ ತಾಣವಾದ ರಮ್ಯ ತಾಣ. ಕನ್ಯಾಕುಮಾರಿಯ ದೇವಾಲಯ ಸಂದರ್ಶನ ಮತ್ತು ಸ್ವಾಮಿ ವಿವೇಕಾನಂದ ಸ್ಮಾರಕ ಮಂಟಪಕ್ಕೆ ಪ್ರಯಾಣ. (ಸಮುದ್ರದಲ್ಲಿ ಪಯಣಿಸುವ ದೋಣಿ ವೆಚ್ಚ ಪ್ರತ್ಯೇಕ)

15 **ಸುಚೀಂದ್ರಮ್** :—ಕನ್ಯಾಕುಮಾರಿಯಲ್ಲಿ ಸುಪ್ರಭಾತದ ಸ್ನಾನ ಪೂಜಾದಿಗಳನ್ನು ಪೂರೈಸಿ ಸುಚೀಂದ್ರಮ್‌ನ ದತ್ತಾತ್ರೇಯ ಸ್ವಾಮಿ ದೇವಸ್ಥಾನ ಸಂದರ್ಶನ.

ತ್ರಿವೇಂಡ್ರಮ್ :—ಮಧ್ಯಾಹ್ನಕ್ಕೆ ಆಗಮನ, ಊಟ. ಪ್ರಾಣಿ ಸಂಗ್ರಹಾಲಯ, ಉದ್ಯಾನವನ, ಸಮುದ್ರ ತೀರ, ಪದ್ಮನಾಭಸ್ವಾಮಿ ದೇವಾಲಯ ದರ್ಶನ, ರಾತ್ರಿ ವಸತಿ.

16 **ಕಾಲಟಿ** :—ಸುಪ್ರಭಾತದಲ್ಲಿ ತ್ರಿವೇಂಡ್ರಂನಿಂದ ಹೊರಟು, ವೈಕೋಣಮ್ಮಿಗೆ ಆಗಮಿಸಿ, ಕಾಲಟಿಯಲ್ಲಿ ಶ್ರೀ ಮಹಾದೇವ ಮಂದಿರವನ್ನು ಸಂದರ್ಶಿಸು ವದು. ಪೆರಿಯಾರ್ ನದಿ ಮತ್ತು ಆದಿ ಶಂಕರಾಚಾರ್ಯರ ಜನ್ಮಸ್ಥಾನ ಸಂದರ್ಶನ.

17 **ಗುರುವಾಯೂರು** :—ಸುಪ್ರಭಾತದಲ್ಲಿ ಆಗಮನ, ಸುಪ್ರಸಿದ್ಧ ಕೃಷ್ಣ ಮಂದಿರ ಸಂದರ್ಶನ.

ಪಳನಿ :—ಮಧ್ಯಾಹ್ನ ನಾಲ್ಕಕ್ಕೆ ಗುರುವಾಯೂರಿನಿಂದ ಆಗಮನ. ಬೆಟ್ಟದ ಮೇಲಿರುವ ದಂಡಾಯುಧಪಾಣಿ ಮಂದಿರ ಸಂದರ್ಶನ. (ಬೆಟ್ಟವನ್ನೇರಲು, ಇಳಿಯಲು ಪ್ರಯಾಣಿಕರಿಗೆ ತೊಟ್ಟಿಲಿನ ವ್ಯವಸ್ಥೆಯೂ ಇದೆ)

18 **ಕೊಡೈಕನಾಲ್** :—ಸುಪ್ರಭಾತದಲ್ಲಿ ಪಳನಿಯಿಂದ ಹೊರಟು ದಕ್ಷಿಣ ಭಾರತದ ಸುಪ್ರಸಿದ್ಧ ಗಿರಿಧಾಮವಾದ ಕೊಡೈಕನಾಲಿಗೆ ಆಗಮನ. ಸುಂದರ ಸರೋವರ, ಜಲಪಾತಗಳ ಸಂದರ್ಶನಾನಂತರ ಪ್ರಯಾಣ ಮಧುರೈಗೆ.

19 **ಮಧುರೈ** :—ಅತ್ಯಂತ ಸುಂದರ, ಭವ್ಯ ಮೀನಾಕ್ಷಿಯ ದೇವಾಲಯ ಸಂದರ್ಶನ, ಮಾರಿಯಮ್ಮನ ಕೆರೆ, ತಿರುಮಲಾನಿಕ ಅರಮನೆ, ಪೇಟೆ, ತಿರುಪ್ಪರ ಕುಂದರನ್ ದೇವಾಲಯ ದರ್ಶನ ಮರುದಿನ ಬೆಳಿಗ್ಗೆ.

20 **ತಂಜಾವೂರು** :—ಮಧುರೆಯಿಂದ ಬೆಳಿಗ್ಗೆ ಹೊರಟು ಮಧ್ಯಾಹ್ನ ತಂಜಾವೂರಿಗೆ ಆಗಮನ, ಸಂದರ್ಶನ, ಪ್ರಯಾಣ.

ಕುಂಭಕೋಣಮ್ :—ಬೃಹದೇಶ್ವರ ದೇವಾಲಯ ದರ್ಶನ, ರಾತ್ರಿ ವಸತಿ; ಕುಂಭೇಶ್ವರ, ಸಾರಂಗಪಾಣಿ ದೇವಾಲಯ ದರ್ಶನ, ಮಹಾಮಾಘ ಕೆರೆ, ಪೇಟೆ ಸಂದರ್ಶನ.

21 **ಚಿದಂಬರಮ್** :—ಬೆಳಿಗ್ಗೆ ವೇಳೆ ಕುಂಭಕೋಣಂನಿಂದ ಹೊರಟು, ಚಿದಂಬರಕ್ಕೆ ಬಂದು ನಟರಾಜ ದೇವಾಲಯ ಸಂದರ್ಶಿಸಿ, ಮಹಾಬಲಿಪುರಂನಲ್ಲಿ ವಸತಿ. ಪಲ್ಲವರ ರಾಜಧಾನಿಯಾದ ಮಹಾಬಲಿಪುರಂನಲ್ಲಿ ದೇವಸ್ಥಾನ, ಸಮುದ್ರ ತೀರ ಸಂದರ್ಶನ.

Digitalized by e-Sahithya Documentation Forum
Sponsored by Sarayu Foundation Trust

22 ಪಾಂಡಿಚೇರಿ :—ಸುಪ್ರಭಾತದಲ್ಲಿ ಹೊರಟು, ಪಾಂಡಿಚೇರಿಗೆ ಆಗಮಿಸಿ ಶ್ರೀ ಅರವಿಂದಾಶ್ರಮ, ಆರೋವಿಲ್ಲೆಗಳನ್ನು ಸಂದರ್ಶಿಸುವುದು.

23 ಮದ್ರಾಸ್ :—ಮುಂಜಾನೆ ಹೊರಟು, ಮದ್ರಾಸಿಗೆ ಆಗಮನ. ಅಡಿಯಾರ್, ಕಪಾಲೇಶ್ವರ, ಪಾರ್ಥಸಾರಥಿ ದೇವಾಲಯ ಸಂದರ್ಶನ. ಪ್ರಾಣಿ ಸಂಗ್ರಹಾಲಯ, ಸರ್ಪವನ, ಗಾಂಧೀಭವನ, ಆಡಿಟೋರಿಯಮ್, ಸಮುದ್ರ ತೀರ, ಚೈನಾಬಜಾರ್ ಮುಂತಾದುವನ್ನು ನೋಡಿ, ರಾತ್ರಿ ತಂಗುವುದು.

24 ಕಾಂಚಿಪುರ :—ಸುಪ್ರಭಾತದಲ್ಲಿ ಆಗಮಿಸಿ ಕಂಚಿಯನ್ನು ನೋಡುವುದು. ಶಿವಕಂಚಿ, ವಿಷ್ಣುಕಂಚಿ, ಕಾಮಾಕ್ಷಿ ದೇವಾಲಯ ನೋಡುವುದು. ಮುಂದೆ ಪ್ರಯಾಣ.

25 ತಿರುಪತಿ :—ಸುಪ್ರಭಾತದಲ್ಲಿ ದೇವಾಲಯ ಸಂದರ್ಶನ, ಮುಂದೆ ಪ್ರಯಾಣ. ಮಂಗಾಪುರ, ಗೋವಿಂದರಾಜ ದೇವಸ್ಥಾನ ಸಂದರ್ಶನ, ತಂಗುವಿಕೆ.

26 ಸುಮಾರು ಒಂದು ಗಂಟೆ ವೇಳೆಗೆ ಬೆಂಗಳೂರಿಗೆ ಹೊರಡುವುದು. ಸಂಜೆ 6 ಗಂಟೆ ಸುಮಾರಿಗೆ ಬೆಂಗಳೂರು ತಲುಪುವುದು.

ವಿ. ಸೂ.:—ಕಲ್ಯಾಣ ಕಿರಣ ಕೈಸೇರಿದ ತಕ್ಷಣ ಬರಲಿಚ್ಛಿಸುವವರು ಹಣ ಕಳಿಸಿರಿ. ಒಂದು ವೇಳೆ ಸೀಟುಗಳು ಮುಗಿದಿದ್ದರೆ ಮನಿಯಾರ್ಡರನ್ನು ನಿರಾಕರಿಸಲಾಗುವುದು.

ಎಂಥ ಶಿಕ್ಷಣ ?

ಸಚ್ಚಾರಿತ್ರ್ಯ ನಿರ್ಮಾಣ ಮಾಡುವ, ಮನೋಬಲವನ್ನು ವೃದ್ಧಿಗೊಳಿಸುವ, ಬುದ್ಧಿಯನ್ನು ಬೆಳೆಸುವ ಮತ್ತು ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಂತ ಕಾಲ ಮೇಲೆ ನಿಲ್ಲುವ ಸಾಮರ್ಥ್ಯವನ್ನು ತಂದುಕೊಡುವ ಶಿಕ್ಷಣ ಬೇಕಾಗಿದೆ.

—**ಸ್ವಾಮಿ ವಿವೇಕಾನಂದ**

'ಮತಸ್ವಾತಂತ್ರ್ಯ ಮಸೂದೆ'ಗೆ ವಿರೋಧವೇಕೆ?

ಈಚನೂರು ಕುಮಾರ್

"ಮತಸ್ವಾತಂತ್ರ್ಯ ಮಸೂದೆ-೧೯೭೮"ನ್ನು ಕಳೆದ ಡಿಸೆಂಬರ್ ೨೨ರಂದು ನಮ್ಮ ಲೋಕಸಭೆಯಲ್ಲಿ ಶ್ರೀ ಓಂಪ್ರಕಾಶ್ ತ್ಯಾಗಿ ಅವರು ಮಂಡಿಸಿದ್ದಾರೆ. ಇದು ಚರಿತ್ರಾರ್ಹವೂ, ಸ್ವಾಗತಾರ್ಹವೂ ಆಗಿದೆ. ಈ ಮಸೂದೆಯ ಸಮಾಚಾರ ಹೊರ ಬೀಳುತ್ತಿದ್ದಂತೆಯೇ ಕ್ರೈಸ್ತ ಪಾದ್ರಿಗಳು (ಕೆಲವರು ಮಾತ್ರ) ಉಗ್ರವಾದ ಪ್ರತಿಕ್ರಿಯೆ-ಪ್ರತಿಭಟನೆಯನ್ನು ಪ್ರದರ್ಶಿಸತೊಡಗಿದ್ದಾರೆ. ಕ್ರೈಸ್ತ ಪತ್ರಿಕೆಗಳು, ಅವರ ಮತ ಪ್ರಸಾರ ಸಂಸ್ಥೆಗಳು ವಿಧೇಯಕದ ವಿರುದ್ಧ 'ಧರ್ಮಯುದ್ಧ' (ಕ್ರೂಸೇಡ್) ವನ್ನೇ ಘೋಷಿಸಿವೆ. ಈಗ ಈ ವಿಷಯದಲ್ಲಿ ಪ್ರತಿಯೊಬ್ಬ ಭಾರತೀಯನೂ ಗಂಭೀರವಾಗಿ, ಶೀಘ್ರವಾಗಿ ಮಹತ್ತರ ಅಭಿಪ್ರಾಯ ಸೂಚಿಸುವ ಕಾಲ ಸನ್ನಿಹಿತವಾಗಿದೆ. ಇದು ನಮ್ಮ 'ಧರ್ಮ'ದ ರಾಷ್ಟ್ರೀಯತೆಯ ಅಸ್ತಿತ್ವದ ಪ್ರಶ್ನೆಯಾಗಿರುವುದರಿಂದ ಪ್ರತಿಸವಾಲನ್ನು ಹೂಡಲೇಬೇಕಾಗಿದೆ. ಹಿಂದೂಗಳ ವಿರಾಟ್‌ರೂಪವನ್ನು ತೋರಿಸಬೇಕಾಗಿದೆ. ಈ ವಿಧೇಯಕದಲ್ಲಿ ಅಂಥ ಆಘಾತವಾಗುವಂತಹ ಅಪಾಯಕರ ಅಂಶಗಳಿಲ್ಲದಿದ್ದರೂ 'ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿಕೊಂಡಂತೆ' ಎಂಬ ಗಾದೆಯಂತೆ ಕ್ರಿಸ್ತೀಯರು ಕೂಗೆಬ್ಬಿಸಿರುವುದು ಅತ್ಯಾಶ್ಚರ್ಯಕರವಾಗಿದೆ! ಅದೇನೇ ಇರಲಿ. ಮಸೂದೆಯ ತಿರುಳು ಮತ್ತು ಅದರ ಅಗತ್ಯತೆಯನ್ನು ಕುರಿತು ಯೋಚಿಸೋಣ.

ನಮ್ಮ ಸಂವಿಧಾನದ ಭಾಗ ೩, ೨೫ನೇ ಅನುಚ್ಛೇದ (೧)ರಲ್ಲಿ "ಅಂತಃಕರಣ ಸ್ವಾತಂತ್ರ್ಯ ಮತ್ತು ಮತದ 'ಅಬಾಧಿತ' ಅವಲಂಬನೆ, ಆಚರಣೆ ಮತ್ತು ಪ್ರಚಾರ"ಕ್ಕೆ ಸ್ವಾತಂತ್ರ್ಯದ ಅಧಿಕಾರವಿದೆಯೆಂದು ಹೇಳಲಾಗಿದೆ. ಅಂತೆಯೇ "ಒಂದು ಮತಧರ್ಮದಿಂದ ಇನ್ನೊಂದಕ್ಕೆ ಸ್ವಂತ ಇಚ್ಛೆಯಿಂದ, ಒಪ್ಪಿಗೆಯಿಂದ ಮತಾಂತರ ಹೊಂದುವುದನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ, ಒತ್ತಾಯ,

Digitalized by e-Sahithya Documentation Forum
Sponsored by Sarayu Foundation Trust

ಬೆದರಿಕೆ, ವಂಚನೆ, ಪ್ರಲೋಭನೆ, ಆಸೆ-ಆಮಿಷಗಳಿಂದ ನಡೆಸಲಾಗುವ ಮತಾಂತರವನ್ನು ತಡೆಗಟ್ಟಲು ಸರಕಾರದ ನೆರವು ಅತ್ಯಗತ್ಯ" ಎನ್ನುವ ಮಾತನ್ನು ಈ ವಿಧೇಯಕ ಒತ್ತಿ ಹೇಳಿದೆ.

ಈ ಮಸೂದೆ (ಬಿಲ್) ಯಾವ ಒಂದು ಮತ ಪ್ರಸಾರಕ ಗುಂಪಿಗೂ ಅನ್ವಯಿಸುವುದಿಲ್ಲ. ಅಂದರೆ ಕ್ರೈಸ್ತರನ್ನೇ ಕುರಿತು ಹೇಳಿಲ್ಲ. ಅದು ಇಸ್ಲಾಮೀಯರಿಗೂ, ಕ್ರೈಸ್ತರಿಗೂ, ಕ್ರೈಸ್ತೇತರರಿಗೂ ಒಳಪಡುತ್ತದೆ. ಇಷ್ಟು ಸ್ಪಷ್ಟವಾದ ಅಂಶವನ್ನು ತಪ್ಪಾಗಿ, ಸಂಕುಚಿತವಾಗಿ ಅರ್ಥೈಸಿಕೊಂಡಿರುವ 'ಧರ್ಮಸಮರ' ಸಂಚಾಲಿತ ಕ್ರೈಸ್ತ ಪಾದ್ರಿಗಳ ಹಿನ್ನೆಲೆ, ಕೈವಾಡ ಬೇರೆಯೇ ಆಗಿದೆ ಎನ್ನುವುದು ಆಗಲೇ ಎಲ್ಲರಿಗೂ ಅರ್ಥವಾಗುತ್ತಿದೆ.

ಈ ಕಾನೂನಿಂದ ಧರ್ಮಪ್ರಚಾರದ ತಮ್ಮ ಮೂಲಭೂತ ಹಕ್ಕುಗಳ ಮೇಲೆ ಗದಾಪ್ರಹಾರವಾಗುವುದೆಂದು ಮಿಶನರಿಗಳ ಹೇಳಿಕೆ. ಸಂವಿಧಾನವು ಎಲ್ಲರಿಗೂ ಧರ್ಮಪ್ರಸಾರದ ಹಕ್ಕು ನೀಡಿದೆ. ಆದರೆ, "ಸಾರ್ವಜನಿಕ ವ್ಯವಸ್ಥೆ, ನೀತಿವರ್ತನೆ ಆರೋಗ್ಯಕ್ಕೂ ಮತ್ತು ಈ ಭಾಗದ ಇತರ ಉಪಬಂಧಗಳಿಗೂ ಒಳಪಟ್ಟು ಸಮಸ್ತರಿಗೂ ಸಮಾನ ರೀತಿಯಲ್ಲಿ ಅಂತಃಕರಣ ಸ್ವಾತಂತ್ರ್ಯವೂ, 'ಅಬಾಧಿತ'ವಾಗಿ ಮತವನ್ನು ಅವಲಂಬಿಸುವ, ಆಚರಿಸುವ ಮತ್ತು "ಪ್ರಚಾರ" ಮಾಡುವ ಅಧಿಕಾರವೂ ಇರತಕ್ಕದು" – ಅನುಬಂಧ ೨೫ (೧). ಈ ವಾಕ್ಯದಲ್ಲಿರುವ "ಪ್ರಚಾರ" (ಪ್ರಾಪೊಗೇಟ್) ಎಂದರೆ ಪ್ರಚುರ ಮಾಡುವುದಲ್ಲ, ವಿಸ್ತಾರ ಮತ್ತು ವೃದ್ಧಿ ಮಾಡುವುದು ಎಂಬುದಾಗಿ ಕ್ರೈಸ್ತರ ವಾದವಾಗಿದೆ. ಇಷ್ಟೊಂದು ವಿಚಿತ್ರವಾಗಿ ಹೊಸ ನಿಘಂಟನ್ನೇ ಸೃಷ್ಟಿಸಹೊರಟಿದ್ದಾರೆ.

ಈ ಕಾನೂನಿಂದ ಸ್ವಪ್ರೇರಣೆಯಿಂದ, ಸ್ವಯಂ ಸಮ್ಮತದಿಂದ ಮತಾಂತರ ಹೊಂದುವುದಕ್ಕೆ ನಿರ್ಬಂಧ ಉಂಟಾಗದೆಂದು ಸುಸ್ಪಷ್ಟವಾಗಿದೆ. 'ಅಕ್ರಮ ಒತ್ತಾಯ, ಬೆದರಿಕೆ, ಮೋಸ, ಪ್ರಲೋಭನೆ, ದೋಷಯುಕ್ತ ಚಿತಾವಣೆ-ವಶೀಲಿಗಳಿಂದ ಮತಾಂತರಗೊಳಿಸುವುದನ್ನು ಮಾತ್ರ ನಿರ್ಬಂಧಿಸುತ್ತದೆ. ಇಂಥ ಕೆಟ್ಟ ಪದ್ಧತಿಯಿಂದ ರಕ್ಷಣೆಯಾಗುವುದು ಅವಶ್ಯಕ. ಇದಕ್ಕೆ ರಾಜ್ಯಗಳ ಅಥವಾ ಸರಕಾರದ ನೆರವಿರಬೇಕು' ಎಂದು ಹೇಳಿರುವುದು ನ್ಯಾಯಸಮ್ಮತವಾಗಿಯೇ ಇದೆ.

ಭಾರತ, ಸರ್ವಧರ್ಮ ಸಹಿಷ್ಣುತ ರಾಷ್ಟ್ರ. ಪರಮತ ಉದಾರತೆ ಇದ್ದೇ ಇಲ್ಲ. 'ತಮಗೆ ಮತ ಪ್ರಚಾರ ಸ್ವಾತಂತ್ರ್ಯ ಇಲ್ಲ' ಎಂದು ಹೇಳಿರುವುದು ವಿಚಿತ್ರ ವಿರೋಧಾಭಾಸವೇ ಸರಿ. ಕ್ರೈಸ್ತ ಪಾದ್ರಿಗಳ ಮತಪ್ರಚಾರದ ಸ್ವರೂಪವೇನು? ಅವರ ಮತೀಯ ನಂಬಿಕೆಗಳು ಯಾವುವು? ಎನ್ನುವುದನ್ನು ವಿಮರ್ಶಿಸಿದರೆ ಸಕಾಲಿಕವಾದೀತು.

ಬೈಬಲ್ಲಿನ "ಗುಡ್ಡದ ಮೇಲಿನ ಸಂದೇಶ" ಗೀತೆಯಷ್ಟೇ ಪ್ರಿಯವೆಂದುಕೊಂಡಿದ್ದ ಲೋಕಪೂಜ್ಯ ವ್ಯಕ್ತಿ ಗಾಂಧೀಜಿ. ಅವರು "ಏಸುಕ್ರಿಸ್ತ ಹಾಗೂ ಅವನ ಮೂಲ ತತ್ತ್ವೋಪದೇಶಗಳಿಗೆ ಆಧುನಿಕ ಕ್ರೈಸ್ತ ಮತವೇ ವಿರುದ್ಧವಾಗಿದೆ, ಇಂದು ಕ್ರಿಸ್ತ ಬದುಕಿದ್ದಿದ್ದರೆ ಇಂದಿನ ಕ್ರೈಸ್ತ ಸಂಸ್ಥೆಗಳನ್ನು, ಅವುಗಳ ಉಪದೇಶ ವಿಧಾನಗಳನ್ನು ಅವನು ತಿರಸ್ಕರಿಸುತ್ತಿದ್ದ" ಎಂದು ಯಂಗ್ ಇಂಡಿಯಾ (೨೨-೯-೧೯೨೧)ದಲ್ಲಿ ಸಾರಿದ್ದಾರೆ. ಅಲ್ಲದೆ ಕ್ರೈಸ್ತ ಪಾದ್ರಿಗಳ ಎಲ್ಲ ಚಟುವಟಿಕೆಗಳ ಮೂಲ ಉದ್ದೇಶ ಮತಾಂತರ. ಇದನ್ನು ಅವರು ಎಂದೂ ಮುಚ್ಚುಮರೆ ಮಾಡಿದವರಲ್ಲ. ಮತಾಂತರಕ್ಕಾಗಿ ಅವರು ನೀಡುವ ನಿರ್ಬಂಧನೆಗಳು, ಅದಕ್ಕಾಗಿ ಅವರು ಬಳಸುವ ಸುಧಾರಣೆಗಳು ಅವರ ಮುಖ್ಯ ಕಾರ್ಯಕ್ಷೇತ್ರಗಳು. ಇವೆಲ್ಲವನ್ನೂ ಗಾಂಧೀಜಿ ಪದೇ ಪದೇ ವಿಶ್ಲೇಷಿಸಿದ್ದಾರೆ.

ನಮ್ಮ ದೇಶ ತೀರ ಬಡತನದ್ದು, ಹಿಂದುಳಿದ ಪಂಗಡಗಳಿಂದ ಕೂಡಿದ್ದು ನಿಜ. ಆದರೂ ಭಿನ್ನಭಿನ್ನ ಮತಶ್ರದ್ಧೆಗಳನ್ನು ನಂಬಿಕೊಂಡಿರುವುದೂ, ಅನಕ್ಷರಸ್ಥರಾಗಿರುವುದೂ ತಿಳಿದ ವಿಷಯ. ಈ ಪ್ರಜೆಗಳಿಗೆ ಆಸೆ, ಪ್ರಲೋಭನೆಗಳನ್ನು ಒಡ್ಡಿ ಮತಾಂತರಿಸುತ್ತಾರೆ. ಈ ನೀಚಕಾರ್ಯವಿಧಾನ ಎಲ್ಲಿಯವರೆಗೆ ಮುಂದುವರಿದಿದೆಯೆನ್ನುವುದಾದರೆ ಪೌರಪೂರ್ವ ಅಥವಾ 'ಮೈನರ್' ಆಗಿರುವವರನ್ನೇ ಮತಾಂತರಗೊಳಿಸುತ್ತಿದ್ದಾರೆ. ಪ್ರಲೋಭನೆ, ವಶೀಲಿಗಳಿಂದಲೇ ಮತಾಂತರಗೊಳಿಸುವುದು ಅಪರಾಧವಲ್ಲದೆ, ಮೈನರ್ ಆಗಿರುವವರನ್ನೂ ಮತ ಬದಲಾಯಿಸುವುದು ಮಹಾಪರಾಧವೇ ಸರಿ.

ವಿದೇಶದಿಂದ ಹಣ ಬರುತ್ತದೆಯಲ್ಲದೆ ಇಲ್ಲಿಯ ಬಿಷಪ್ಪರನ್ನು ನಮ್ಮ ದೇಶದವರಾರೂ ನೇಮಿಸುವುದಿಲ್ಲ. ಹೊರನಾಡಿನ ಕ್ರಿಸ್ತೀಯ ಮುಖಂಡರೇ ಅವರಿಗೆ ಬೇಕಾದಂತೆ ಯೋಜಿಸಿಕೊಂಡು ನೇಮಿಸುತ್ತಾರೆ; ಹತೋಟಿಯಲ್ಲಿಟ್ಟುಕೊಂಡಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ನಮ್ಮ ದೇಶದಲ್ಲಿ ಈಗ ಸುಮಾರು ೬೦೦೦ ಬಿಷಪ್ಪರುಗಳಿದ್ದಾರೆ. ಎಲ್ಲ ಕ್ರೈಸ್ತರೂ ಈ ವಿಧೇಯಕವನ್ನು ವಿರೋಧಿಸುತ್ತಿಲ್ಲ. ಪ್ರಚೋದಿತ ಪಾದ್ರಿಗಳು ಮಾತ್ರ ಕೂಗೆಬ್ಬಿಸಿದ್ದಾರೆ. ಇವರ ವಿರೋಧಕ್ಕೆ ಹಿನ್ನೆಲೆಯಾಗಿ ಪಾಶ್ಚಾತ್ಯ ಕ್ರೈಸ್ತ ದೇಶಗಳು ಕೂಡಿವೆ. ಬ್ರಿಟನ್, ಅಮೆರಿಕಾ, ಆಸ್ಟ್ರೇಲಿಯಗಳ ಬಾನುಲಿಗಳು ಪ್ರಚಾರದ ದಾಳಿ ನಡೆಸಿವೆ. ಹಾಗೆ ನೋಡಿದರೆ, ಆ ದೇಶಗಳಲ್ಲಿ ಕ್ರೈಸ್ತ ಮತ ಇಂದು ಕಂಗಾಲಾಗಿದೆ. ಚರ್ಚುಗಳು ಪಾಳು ಬಿದ್ದಿವೆ. ಹಲಕೆಲವು ಹರಾಜಾಗುತ್ತಿವೆ. ಕ್ರೈಸ್ತ ಮತದ ಬಗೆಗೆ ಇಂತಹ 'ಅಪಾರ ಶ್ರದ್ಧೆ' ಉಳ್ಳ ದೇಶಗಳು ಭಾರತದಲ್ಲಿನ ಕ್ರೈಸ್ತ ಮತ ಪ್ರಚಾರದ ಬಗೆಗೆ ಇಷ್ಟು ಆತಂಕಗೊಳ್ಳುವುದನ್ನು ನೋಡಿದಲ್ಲಿ, ಯಾರಿಗೆ ತಾನೇ ಸಂದೇಹ ಬಾರದೆ ಇರುತ್ತದೆ?

ಭಾರತದ ಕ್ಯಾಥೋಲಿಕ್ ಒಕ್ಕೂಟದ ಮುಖ್ಯಸ್ಥ ಕಲ್ಕತ್ತೆಯ ಶ್ರೀ ಡೊಮಿನಿಕ್ ಜೆ ಅಜವಿದೋ ಮತ್ತು ಮಂಗಳೂರಿನ ಡಾ॥ ಸಲ್ಡಾನ, ಕಲ್ಕತ್ತೆಯ ಲಿಯೋನಾರ್ಡ್ ಗೇವ್ಸ್ ಮತ್ತಿತರರು 'ಹೋರಾಟ', 'ಬಂಡಾಯ' ಎಂಬ ಶಬ್ದಗಳನ್ನೇ ಬಳಸಿ ಹೇಳಿರುವುದಂತೂ ತೀರಾ ಸಂಶಯಾಸ್ಪದವಾಗಿದೆ. ಅದು ನಾಚಿಕೆಗೇಡಿತನವೂ ಹೌದು. ಆಂತೆಯೇ ಮತ ಸ್ವಾತಂತ್ರ್ಯ ಮಸೂದೆಯಂತಹ ಕಾನೂನು ಆಗಲೇಬೇಕೆಂದು ಸೆಕ್ಯೂಲರಿಸ್ಟ್ ಶ್ರೀ ಅಭಿ ಶಹಾ, ಮುಸ್ಲಿಂ ಸತ್ಯಶೋಧಕ ಸಂಸ್ಥೆ, ಅಖಿಲ ಭಾರತೀಯ ಕ್ರೈಸ್ತ ಸ್ವಾತಂತ್ರ್ಯ ಹೋರಾಟಗಾರರ ವೇದಿಕೆ, ವಿಶ್ವ ಹಿಂದು ಪರಿಷತ್, ಅಖಿಲ ಭಾರತ ಅಧ್ಯಾತ್ಮ ಮಂಡಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತಿತರ ಸಂಸ್ಥೆಗಳೂ ಘೋಷಿಸಿವೆ.

ಈ ಕಾನೂನಿನಿಂದಾಗಿ ಯಾವುದೇ ಮತಾಂತರದ ಮೇಲೆ ಪ್ರತಿಬಂಧ ಉಂಟಾಗದು. ಕೇವಲ ಬಲಾತ್ಕಾರದ ಮತ್ತು ಮೋಸದ ಮತಾಂತರಗಳ ಮೇಲೆ ನಿರ್ಬಂಧ ಉಂಟಾಗುವುದೆಂದು ಹಲವು ಕಾನೂನು ತಜ್ಞರ ಅಭಿಪ್ರಾಯವಾಗಿದೆ.

ಈ ರೀತಿ ವಶೀಲಿ ಮತಾಂತರ ರೂಪಕ್ಕೆ ಭಾರತ ದಂಡ ನಿಯಮ(ಐ.ಪಿ.ಸಿ.)ದ ರೀತ್ಯಾ ಕಾನೂನಿದೆ. ಅದರಿಂದ ಬೇಕಾದರೆ ಕ್ರಮ ಜರುಗಿಸಬಹುದೆಂದು ಹಲಕೆಲವು ಪಾದ್ರಿಗಳು ತಿಳಿಸಿರುತ್ತಾರೆ. ಇದು ತಪ್ಪು ಮಾರ್ಗಕ್ಕೆಳೆಯುವ ವಾದವಾಗಿದೆಯಷ್ಟೆ. ಈ ವಿಧಾನವನ್ನು ಸಂವಿಧಾನದಲ್ಲೇ ಅಂದು ಸೇರಿಸಬೇಕಿತ್ತು,

ಆದೇಕೋ ಸೇರಿಸಿಲ್ಲ. ಇನ್ನು ಭಾರತದಂತಹ ನಿಯಮದಲ್ಲಿಯೂ ಇಲ್ಲವೆ ಇಲ್ಲ. ಅದಕ್ಕೇ ಈ ವಿಧೇಯಕ ಕ್ರಾಂತಿಕಾರಿ ಮಸೂದೆಯಾಗಿದೆ.

ರೋಮ್‌ನ 'ಯುರ್ಕ್ಯೂಮೆನಿಕಲ್ ಮಂಡಲಿ' ಕ್ರೈಸ್ತರ ಸರ್ವೋಚ್ಚ ಮತ. ಅದರ ಆದೇಶ ನಿರ್ದಿಷ್ಟವಾಗಿಯೇ ಇದೆ : "ನಮ್ಮ ಮತದ ನಂಬುಗೆಗಳನ್ನು ಪ್ರಚಾರಪಡಿಸುವಾಗ, ಮತೀಯ ಆಚರಣೆಗಳನ್ನು ಜಾರಿಗೆ ತರುವಾಗ ವಹಿಸಬೇಕಾದ ಎಚ್ಚರಿಕೆಯೊಂದಿದೆ. ಜುಲುಮೆ, ಅಗೌರವಕರ, ಅಯೋಗ್ಯ ಎನಿಸುವಂತಹ ಯಾವುದೇ ವಿಧಾನ, ಸರ್ವಥಾ ವರ್ಜಿಸಬೇಕು. ಅದರಲ್ಲೂ ಅಶಿಕ್ಷಿತರು, ಬಡವರ ಕುರಿತಾಗಿ ವ್ಯವಹರಿಸುವಾಗ ಈ ಮಾತನ್ನು ವಿಶೇಷವಾಗಿ ಗಮನದಲ್ಲಿಡಬೇಕು. ಆ ರೀತಿ ವ್ಯವಹರಿಸುವುದೆಂದರೆ ತನಗಿರುವ ಅಧಿಕಾರದ ದುರುಪಯೋಗ ಮಾಡಿಕೊಂಡಂತೆ, ಅಧಿಕಾರಕ್ಕೂ ಚ್ಯುತಿ ತಂದಂತೆ. ಅನಂತರವೂ ವಿರೋಧಿಸುವುದು ತೀರಾ ಖಂಡನೀಯ." ಈ ನಾಡಿನ ನಾಗರಿಕರೆಲ್ಲರೂ ಈ ವಿಧೇಯಕಕ್ಕೆ ಸಿಂಧುತ್ವವನ್ನೂ ಸಾಧುತ್ವವನ್ನೂ ಯಾವುದೇ ರೂಪದಲ್ಲಾಗಲೀ 'ಸಾಕ್ಷಿ' ನೀಡುವ ಸದವಕಾಶ ಒದಗಿ ಬಂದಿದೆಯಲ್ಲವೇ ?

ತಪ್ಪು ಸಿದ್ಧಾಂತ ......?

'ಜೀವ ಶಾಸ್ತ್ರ'ದ ಪ್ರಾಧ್ಯಾಪಕರು ಮಾನವನ ಉಗಮದ ಸಿದ್ಧಾಂತವನ್ನು ಕುರಿತು ಪಾಠ ಮಾಡುತ್ತ : "ಮುಖ್ಯವಾಗಿ ಎರಡು ಸಿದ್ಧಾಂತಗಳು ಮಾನವ ಉಗಮದ ಬಗ್ಗೆ ವಿವರಿಸುತ್ತವೆ. ಮೊದಲನೆಯದಾಗಿ ಧರ್ಮಶಾಸ್ತ್ರಗಳಲ್ಲಿ ಬರುವ "ವಿಶಿಷ್ಟ ಸೃಷ್ಟಿ" (Special creation) ಸಿದ್ಧಾಂತ. ಎರಡನೆಯದಾಗಿ ಡಾರ್ವಿನ್‌ನ "ವಿಕಾಸವಾದ" ಸಿದ್ಧಾಂತ. ಮೊದಲನೆಯದನ್ನು ಪ್ರಾಯೋಗಿಕವಾಗಿ ಸಿದ್ಧ ಮಾಡಲು ಸಾಧ್ಯವಿಲ್ಲ. ಆದರೆ ಎರಡನೆಯದನ್ನು ಪಳೆಯುಳಿಕೆ (Fossils)ಗಳ ಆಧಾರದ ಮೇಲೆ ಚರ್ಚಿಸಬಹುದು, ಅದನ್ನೀಗ ಚರ್ಚಿಸಲಾಗುವುದು" ಎಂದರು. ಎರಡನೆ ಸಿದ್ಧಾಂತವನ್ನು ವಿವರಿಸುತ್ತಿದ್ದಾಗ ವಿದ್ಯುತ್‌ದೀಪಗಳು ಆರಿದವು. ಪ್ರಾಧ್ಯಾಪಕರು ಪಾಠವನ್ನು ನಿಲ್ಲಿಸಿ ಆಕಾಶದತ್ತ ನೋಡಿ ನುಡಿದರು : "ಪ್ರಾಯಶಃ ನಾನು ತಪ್ಪುಸಿದ್ಧಾಂತವನ್ನು ವಿವರಿಸುತ್ತಿರಬಹುದು."

★ ★ ★

ಯಾರ ಹೃದಯ ದಯಾಪೂರ್ಣವಾಗಿರುವುದೋ, ಮಾತು ಸತ್ಯಯುತವಾಗಿರುವುದೋ, ಯಾರ ದೇಹವು ಪರಹಿತಕ್ಕಾಗಿ ಶ್ರಮಿಸುವುದೋ ಅಂತಹವನಿಗೆ ಕಷ್ಟನಷ್ಟಗಳ ಹೆದರಿಕೆಯೇ ಇರದು.

—ಸುಭಾಷಿತಾವಲಿ

Digitalized by e-Sahithya Documentation Forum
Sponsored by Sarayu Foundation Trust

ಮಾತು ಜ್ಯೋತಿರ್ಲಿಂಗ

ಸಂಗ್ರಹ : **ಎಂ. ಗಂಗಮ್ಮ**

ತನ್ನನ್ನು ಹೊಗಳಿದಾಗ ಸಂಕೋಚಪಟ್ಟು, ನಿಂದಿಸಿದಾಗ ಮೌನಿಯಾಗಿರುವವನು ಉತ್ತಮೋತ್ತಮನು.
—ಆಂಗ್ಲ ಗಾದೆ

ಶಕ್ತಿಯುತವಾದವನನ್ನು ದುರ್ಬಲಗೊಳಿಸುವುದರಿಂದ ದುರ್ಬಲನನ್ನೇನೂ ಸಬಲನನ್ನಾಗಿ ಮಾಡಲು ಬರದು. ಮುಂದೆ ಇದ್ದವನನ್ನು ಹಿಂದಕ್ಕೆಳೆದ ಮಾತ್ರಕ್ಕೆ ಹಿಂದುಳಿದವನು ಮುಂದೆ ಹೋದಂತಾಗದು.
—ಅಬ್ರಹಾಂ ಲಿಂಕನ್

ಯಾವುದನ್ನು ನಾಶಮಾಡಲು, ಪರಿಹರಿಸಲು ಅಸಾಧ್ಯವೋ ಅದನ್ನು ಸಹಿಸಿಕೊಳ್ಳಲೇಬೇಕು.
—ಆಂಗ್ಲ ಗಾದೆ

ಯಾವುದನ್ನೂ ನಿರೀಕ್ಷಿಸದೆ ಬಂದುದನ್ನು ನೆಮ್ಮದಿಯಿಂದ ಸ್ವೀಕರಿಸುವ ಸಮತೆಯಲ್ಲಿ ಸಂತೋಷವಿದೆ.
—ಆಂಗ್ಲ ಗಾದೆ

ಹೊಟ್ಟೆಗೆ ಆಹಾರವನ್ನು ಕೊಟ್ಟುದಾದರೆ ಯಾರು ತಾನೆ ವಶರಾಗರು? ಮೃದಂಗದ ಮುಖಕ್ಕೆ ರಸಾಯನ ಹಚ್ಚಿದರೆ ಅದು ತಾನಾಗಿಯೇ ಮಧುರ ಧ್ವನಿಗೈಯುವುದು.
—ಭರ್ತೃಹರಿ

ಬಲವಾಗಿ ಬೀಸಿ ಮರಗಳನ್ನು ಮುರಿಯುವಂತಹ ಬಿರುಗಾಳಿಯಂತೆ ಚರಿಸದೆ, ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಜಂಗಮನು (ಮಹಾತ್ಮ) ಸುಳಿಯಬೇಕು.
—ಅಲ್ಲಮ ಪ್ರಭುದೇವರು

ನೀರಿಂಗೆ ನೈದಿಲೆ ಶೃಂಗಾರ,
ಗಗನಕ್ಕೆ ಚಂದ್ರಮನೆ ಶೃಂಗಾರ, ನಾರಿಗೆ ಗುಣವೇ ಶೃಂಗಾರ **—ಬಸವಣ್ಣ**

ಮರುಕದಿಂದ ಕಾಣಲ್ಪಡುವುದಕ್ಕಿಂತಲೂ ಮತ್ಸರಿಸಲ್ಪಡುವುದು ಉತ್ತಮನಿಗೆ ಭೂಷಣ.
—ಆಂಗ್ಲ ಗಾದೆ

ಮಾತಿನಲ್ಲಿ ಕರ್ಕಶ ಮನದಲ್ಲಿ ಘಾತಕತನ ಉಳ್ಳವ ಕನಿಷ್ಠ
ಮಾತಿನಲ್ಲಿ ಲೀಲೆ ಮನದಲ್ಲಿ ಕತ್ತರಿಯುಳ್ಳವ ಮಧ್ಯಮ
ಮಾತಿನಲ್ಲಿ ಮೃದು ಮನದಲ್ಲಿ ಪ್ರೀತಿಯುಳ್ಳವ ಉತ್ತಮ
ಮಾತಿನಲ್ಲಿ ಮಂತ್ರ ಮನದಲ್ಲಿ ಮಹಾನುಭಾವ, ಆತ್ಮನಲ್ಲಿ
ಜ್ಯೋತಿಯುಳ್ಳವ ಶರಣ.
—ಷಣ್ಮುಖಸ್ವಾಮಿಗಳು

ವಿಶ್ವವಿಭೂತಿ ಬಸವಣ್ಣನವರು-3

ಜಗದ್ಗುರು ಮಾತೆ ಮಹಾದೇವಿ

ಮೋಹದ ಬಂಧನದಿಂದ ಆಚೆಗೆ

ಸತ್ಯದ ಅನ್ವೇಷಕನಾಗಿ, ಮೂಢಸಂಪ್ರದಾಯ, ಶುಷ್ಕ ರೂಢಿಗಳ ವಿರೋಧಕನಾಗಿ ಬಾಲಕ ಬಸವಣ್ಣ ತಾಯಿ-ತಂದೆಯರ ಮೋಹದ ಪಾಶ ಕಳಚಿ ಮನೆಯಿಂದ ಹೊರಗೆ ಹೊರಟ. ಸಹೋದರಿ ಅಕ್ಕನಾಗಮ್ಮ ಗಂಭೀರವಾಗಿ ಚಿಂತನೆಗೆ ತೊಡಗಿದ್ದಳು. ತಾಯಿ-ತಂದೆಗಳು ತಿಳಿದಂತೆ, ಅವರ ಸಮಾಜ ಬಾಂಧವರು ತಿಳಿದಂತೆ ಬಸವಣ್ಣನು ಉದ್ಧಟನಾಗಿರಲಿಲ್ಲ, ಅವಿವೇಕಿಯಾಗಿರಲಿಲ್ಲ. ಸತ್ಯವನ್ನು ನಿಷ್ಕಲ್ಮಶ ಮನಸ್ಸಿನಿಂದ ಸ್ವೀಕರಿಸುವ ಎದೆಗಾರಿಕೆಯೊಡನೆ, ಅಸತ್ಯವನ್ನು ವಿರೋಧಿಸುವ ಧೀರತ್ವವೂ ಅವನಲ್ಲಿತ್ತು. ಅವನು ಕೇಳುತ್ತಿದ್ದ ಪ್ರಶ್ನೆಗಳು ಅನೇಕ ವಿಚಾರವಂತರ ಮತಿಯಲ್ಲಿ ಆಗಾಗ ಉದಿಸುತ್ತಿದ್ದರೂ, ಅವರುಗಳು ಬಲವಂತವಾಗಿ ಅವನ್ನು ತಳ್ಳಿ, ಸಂಪ್ರದಾಯದ ಕವಚದಲ್ಲಿ ಮರೆಹೊಕ್ಕು ಹೇಗೋ ಸಾಗುತ್ತಿದ್ದರು.

"ಭವಿಷ್ಯಕಾಲದಲ್ಲಿ ಇವನು ಖಂಡಿತಾ ಮಹಾಪುರುಷನಾಗುತ್ತಾನೆ. ನಾನೊಬ್ಬಳಾದರೂ ಅವನಿಗೆ ಬೆನ್ನಬಲವಾಗಬೇಕು; ಅವನ ಧೀಮಂತ ವಿಚಾರಗಳನ್ನು ಪ್ರೋತ್ಸಾಹಿಸಬೇಕು ..." ಎಂದು ನಿಶ್ಚೈಸಿಕೊಂಡು ದೃಢವಾದ ಹೆಜ್ಜೆಗಳನ್ನಿಟ್ಟು ಹಿಂಬಾಲಿಸಿದಳು ಆ ಕ್ರಾಂತಿಗಂಗೋತ್ರಿ.

"ಅಕ್ಕ .. ನಾನು ನಡೆಯಲು ಬಯಸಿರುವ ಹಾದಿ ಅತ್ಯಂತ ದುರ್ಗಮ. ನೀನೇಕೆ ಹಿಂಬಾಲಿಸುವೆ?"

"ಬಸವಣ್ಣಾ, ನೀನು ಸಾಮಾನ್ಯನಲ್ಲಪ್ಪ. ಬೇರಿತರ ಬಾಲಕರು ಆಟ-ಪಾಟ, ಗೊಂಬೆ, ತಿನಿಸುಗಳಲ್ಲಿ ಮಗ್ನರಾಗುವ ವಯಸ್ಸಿನಲ್ಲಿ ನೀನು ಧರ್ಮ-ಸಮಾಜಗಳ ಚಿಂತನೆ ಮಾಡುತ್ತಿರುವೆ. ನಿನ್ನ ಮಹಾನ್ ಉದ್ದೇಶ ಸಾಧನೆಯಲ್ಲಿ ನಾನೂ ನೆರವಾಗುವೆ ನಡೆ..."

ಅಕ್ಕ-ತಮ್ಮರು ಮುಂದೆ ಸಾಗಿದರು.

"ಬಸವೇಶಾ, ನಿನ್ನ ಉದ್ದೇಶ ಘನ. ಆದರೆ ಶತಶತಮಾನಗಳಿಂದ ಮಡುಗಟ್ಟಿ ಮಲೆತ, ಮಡ್ಡುಗಟ್ಟಿ ಕೊಳೆತ ನಮ್ಮ ಜನರ ತಲೆಯನ್ನು ಶುದ್ಧೀಕರಿಸುವ ಸಾಹಸ ತೀರಾ ದುಸ್ಸಾಹಸದ್ದು. ಅದನ್ನು ಹೇಗೆ ಸಾಧಿಸುವೆಯೋ ಏನೋ?

Digitalized by e-Sahithya Documentation Forum
Sponsored by Sarayu Foundation Trust

"ಅಕ್ಕ...ಅಡಿಗೆ ಒಂದು ಹೊರೆಯಾದುದು ಆನೆಗೆ ತೃಣ. ಮನುಷ್ಯ ದೃಷ್ಟಿಯಿಂದ ಅಸಾಧ್ಯವಾಗಬಹುದು, ದೇವನ ದೃಷ್ಟಿಯಿಂದ ಅಸಾಧ್ಯವೇನಲ್ಲ. ಅವನ ಶ್ರೀಹಸ್ತದಲ್ಲಿ ನನ್ನ ಬದುಕನ್ನು ಒಪ್ಪಿಸುವೆ.

ಎನ್ನ ವಾಮಕ್ಷೇಮ ನಿಮ್ಮದಯ್ಯ
ಎನ್ನ ಹಾನಿವೃದ್ಧಿ ನಿಮ್ಮದಯ್ಯ
ಎನ್ನ ಮಾನಾಪಮಾನ ನಿಮ್ಮದಯ್ಯ
ಬಳ್ಳಿಗೆ ಕಾಯಿ ದಿಮ್ಮಿತ್ತೇ ಕೂಡಲ ಸಂಗಮದೇವಾ."

"ಅದು ಸರಿ, ಈಗ ನಮ್ಮ ಪಯಣ ಮುಂದೆಲ್ಲಿಗೆ...."

"ನನ್ನ ಸ್ವತಂತ್ರ ವಿಚಾರಗಳಿಗೆ ಸೂಕ್ತ ಪರಿಸರ ಎಲ್ಲಿ ದೊರೆತೀತು....?"

"ಇಲ್ಲಿ ನೋಡು. ಕೂಡಲ ಸಂಗಮೇಶ್ವರ ನಮ್ಮ ಮನೆದೇವರು. ಅಲ್ಲಿ ಒಂದು ಗುರುಕುಲವಿದೆ. ಅದರ ಕುಲಪತಿಗಳು ಜಾತವೇದ ಮುನಿಗಳು. ಅದು ಪಾಶುಪತ ಶೈವರ ಕೇಂದ್ರ. ಅಲ್ಲಿ ಜಾತಿಭೇದವಿಲ್ಲ. ಎಲ್ಲರಿಗೂ ವಿದ್ಯಾರ್ಜನೆಗೆ ಸಮಾನಾವಕಾಶವಿದೆ. ಗುರುಗಳು ಪ್ರಗತಿಪರ ವಿಚಾರಿಗಳು. ಯಜ್ಞಯಾಗ ಮುಂತಾದ ವೈದಿಕಾಚರಣೆಗಳಿಗೆ ಅಲ್ಲಿ ಅವಕಾಶವಿಲ್ಲ. ಜ್ಞಾನಯೋಗವೇ ಪ್ರಧಾನವಾಗಿಹ ಕೇಂದ್ರ. ನಿನ್ನ ವಿಚಾರವನ್ನವರು ಖಂಡಿತಾ ಮೆಚ್ಚುವರು. ಮುಮುಕ್ಷುಗಳನ್ನು ಕಂಡರೆ ಅವರಿಗೆ ಅಚ್ಚುಮೆಚ್ಚು. ಮತ್ತು ನನ್ನನ್ನು ಮದುವೆ ಮಾಡಿಕೊಟ್ಟಿರುವ ಬ್ರಹ್ಮಪುರಿಯೂ ಸಂಗಮಕ್ಷೇತ್ರಕ್ಕೆ ಸನಿಹದಲ್ಲಿದೆ. ಆಗಾಗ ಬಂದು ಹೋಗಬಹುದು. ಅರಳುವ ತಾವರೆ ಮೊಗ್ಗನ್ನು ತಣ್ಣೀರಿನ ಕೊಳದಲ್ಲಿ ಹಾಕಿದಾಗ ಅದು ದಳ ಬಿಚ್ಚಿ ಅರಳುವಂತೆ ನಿನ್ನ ವ್ಯಕ್ತಿತ್ವ ವಿಕಾಸ ಹೊಂದುವುದಲ್ಲಿ ..."

"ಅಹುದಕ್ಕ. ನಿನ್ನ ಮಾತು ಸರಿ. ಕಳೆದ ಬಾರಿ ಅಪ್ಪನೊಡನೆ ಜಾತ್ರೆಗೆ ಹೋದಾಗ ಅಲ್ಲಿಯ ಪರಿಸರ, ಪ್ರಶಾಂತತೆ ತುಂಬಾ ಮನಸ್ಸಿಗೆ ಹಿಡಿಯಿತು. ಜಾತವೇದರ ವ್ಯಕ್ತಿತ್ವವೂ ಅಷ್ಟೇ ದಿವ್ಯಭವ್ಯ. ಕರ್ಮಕಾಂಡದ ಕೆಸರಿನಲ್ಲಿ ಮುಳುಗಿದವರಲ್ಲ. ಜ್ಞಾನ ನಂದನವನದೊಳು ವಿಹರಿಸುವ ಸಾತ್ವಿಕ ಯೋಗಿಗಳು. ನಡೆ, ಅಲ್ಲಿಗೇ ಹೋಗೋಣ...."

ಉಭಯತರ ಉತ್ಸಾಹ ಗರಿಬಿಚ್ಚಿ ಹಾರಿತು. ಕೃಷ್ಣಾನದಿಯನ್ನು ದೋಣಿಯಲ್ಲಿ ದಾಟುತ್ತಿದ್ದಂತೆಯೇ ಸಂಗಮೇಶ್ವರ ದೇವಾಲಯದ ಕಳಸ–ಗೋಪುರಗಳನ್ನು ಕಂಡು ಬಸವಣ್ಣ ಪುಳಕಿತನಾದ. ನದಿಯಲ್ಲಿ ಮಿಂದು ಒದ್ದೆ ವಸ್ತ್ರವನ್ನುಟ್ಟು ಮೆಟ್ಟಿಲೇರಿ ದೇವಾಲಯದೆಡೆಗೆ ಬಂದ. ಗರ್ಭಗುಡಿಯಲ್ಲಿ ಕಾಲಿಡುತ್ತಿದ್ದಂತೆಯೇ

ಆನಂದದ ಲಹರಿ ಉಕ್ಕಿ ಹರಿಯಿತು. ಕೇವಲ ಅಭಿಷೇಕ, ವಿಭೂತಿ, ಹೂವುಗಳಿಂದ ಅಲಂಕೃತವಾದ ಆ ಕಪ್ಪುವರ್ಣದ ಲಿಂಗ ಮನೋಹರವಾಗಿ ಶೋಭಿಸುತ್ತಿತ್ತು. ಆ ಕ್ಷೇತ್ರದ ಸುತ್ತಲಿನ ಶಾಂತಿಯುಕ್ತ ವಾತಾವರಣ, ಆಶ್ರಮದ ಪರಿಸರ, ದೇವಾಲಯದ ನೀರವ ಗಂಭೀರತೆ, ಜಗತ್ತನ್ನು ಸಾಕ್ಷಿಭೂತವಾಗಿ ನೋಡುವಂತೆ ನಿಂತ ಲಿಂಗ-ಈ ಎಲ್ಲವೂ ಅವನನ್ನು ಸಂಭ್ರಾಂತನನ್ನಾಗಿ ಮಾಡಿದವು. ಪೂರ್ವಸ್ಮರಣೆ ಕೈಗೂಡಿದಂತೆ ಆಗಿ, ಎಷ್ಟೋ ವರ್ಷಗಳವರೆಗೆ ತಾನು ತನ್ನ ನಿಜ ನೆಲೆಯಿಂದ ದೂರವಿದ್ದು ಈಗ ಅದನ್ನು ಸೇರಿದಂತಹ ಸಂತೋಷ. ಆಗ ಬಸವಣ್ಣ ಭಾವಪರವಶನಾಗಿ ಹಾಡುತ್ತಾನೆ.

"ದೇವದೇವಾ ಅನಾಥನಾಥ ಅನಿಮಿತ್ತ ಬಂಧುವೆ ತಾಯಿಯೇ ತಂದೆಯೇ ಬಂಧುವೇ ಬಳಗವೇ ಕುಲವೇ ಬಲವೇ ತವರೆ ಕಣ್ಗೆ ಗತಿಯೆ ಮತಿಯೆ ಪುಣ್ಯವೆ ಪ್ರಾಣವೆ ಕಾವುದು ಕಾವುದು ..."

ಹೆತ್ತ ತಾಯಿಯಿಂದ ದೂರವಾಗಿ, ಮಲತಾಯಿಯಿಂದ ಹಿಂಸಿಸಲ್ಪಟ್ಟು ಬಸವಳಿದ ಕಂದನಿಗೆ ನಿಜ ತಾಯಿಯ ತೊಡೆಯು ಸಿಕ್ಕಂತಾಗಿದೆ. ಉಸಿರು ಕಟ್ಟುವ ಸಾಂಪ್ರದಾಯಿಕ ಮೌಲ್ಯಗಳ ಬಂಧನದಿಂದ ಹೊರಬಂದು, ಹೊಸ ಗಾಳಿಯನ್ನು ಕುಡಿದಂತಾಗಿದೆ. ಶಬ್ದಗಳಿಗತೀತವಾದ ಆನಂದ ಕಣ್ಣೀರ ಮುಖಾಂತರ ಹರಿಯುತ್ತಿದೆ.

ಅಕಟಕಟಾ ಶಿವಾ ನಿನಗಿನಿತು ಕರುಣೆ ಇಲ್ಲವಯ್ಯ
ಅಕಟಕಟಾ ಶಿವಾ ನಿನಗಿನಿತು ಕೃಪೆಯು ಇಲ್ಲವಯ್ಯ
ಏಕೆ ಹುಟ್ಟಿಸಿದೆ ತಂದೆ
ಇಹಲೋಕ ದುಃಖಿಯ, ಪರಲೋಕ ದೂರನ
ಕೂಡಲ ಸಂಗಮದೇವಾ, ಎನಗಾಗಿ ಒಂದು ತರುಮರಾದಿಗಳಿದ್ದಿಲ್ಲವೇ?

ಭವರೋಗ ವೈದ್ಯನೆಂದು ನಾನಿಮ್ಮ ಮೊರೆಹೊಕ್ಕೆ
ಮುಕ್ತಿದಾಯಕ ನೀ ಕರುಣಿಸೋ ಲಿಂಗ ತಂದೆ.
ಹರಹರ ಶ್ರೀ ಮಹಾದೇವ, ಜಯಜಯ ಶ್ರೀ ಮಹಾದೇವ
ಹರಹರ ಶ್ರೀ ಮಹಾದೇವ ಎನ್ನುತಿದ್ದಿತೆನ್ನ ಮನವು,
ಕೂಡಲ ಸಂಗಮದೇವಂಗೆ ಶರಣೆನ್ನುತಿರ್ದಿತೆನ್ನ ಮನವು.

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದರಿಲ್ಲ ಕಂಡಯ್ಯ.

Digitalized by e-Sahithya Documentation Forum
Sponsored by Sarayu Foundation Trust

ತಾಳೆ ಮರಕ್ಕೆ ಕೈಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯ,
ಕೂಡಲ ಸಂಗಮದೇವ ಕೇಳಯ್ಯ
ನೀವೀವ ಕಾಲಕ್ಕಲ್ಲದಿಲ್ಲಯ್ಯ.

ಹೃದಯಾಂತರಾಳದ ಭಾವಗಂಗೆ ಶಬ್ದಗಳ ಮುಖಾಂತರ ನಿರರ್ಗಳವಾಗಿ ಹರಿಯುತ್ತಿದೆ.

ಇತ್ತ ಅಕ್ಕ ನಾಗಮ್ಮ ದೇವಾಲಯದ ಒಂದು ಕಂಭಕ್ಕೊರಗಿ ತಮ್ಮನು ಬಹಿರ್ಮುಖನಾಗುವುದನ್ನು ಕಾಯುತ್ತಲಿದ್ದಾಳೆ. ಎಚ್ಚರಗೊಳ್ಳುತ್ತಿದ್ದಂತೆಯೇ ಅವನನ್ನು ಕರೆದೊಯ್ದು, ಜಾತವೇದ ಮುನಿಗಳ ದರ್ಶನ ಮಾಡಿಸಿ ಅವರ ಪಾದಕ್ಕೆ ಒಪ್ಪಿಸುವ ಮನೀಷೆ ಆಕೆಯದು.

ಅನಿತರಲ್ಲಿ ಸುಪ್ರಭಾತದ ಪೂಜಾದಿಗಳನ್ನು ಪೂರೈಸಿದ ಸ್ಥಾನಪತಿ ಜಾತವೇದ ಮುನಿಗಳ ಹೃದಯದಲ್ಲಿ ಏನೋ ತುಡಿತ. ಶಿವಪ್ರೇರಣೆಯಿಂದೆಂಬಂತೆ ದೇವಾಲಯದ ಕಡೆಗೆ ಹೆಜ್ಜೆ ಹಾಕಿದರು. ದೇವಾಲಯದೊಳಗೆ ಬಂದು ನಿಂತರೆ, ಉರಿಯುವ ಸಾಲುದೀಪಗಳ ಬೆಳಕಿನಲ್ಲಿ ತೇಜಃಪುಂಜವಾಗಿ ಮಿನುಗುತ್ತಿರುವ ಬಾಲಕ. ಪದ್ಮಾಸನಾಂಕಿತನಾಗಿ ಕುಳಿತಿದ್ದಾನೆ. ಬಹಿರಂಗದ ಪ್ರಜ್ಞೆಯಿಲ್ಲ. ಪರಮಾತ್ಮನ ಅನುಗ್ರಹಕ್ಕಾಗಿ ಮೊರೆಯಿಡುತ್ತಿದ್ದಾನೆ. ಬಾಲಸೂರ್ಯನಂತೆ ಅಪೂರ್ವ ಕಾಂತಿಯಿಂದ ಶೋಭಿಸುತ್ತಿರುವ ಬಾಲಕನನ್ನು ಕಂಡು ಜಾತವೇದ ಮುನಿಗಳಿಗೆ ಅನರ್ಘ್ಯ ವಜ್ರವೊಂದನ್ನು ಪಡೆದುಕೊಂಡ ರತ್ನಪಡಿ ವ್ಯಾಪಾರಿಯ ಮನಸ್ಸಿಗಾಗುವ ಆನಂದ ಸಮನಿಸಿದೆ. ಮೌನವಾಗಿ ಬಾಲಕನನ್ನು ಕೆಲಕಾಲ ವೀಕ್ಷಿಸಿದ ಬಳಿಕ, ಮೆಲ್ಲನೆ ಹತ್ತಿರ ಬಂದು ವಾತ್ಸಲ್ಯಭರಿತವಾಗಿ ತಲೆ ನೇವರಿಸುತ್ತಾರೆ. "ಈತ ಸಾಮಾನ್ಯನಲ್ಲ, ಕಾರಣಿಕನಾಗಲೇಬೇಳ್ಕುಂ" ಎಂಬ ಅರಿವು ಅವರಲ್ಲಿ ಮೂಡಿದೆ. ಆಗ ಬಸವಣ್ಣನಿಗೆ ಹೇಳುತ್ತಾರೆ :

"ಎಲೆ ಭಕ್ತ ನೀನೆಲ್ಲಿಗಂ ಹೋಗಬೇಡ ; ಅವುದುಂ ಚಿಂತೆ ಬೇಡ, ಸಂಗಮೇಶ್ವರಂಗೆ ಹೊಸ ಪುಷ್ಪಮಂ ತಿಳಿಯುಗ್ಘವಣಿಯುಂ ತಂದು ಓಜೆಯಿಂ ಪೂಜೆಗೈದು, ಪ್ರಸಾದ ಸ್ವೀಕರಿಸಿ, ಸುಖಿಯಾಗಿರು."

ತನ್ನಂತರಂಗದ ಬಯಕೆ ಹಣ್ಣಾದಂತೆ ಗುರುಗಳು ಮಾತನಾಡಿದಾಗ ಬಸವಣ್ಣ ಸಂಭ್ರಾಂತನಾಗಿ ನಮಸ್ಕರಿಸಿದ. ಅಕ್ಕನಾಗಮ್ಮ ವಿಸ್ಮಿತಳಾಗಿದ್ದಳು. ತಾನು ಹೇಗೆ ತಮ್ಮನನ್ನು ಗುರುಗಳ ಬಳಿಗೆ ಕರೆದುಕೊಂಡು ಹೋಗಿ ಪರಿಚಯಿಸಿ, ವಿನಂತಿಸಿಕೊಂಡು ವಿದ್ಯಾರ್ಜನೆಗೆ ತೊಡಗಿಸಬೇಕು ಎಂದು ಚಿಂತಿಸುವಾಗಲೇ ಆ ಬಯಕೆ ಅತ್ಯಂತ ಸಹಜವಾಗಿ, ದೈವಸಂಕಲ್ಪವೆಂಬಂತೆ ನೆರವೇರಿದ್ದರಿಂದ ನಿಜಕ್ಕೂ ಅಚ್ಚರಿ

ಯಾಗಿತ್ತು. ಸಹೋದರ ಬಸವಣ್ಣನ ಜೀವನ ನೌಕೆಯನ್ನು ದೈವೀಶಕ್ತಿಯ ಅದೃಶ್ಯಹಸ್ತ ಮುನ್ನಡೆಸುತ್ತಿದೆ ಎಂಬ ಭರವಸೆ ಮೂಡಿತು

ಅರ್ಚನಾನಂದದಲ್ಲಿ ಬಸವಣ್ಣ

ತನ್ನ ನೆಚ್ಚಿನ ನೆಲೆ ಕೂಡಲಸಂಗಮದಲ್ಲಿ ನಿಷ್ಠೆ ತುಂಬಿದ ಹೃದಯದಿಂದ ಅರ್ಚಕನ ಕಾಯಕದಲ್ಲಿ ಮಗ್ನನಾದ ಬಸವಣ್ಣ. ಉಳಿದ ಅರ್ಚಕರಲ್ಲಿರುವಂತೆ ಆಲಸ್ಯ ಹರಟೆ ನಟನೆಗಳೊಂದೂ ಇಲ್ಲ. ಸುಪ್ರಭಾತದಲ್ಲಿ ಸೂರ್ಯೋದಯಕ್ಕೆ ಮುನ್ನವೇ ಎದ್ದು, ಪೂಜಾಪರಿಕರಗಳನ್ನು ಶ್ರದ್ಧಾ-ಭಕ್ತಿಗಳಿಂದ ಅಣಿ ಮಾಡುವನು. ಮೀಯುವಾಗ, ಉಡುವಾಗ, ಹೂ ಕೀಳುವಾಗ, ನೀರು ತುಂಬುವಾಗ ಸಂಗಮನ ಧ್ಯಾನವೇ ಹಾಸುಹೊಕ್ಕಾಗಿದೆ. ತಿಳಿನೀರನ್ನು, ಬಗೆಬಗೆಯ ಹೂವುಗಳನ್ನು, ಸಂಗ್ರಹಿಸಿ ಸಂಗಮೇಶ್ವರನನ್ನು ಅರ್ಚಿಸುವನು. ಸರಳವಾದರೂ ಸುಂದರ ಅಲಂಕಾರ ಮಾಡಿ ಕಣ್ತುಂಬ ನೋಡುವನು. ಆ ನಂತರ ಭಾವಪರವಶನಾಗಿ ಹಾಡುವನು.

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು
ಮಾಡಿದ ಪೂಜೆಯ ನೋಡುವುದಯ್ಯಾ.
ಶಿವತತ್ತ್ವ ಗೀತವ ಹಾಡುವುದು
ಶಿವನ ಮುಂದೆ ನಲಿದಾಡುವುದಯ್ಯಾ.
ಭಕ್ತಿ ಸಂಭಾಷಣೆಯ ಮಾಡುವುದು,
ನಮ್ಮ ಕೂಡಲ ಸಂಗನ ಕೂಡುವುದು.

ಗಂಟೆಗಟ್ಟಳೆ ಪರಿಕರಗಳನ್ನು ಅತ್ಯಂತ ಜಾಗರೂಕತೆಯಿಂದ ಹೊಂದಿಸಿ, ಅಷ್ಟೇ ನಿಷ್ಠೆಯಿಂದ ಪೂಜಿಸಿ, ಕಣ್ತುಂಬ ನೋಡಿ ನಲಿವ, ನಲಿಯುತ್ತ ಆನಂದ ಪರವಶನಾಗುವ ಬಸವಣ್ಣನನ್ನು ಕಂಡು ಹಿರಿಯ ಅರ್ಚಕರಿಗೆ ಬೇಗುದಿ. ಜೊತೆಗೇ ಅಪಹಾಸ್ಯ. ಯಾವ ಸೌಲಭ್ಯ ಸಿಗುವುದೆಂದು ಇಂಥಾ ಕಷ್ಟ ? ಎಂಬ ಬುದ್ಧಿವಾದ. ಆಗ ಬಸವಣ್ಣನ ಉತ್ತರ ಒಂದೇ :

ಒಲವಿಲ್ಲದ ಪೂಜೆ ಸ್ನೇಹವಿಲ್ಲದ ಮಾಟ
ಆ ಪೂಜೆಯು ಆ ಮಾಟವು
ಚಿತ್ರದ ರೂಪು ಕಾಣಿರಣ್ಣಾ.
ಚಿತ್ರದ ಕಬ್ಬು ಕಾಣಿರಣ್ಣಾ.
ಅಪ್ಪಿದಡೆ ಸುಖವಿಲ್ಲ ಮೆಲಿದಡೆ ರುಚಿಯಿಲ್ಲ
ಕೂಡಲ ಸಂಗಮದೇವಾ ನಿಜವಿಲ್ಲದವನ ಭಕ್ತಿ.

ಹೀಗೆ ಅರ್ಚಕ ವೃತ್ತಿ ಕೈಗೊಂಡೇ ವಿದ್ಯಾರ್ಜನೆ, ಯೋಗಾಭ್ಯಾಸಗಳಲ್ಲಿ ಬಸವಣ್ಣನವರು ತೊಡಗಿದರು. (ಸಶೇಷ)

Digitalized by e-Sahithya Documentation Forum
Sponsored by Sarayu Foundation Trust

ಡಾ॥ ಲಲಿತಾ ಗುರುಬಸವಯ್ಯ

ಶರಣೆ ಉಮಾದೇವಿ, ಎಂ.ಎ., ಎಂ.ಇಡಿ.
ವಿಶ್ವ ಕಲ್ಯಾಣ ಮಿಷನ್

"ವನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ, ಹೇ ದೇವ. ಜನಕೆ ಸಂತಸವೀವ ಘನನು ನಾನೆಂದೆಂಬ ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ಬಿಡದೆ."

ಇಂಥದೊಂದು ಆಶೀರ್ವಾದವನ್ನೇನಾದರೂ ಪರಮಾತ್ಮನು ಮಾಡಿದ್ದು, ಆ ಆಶೀರ್ವಾದ ಸಾಕಾರ ರೂಪ ತಾಳಿದ್ದರೆ ಅದು ಡಾ॥ ಲಲಿತಾ ಗುರುಬಸವಯ್ಯನವರ ಮೂಲಕ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ಅಷ್ಟು ನಿರಪೇಕ್ಷ ಮನೋಭಾವದ, ಸಾತ್ವಿಕ ಸೇವೆ ಅವರದು. ಸಾತ್ವಿಕತೆ, ಪ್ರಾಮಾಣಿಕತೆ, ತತ್ತ್ವ ನಿಷ್ಠೆ—ಈ ಮೂರೂ ಮುಪ್ಪುರಿಯಾಗಿ ಸಾವಯವಗೊಂಡ ಡಾ॥ ಲಲಿತಾ ಗುರುಬಸವಯ್ಯನವರದು ಆಡಂಬರ ರಹಿತ ಬದುಕು, ಸರಳತೆಯನ್ನು ಮೈತುಂಬಿಸಿಕೊಂಡಂತಹ ನಡೆ–ನುಡಿ. ಗಳಿಕೆ, ಉಳಿಕೆ, ಬಳಕೆಗಳೇ ಸರ್ವಸ್ವವೆಂದೂ, ಧನಾರ್ಜನೆ-ಐಹಿಕ ಸುಖಗಳೇ ಆತ್ಯಂತಿಕ ಸಿದ್ಧಿಗಳೆಂದು ಭಾವಿಸಿರುವ ಇಂದಿನ ಕಾಲದಲ್ಲಿ ಕಾಯಕವನ್ನು ಒಂದು ಯೋಗವನ್ನಾಗಿ, ಸೇವೆಯನ್ನು ಪೂಜೆ ಎಂಬುದಾಗಿ ಭಾವಿಸುವವರು ಅತಿ ದುರ್ಲಭ.

ಸಜ್ಜನರು, ದೇಶಾಭಿಮಾನಿಗಳು, ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರೂ ಆಗಿದ್ದ ಕೀರ್ತಿಶೇಷರಾದ ತುಮಕೂರಿನ ಶ್ರೀ ಜಿ. ಎಂ. ಗುರುಬಸವಯ್ಯನವರ ಪುತ್ರಿ ಡಾ॥ ಲಲಿತಮ್ಮನವರು. ಜನಿಸಿದ್ದು 1-6-1916ರಂದು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯಾತ್ಮಕ ಪಾತ್ರವನ್ನು ವಹಿಸಿದ ಪ್ರಗತಿಪರ ವಿಚಾರಿಗಳು, ಪರೋಪಕಾರಿಗಳೂ ಆದ ಗುರುಬಸವಯ್ಯನವರು ಮಗಳ ಬದುಕನ್ನು ಆದರ್ಶದ ಅಚ್ಚಿನಲ್ಲಿ ರೂಪುಗೊಳಿಸಿದರು. ಶರಣ ಗುರುಬಸವಯ್ಯನವರು ಬಸವ ಭಕ್ತರು, ಶುದ್ಧ ಗಾಂಧೀವಾದಿಗಳು. ಬಸವಣ್ಣನವರ ತತ್ತ್ವಗಳನ್ನು ಮತಿಯಲ್ಲಿ ಅರಗಿಸಿಕೊಂಡು ಬದುಕಿನಲ್ಲಿ ಅಳವಡಿಸಿಕೊಂಡ ಅವರಿಗೆ ಗಾಂಧೀವಾದ ಮನಸ್ಸಿಗೆ ಬಹು ಪ್ರಿಯವೆನಿಸಿತು. ಹರಿಜನ ಸುಧಾರಣೆ, ಸಹಭೋಜನ, ಅಂತರ್ಜಾತೀಯ ವಿವಾಹಗಳಿಗೆ ಪ್ರೋತ್ಸಾಹ ನೀಡಿದ ಗುರುಬಸವಯ್ಯನವರು ಮಡಿವಂತರಿಂದ ಟೀಕೆಗೂ

ಒಳಗಾಗಬೇಕಾಯಿತು. ಅಲುಗದ ಧೈರ್ಯದಿಂದ ಮುಂದೆ ನಡೆದರು. ಇವರ ಕುಟುಂಬ ಕನ್ನಡ ನಾಡಿಗೆ ಕಾಣಿಕೆಯಾಗಿತ್ತ ಇನ್ನೆರಡು ಚೇತನಗಳೆಂದರೆ ಶ್ರೀಮತಿ ರತ್ನಮ್ಮ ಮತ್ತು ಶ್ರೀಮತಿ ಜಿ. ಚೆನ್ನಮ್ಮ. ಸಂಗೀತ–ಕಲೆಗಳ ಶಿಕ್ಷಣ ನೀಡುವ ಶ್ರೀಮತಿ ರತ್ನಮ್ಮ ಮತ್ತು ತಮ್ಮ ಅಪೂರ್ವ ಕಲೆ, ಸೇವೆಗಾಗಿ ಮಾಸಿಕ ಗೌರವಧನ ಪಡೆಯುತ್ತಿರುವ ಗಾನಕೋಗಿಲೆ, ವೀಣಾಗಾನ ವಿದ್ಯಾವಾರಿಧಿ ಶ್ರೀಮತಿ ಚೆನ್ನಮ್ಮನವರನ್ನು ಸಹೋದರಿಯರನ್ನಾಗಿ ಪಡೆದ ಭಾಗ್ಯ ಡಾ॥ ಲಲಿತಮ್ಮನವರದು. ಇವರುಗಳ ತಾಯಿ ರಾಜಮ್ಮನವರು ಶರಣ ಸಂಸ್ಕೃತಿಯೇ ಜೀವ ತಳೆದ ಮೂರ್ತಿಯಾಗಿ, ಸದ್ಭಕ್ತಿ-ಔದಾರ್ಯಗಳ ಪ್ರತಿರೂಪವಾಗಿದ್ದರು. ಈ ಮಾತಾಪಿತೃಗಳು, ಹೆಣ್ಣುಮಕ್ಕಳು ವಿದ್ಯೆ ಕಲಿಯುವುದು ಅನವಶ್ಯಕ ಎಂಬ ಕಲ್ಪನೆ ಸಮಾಜದಲ್ಲಿ ರೂಢಿಗೊಂಡಿದ್ದಾಗ, ದಿಟ್ಟ ಹೆಜ್ಜೆಯಿರಿಸಿ ಮಕ್ಕಳ ಸುಪ್ತ ಪ್ರತಿಭೆ ಬೆಳೆಯಲು ಶಿಕ್ಷಣಕ್ಕೆ ಪ್ರೋತ್ಸಾಹಿಸಿದರು. ಪರಿಣಾಮವಾಗಿ ಲಲಿತಮ್ಮನವರು ಮೈಸೂರು ನಗರದಲ್ಲಿದ್ದು ಎಂ.ಬಿ.ಬಿ.ಎಸ್. ಪದವಿಗಾಗಿ ಅಭ್ಯಸಿಸಿ ಮಾರ್ಚಿ 1945ರಲ್ಲಿ ಪದವಿ ಪಡೆದರು. ವಿದ್ಯಾರ್ಥಿನಿಯ ಜೀವನ ದೆಸೆಯಲ್ಲಿಯೂ ಸಹ ಸರಳತೆ, ಏಕಾಗ್ರತೆ, ನಿಷ್ಕಾಮಪರ ಜೀವನ—ಇವುಗಳಿಗೆ ಹೆಸರಾದ ಇವರು ಇಂಥ ಆದರ್ಶ ರೀತಿನೀತಿಗಾಗಿ, ತಾವೇ ಬಹಳ ಸುಧಾರಿಸಿದವರು ಎಂದು ಭಾವಿಸಿಕೊಂಡ ಫ್ಯಾಷನ್ ಪುತ್ಥಳಿಗಳಿಂದ ಅಪಹಾಸ್ಯಕ್ಕೆ ಈಡಾಗಬೇಕಾಗುತ್ತಿತ್ತು ಎಷ್ಟೋ ಬಾರಿ. ಆದರೇನು—ತಮ್ಮ ಆದರ್ಶ ಮೌಲ್ಯಗಳಲ್ಲಿ ಅಪಾರ ನಂಬುಗೆ ಇದ್ದ ಅವರು ವಿಚಲಿತರಾಗದೆ ಮುಂದುವರಿದು, ತಮ್ಮ ಶಿಕ್ಷಣ ಪೂರ್ತಿಗೊಳಿಸಿದರು.

ಶಿಕ್ಷಣಾನಂತರ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಝನ್ ಆಸ್ಪತ್ರೆಯ ನಿಷ್ಣಾತ ಐರೋಪ್ಯ ವೈದ್ಯರಲ್ಲಿ ತರಬೇತಿ ಪಡೆದರು. ಗುಣಗ್ರಾಹಿಗಳಾದ ಆ ವೈದ್ಯ ವಿದ್ವಾಂಸರು ಡಾ॥ ಲಲಿತಮ್ಮನವರ ಶಸ್ತ್ರ ಚಿಕಿತ್ಸೆಯ ಕೈಚಳಕ, ಕಾಯಕ ನಿಷ್ಠೆ, ಪ್ರತಿಭೆಗಳನ್ನು ಮೆಚ್ಚಿ ಹೊಗಳುತ್ತಿದ್ದರೂ, ರೋಗಿಗಳನ್ನು ಅವರು ಕಾಣುವ ದೃಷ್ಟಿ, ಉಪಚರಿಸುವ ವಾತ್ಸಲ್ಯ ಅಸದೃಶ್ಯವಾಗಿದ್ದವೆಂಬುದನ್ನು ಇಂದಿಗೂ ಅನೇಕರು ಸ್ಮರಿಸಿಕೊಳ್ಳುತ್ತಾರೆ.

ವೈದ್ಯ ವೃತ್ತಿಯನ್ನು ಕೈಗೊಂಡು ಕೆಲವೇ ವರ್ಷಗಳಲ್ಲೇ ಶರಣ ಗುರುಬಸವಯ್ಯನವರು ಲಿಂಗೈಕ್ಯರಾದಾಗ ಮನೆಯ ಜವಾಬ್ದಾರಿ, ಮಗಳ ಹೆಗಲಿಗೆ ಹಸ್ತಾಂತರವಾಯಿತು. ಎದೆಗುಂದದೆ ದೇವರಲ್ಲಿ ವಿಶ್ವಾಸವಿರಿಸಿ ಮುಂದೆ ಸಾಗಿದರು. ತಮ್ಮ ಪ್ರತಿಭೆಯಿಂದಾಗಿ ವಿದೇಶದಲ್ಲಿ ಅಭ್ಯಾಸ ಮಾಡುವ ಸೌಲಭ್ಯ ಒದಗಿ ಬಂದರೂ ಗೃಹಕೃತ್ಯದ ನಿರ್ವಹಣೆಗಾಗಿ ಅದನ್ನು ತ್ಯಾಗ ಮಾಡಬೇಕಾಯಿತು. ದೈವೀ ಪರೀಕ್ಷೆಯೋ ಎಂಬಂತೆ ಸಹೋದರನೂ ಲಿಂಗೈಕ್ಯನಾದಾಗ ಅವರ

Digitalized by e-Sahithya Documentation Forum
Sponsored by Sarayu Foundation Trust

ಮಕ್ಕಳನ್ನು ಸಂರಕ್ಷಿಸುವ ಹೊಣೆಯನ್ನೂ ಇವರೇ ಹೊತ್ತರು. ಎಲ್ಲವನ್ನೂ ನಡೆಸುವವ ಪರಮಾತ್ಮ, ತಾವು ನಿಮಿತ್ತ ಮಾತ್ರರು ಎಂದು ಶರಣಾಗತವಾದಕ್ಕೆ ಶರಣಾಗಿ, ಅವಿವಾಹಿತರಾಗಿಯೇ ಉಳಿದು ಒಂದು ದೊಡ್ಡ ಮನೆತನದ ಉಳಿವಿಗೆ ದುಡಿದ ತ್ಯಾಗ ಅಪೂರ್ವ. ಬಿಸಿಲಿನಲ್ಲಿ ತಾನು ನಿಂತು, ಇತರರಿಗೆ ನೆರಳನ್ನು, ಫಲಗಳನ್ನು ಕೊಡುವ ವೃಕ್ಷದಂತೆ ಇವರ ಬಾಳು.

ಸರ್ಕಾರಿ ಸೇವೆಯಿಂದ ಮೂರು ವರ್ಷಗಳ ಕೆಳಗೆ ನಿವೃತ್ತರಾದ ಇವರು ಈಗ ಸ್ವತಂತ್ರರಾಗಿ, ವೈಯಕ್ತಿಕವಾಗಿ ತಮ್ಮ ವೃತ್ತಿಯನ್ನು ಮುಂದುವರಿಸುತ್ತಿದ್ದಾರೆ. ಇವರ ಕಾಯಕದಲ್ಲಿ ಬಲಭುಜವಾಗಿ ನಿಂತಿದ್ದಾರೆ ಅವರ ಅಕ್ಕನ ಮಗಳಾದ ಡಾ|| ಸುಶೀಲಮ್ಮ. ಮೃದುತ್ವ, ಭಕ್ತಿ, ಗುಣವಂತಿಕೆಗಳ ತ್ರಿವೇಣಿಯಾಗಿರುವ ಡಾ|| ಸುಶೀಲಮ್ಮ ಸಮಾಜ ಸೇವಾ ಕಾರ್ಯಗಳಲ್ಲಿ ತುಂಬಾ ಆಸಕ್ತರು.

ಡಾ|| ಲಲಿತಮ್ಮ ಆದರ್ಶಪೂರ್ಣ ವೈದ್ಯರು, ಸಹೃದಯ ಸಂಪನ್ನರು, ಬಡವರನ್ನು ಕಂಡಾಗ ಕರಗಿ ಉಪಚಾರ ಮಾಡುವರು. ಅತ್ಯಂತ ಆಕಸ್ಮಿಕವಾಗಿ, ಬಸವ ಸಂಕಲ್ಪಿತವೆಂಬಂತೆ ಅವರ ಪರಿಚಯ ನಮಗಾಯಿತು. ಪ್ರವಚನ ಕೇಳಿ ತಾವಾಗಿಯೇ ಮುಂದೆ ಬಂದು ಉದಾರ ಕಾಣಿಕೆಗಳನ್ನು ನಮ್ಮ ಸಂಸ್ಥೆಗೆ ಸಲ್ಲಿಸಿದ್ದಾರೆ. ಇಂದು ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯ ಬೆನ್ನೆಲುಬಾಗಿ, ಅವಿಭಾಜ್ಯ ಅಂಗವಾಗಿ ಇದ್ದಾರೆ. ತನು ಮನ ಧನಗಳಿಂದ ಸಹಾಯ ಸಲ್ಲಿಸಿರುವದೇ ಅಲ್ಲದೆ ಎಲ್ಲ ಕಾರ್ಯಗಳಲ್ಲೂ ಉತ್ಸುಕರಾಗಿ ಭಾಗವಹಿಸುತ್ತಾರೆ. "ಒಳ್ಳೆಯ ಕಾರ್ಯಕ್ಕೆ ಮನ್ನಣೆ ಕೊಡಬೇಕು" ಎಂಬ ಗುಣಗ್ರಾಹಕ ಮನೋಭಾವವುಳ್ಳ ಇವರು ನಮ್ಮ ಸಂಸ್ಥೆಗೆ ತಾಯಿಯೋಪಾದಿ ಇದ್ದಾರೆ ಎಂದರೆ ಉತ್ಪ್ರೇಕ್ಷೆಯಾಗದು. ಬಸವ ಮಂಟಪ ನಿರ್ಮಾಣವಾಗುವಾಗ ಅವರ ತಾಯಿಯ ಹೆಸರಿನಲ್ಲಿ ೫೦೦೧-೦೦ ರೂ.ಗಳನ್ನು ಕೊಟ್ಟರು ; ಕಲ್ಯಾಣ ಕ್ರಾಂತಿಯ ದ್ವಿತೀಯ ಆವೃತ್ತಿಯ ಮುದ್ರಣಕ್ಕೆ ೨೫೦೧-೦೦ ರೂ.ಗಳನ್ನು ಸಲ್ಲಿಸಿದರು. ತರಂಗಿಣಿ ಕಾದಂಬರಿಯ ಮೊದಲ ಆವೃತ್ತಿ ಆರ್ಥಿಕ ಅನಾನುಕೂಲತೆಯಿಂದ ಕುಂಟುತ್ತಿರುವಾಗ ೬೦೦೧-೦೦ ರೂ.ಗಳನ್ನಿತ್ತು ಅದರ ಪ್ರಕಟಣೆ ಸರಾಗಗೊಳಿಸಿದರು. ವಿದೇಶ ಪ್ರವಾಸ ಕೈಗೊಂಡಾಗ, ಬಸವ ಗಂಗೋತ್ರಿ ಜಾಗ ಖರೀದಿಯ ಸಮಯದಲ್ಲಿ—ಈ ಮುಂತಾಗಿ ಅನೇಕ ಪ್ರಸಂಗಗಳಲ್ಲಿ ಧನಸಹಾಯ ಗೈದಿದ್ದು, ಬಸವ ಗಂಗೋತ್ರಿ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಬಸವ ಭಾರತಿ ಶಾಲಾ ಕಟ್ಟಡಕ್ಕೆ ಒಂದು ತರಗತಿಯ ಕೊಠಡಿಗಾಗಿ ೧೦,೦೦೧-೦೦ ರೂ.ಗಳನ್ನು ಸಲ್ಲಿಸಿದ್ದಾರೆ. ಅಕ್ಷಯಪಾತ್ರೆಯಾಗಿ ಇರುವ ಇವರ ಪರುಷಹಸ್ತ ಗಳಿಸಿದುದು ಅತ್ಯಂತ ಪ್ರಾಮಾಣಿಕವಾಗಿ. "ಕಾಯಕದಿಂದಲ್ಲದೆ ಬಂದುದು ಪೊಲ್ಲ" ಎಂಬ ನಿಷ್ಠೆಯನ್ನು ಕಾಪಾಡಿಕೊಂಡು, ತಾವು ದುಡಿದುದನ್ನು

ತಮಗಾಗಿ ಇರಿಸಿಕೊಳ್ಳದೆ, ಇತರರಿಗೆ ಹಂಚಿರುವ ತ್ಯಾಗಿಗಳು. ಯಶಸ್ವಿ ಚಿಕಿತ್ಸೆ ನೀಡುವ ಹಸ್ತಗುಣಕ್ಕೆ ಪ್ರಸಿದ್ಧರಾಗಿ, ದೀನದಲಿತರಿಗೆ ಪ್ರೇಮವನ್ನು ನೀಡುವ ಮಾತೃಹೃದಯದಿಂದ ಶೋಭಿಸುತ್ತ, ಗುರುಲಿಂಗಜಂಗಮಸೇವೆ ಮಾಡುವ ದೈವೀ ಗುಣಕ್ಕೆ ಹೆಸರಾದ ಡಾ|| ಲಲಿತಾ ಗುರುಬಸವಯ್ಯನವರು ಇದೇ ಜೂನ್ ಒಂದನೆಯ ತಾರೀಖಿಗೆ ಅರವತ್ಮೂರು ವರ್ಷ ದಾಟಿ ಅರವತ್ನಾಲ್ಕಕ್ಕೆ ಪಾದಾರ್ಪಣ ಮಾಡುತ್ತಿದ್ದಾರೆ. ಇಂತಹ ಸಜ್ಜನ ಶರಣೆಗೆ ವಿಶ್ವಗುರು ಬಸವೇಶ್ವರರು ಆಯುರಾರೋಗ್ಯಭಾಗ್ಯವನ್ನು ದಯಪಾಲಿಸಲಿ, ಶತಾಯುಷಿಗಳಾಗಿ ನಮ್ಮೊಡನೆ ಇರುವಂತಾಗಲಿ ಎಂದು ಹೃದಯಪೂರ್ವಕವಾಗಿ ಹಾರೈಸುತ್ತೇವೆ.

ಮಲೆನಾಡ ಬನಸಿರಿ

ನಾ ಕಂಡೆ ಮಲೆನಾಡ ಸೆರಗ ಸರಿಸಿ :
ಇಬ್ಬನಿಯ ಮುಡಿದು ಚಂದನದ ತಂಪ ಬೆರಿಸಿ
ಇಲ್ಲಿ ಸುತ್ತಲೂ ಹಸಿರು ಕಸವಾಗಿದೆ,
ಸಹಸ್ರ ಸಂಖ್ಯೆಯಲಿ ಹೂ ಚೆಲ್ಲಿಹೋಗಿದೆ.

ಎಲ್ಲೆಲ್ಲೂ ದಟ್ಟಕಾಡಿನ ಗಿರಿಸಾಲು
ಅದರ ಮೇಲೆ ಮತ್ತೆ ಹೆಮ್ಮರಗಳು,
ಮನವು ಚಿಮ್ಮಿ ಗಿರಿಮರಗಳನೇರಿ
ಉಯ್ಯಾಲೆಯಾಡಿತ್ತು ಕೇಸರಿ ಸಿಹಿಬೇರ ಹೀರಿ.

"ಮಲೆನಾಡ ಬನಸಿರಿ"ಯು ನಲಿದು
ಅಡಿಯಲಿ ಕೊಳವಿಳಿದು ಕಾಲ್ತೊಳೆದು
ಶಿಖರಕೇರುವಳು ಸರಸವಾಡುತ
ಸಡಗರದಿ ಹಸಿರುಡಿಗೆ ಸರಿಪಡಿಸುತ.

ಕಂಡು ಭಕ್ತಿಯಲಿ ತಲೆಬಾಗಿದೆ
ನಾ ಭಕ್ತಿಯಲಿ ಕೈಮುಗಿದೆ,
ನಿನ್ನ ಹಸಿರಲ್ಲೇ ನಾನು ಮುಳುಗಿರುವೆ
ಮುಳುಗಿ ನನ್ನ ನಾನೇ ಮರೆತಿರುವೆ.

—ಎ. ವೇದವ್ಯಾಸ, ಸಂರಪುರ

Digitalized by e-Sahithya Documentation Forum
Sponsored by Sarayu Foundation Trust

ತಂಗುಳನ್ನ

ಸಂ: **ಸ್ವಾಮಿ ಶಾಂತಾನಂದರು, ಎಂ. ಎ.**
ಜ್ಞಾನಯೋಗಾಶ್ರಮ, ವಿಜಾಪುರ

ಓರ್ವ ಹೆಣ್ಣುಮಗಳು ಊಟವಾದ ನಂತರ ಕೇಳಿದವರಿಗೆಲ್ಲ ತಂಗಳೂಟ ಮಾಡಿದೆನೆಂದು ಹೇಳುತ್ತಿದ್ದಳು. ಒ:ದು ದಿನ ಎಡೆಯೊಂದಿಗೆ ಗುಡಿಗೆ ಹೋದಳು. ಪೂಜಾರಿಯು ಗುಡಿಯ ಬಾಗಿಲನ್ನು ಹಾಕಿ ಎಲ್ಲಿಗೋ ಹೋಗಿದ್ದನು. ಅದೇ ಗುಡಿಯಲ್ಲಿ ಹಸಿದ ಓರ್ವ ಸನ್ಯಾಸಿ ಕುಳಿತಿದ್ದನು. ಬಾಗಿಲು ಮುಚ್ಚಿದ ಹಾಗೂ ಪೂಜಾರಿಯಿಲ್ಲದ ಗುಡಿಯನ್ನು ಕಂಡು ಅವಳು ಮರಳುತ್ತಿರುವಾಗ ಆ ಸನ್ಯಾಸಿ ನುಡಿದ: ಅಮ್ಮಾ, ನನಗೆ ಹಸಿವೆಯಾಗಿದೆ. ಆ ಎಡೆಯನ್ನು ನೀಡಮ್ಮಾ.

ಅವಳು—ಇದು ತಂಗುಳನ್ನವಪ್ಪಾ. ನಿನಗೆ ನೀಡಲು ಮನಸ್ಸಿಲ್ಲ.

ಸನ್ಯಾಸಿ—ದೇವರಿಗೆ ಎಂದಾದರೂ ತಂಗುಳನ್ನ ತರುವರೇ? ನೋಡಲು ಹಿರಿಯುವಳಂತೆ ಕಾಣುತ್ತಿ. ಹುಡುಗರಂತೆ ಮಾತಾಡುವಿಯಲ್ಲಮ್ಮ.

ಅವಳು—ನಾನು ಹಿರಿಯಳಲ್ಲ. ಎಂಟು ವರ್ಷದ ಬಾಲಕಿ.

ಸನ್ಯಾಸಿ—ಹಾಗಾದರೆ ನಿನಗೆ ಮಕ್ಕಳೆಷ್ಟು?

ಅವಳು—ನನಗೆ ಹನ್ನೆರಡು ಮಕ್ಕಳು.

ಸನ್ಯಾಸಿ—ನಿನ್ನ ಗಂಡನ ಹಾಗೂ ಅತ್ತೆಯ ವಯಸ್ಸೆಷ್ಟು?

ಅವಳು—ನನ್ನ ಗಂಡನಿಗೆ ನಾಲ್ಕು ವರ್ಷ. ಅತ್ತೆಗೆ ಎರಡು ವರ್ಷ.

ಸನ್ಯಾಸಿ—ಹಾಗಾದರೆ ನಿನ್ನ ಮಾವನು ಎಷ್ಟು ವರ್ಷದವ?

ಅವಳು—ನನ್ನ ಮಾವ ಇನ್ನೂ ಹೊಟ್ಟೆಯಲ್ಲಿದ್ದಾನೆ.

ಈ ವಗಟಿನ ಮಾತುಗಳನ್ನು ಕೇಳಿ ಸನ್ಯಾಸಿಯು ದಿಗ್ಭ್ರಾಂತನಾಗಿ ಅರ್ಥವನ್ನು ಕೇಳಿದ. ಆಗ ಆ ಗೃಹಿಣಿ ಹೇಳಿದಳು:

“ನಾನು ಶಾರೀರಿಕವಾಗಿ ಹುಟ್ಟಿ ನಲವತ್ತು ವರ್ಷಗಳಾದವು. ಆದರೆ ಪ್ರವಚನ ಕೇಳಿ ದೀಕ್ಷೆ ಪಡೆದು ಪೂಜೆ ಮಾಡಲು ತೊಡಗಿ ಕೇವಲ ಎಂಟು ವರ್ಷಗಳಾದವು. ಮೊದಲಿನ ಮೂವತ್ತೆರಡು ವರ್ಷಗಳು ನಿರರ್ಥಕವಾಗಿ ಕಳೆದು ಹೋದವು. ನಿಜವಾದ ಸಾರ್ಥಕ ಆಯುಷ್ಯವೆಂದರೆ ಈ ಎಂಟು ವರ್ಷಗಳೇ.

(೬೨ನೇ ಪುಟ ನೋಡಿ)

ಆತ್ಮ ಚಿಂತನಾ

ಬಸವರಾಜ್ ಮಠಪತಿ, ನಿರ್ನಾ

ನಾನು ಯಾರು....? ಇಲ್ಲಿಗೇಕೆ ಬಂದೆ....? ಹುಟ್ಟಿದ ಉದ್ದೇಶವೇನು..? ನಾನೇನು ಮಾಡಬೇಕು....? – ಈ ಪ್ರಶ್ನೆಗಳ ಜಾಳಿಗೆ ಬಿಡಿಸಿ ಉತ್ತರಿಸಿದಂತೆ ನಡೆಯುವವರು ತೀರಾ ಅಪರೂಪ. ದೇವರು ಎಂಬ ವಿಷಯವನ್ನೇ ಅರಿಯದವರು, ನಂಬದವರೂ ಕಾಣಸಿಗುತ್ತಾರೆ.

ದೇವರು ಎನ್ನುವ ವಸ್ತು ನಿರಾಕಾರ, ಒಂದು ಮಹಾ ಶಕ್ತಿ. ಇಡೀ ವಿಶ್ವ ಆ ಒಂದು ಶಕ್ತಿಗೆ ಒಳಪಟ್ಟಿದೆ ಎಂಬುದು ಅನುಭವಕ್ಕೆ ಬಂದರೂ ‘ದೇವರೇ ಇಲ್ಲ’ ಎಂದು ವಾದಿಸಿ ಆತ್ಮವಂಚನೆ ಮಾಡಿಕೊಳ್ಳುವವರಿದ್ದಾರೆ.

ಶಕ್ತಿಯ ಒಂದು ಅಣು ಅಥವಾ ಘಟಕ ಎಂದರೆ ಜೀವಿ.... ಪ್ರತಿ ಮಾನವ ಪರಮಾತ್ಮನ ಅಂಶ.... ನಾನು ಯಾರು? ಅಂದರೆ ನಾನು ಆತ್ಮ.... ದೇಹದಿಂದ ಭಿನ್ನವಾಗಿದ್ದು ಪ್ರತಿ ಕಾರ್ಯದ ಸಾಕ್ಷಿದಾರನಾಗಿ ಆನಂದ–ಅರಿವುಗಳ ತವರಾದ ನಿರಾಕಾರ ಶಕ್ತಿಯೇ ಆತ್ಮ. ಸಾವಿರಾರು ಆತ್ಮಗಳು ಭೂಮಂಡಲದ ಮೇಲೆ ತಮ್ಮ ಮುಕ್ತಿಗಾಗಿ ಚಲಿಸುತ್ತಿರುತ್ತವೆ. ಅವುಗಳು ಸಂಸ್ಕಾರ, ಕರ್ಮಕ್ಕನುಸಾರವಾಗಿ ಮತ್ತೆ ಮತ್ತೆ ಗರ್ಭದಲ್ಲಿ ಹುಟ್ಟಿ ಬರುತ್ತವೆ. ಹುಟ್ಟುವುದು ಬೆಳವಣಿಗೆಯ ಲಕ್ಷಣ. ಹುಟ್ಟಿ, ಬೆಳೆದು ಮನುಷ್ಯ ಮಾಡಬೇಕಾದ್ದು ಏನು....? ಇದು ಮುಖ್ಯ ಪ್ರಶ್ನೆ. ಸ್ವಾರ್ಥ, ಕಪಟ, ಅನ್ಯಾಯದಿಂದ ಬದುಕುತ್ತಾ ಜೀವನ ಸಾಗಿಸುವುದೇ...?

ಮುಖ್ಯವಾಗಿ ಮನುಷ್ಯನಲ್ಲಿ ಪ್ರೇಮ ಬೇಕು. ಪ್ರೇಮದಲ್ಲಿ ತ್ಯಾಗ ಬೇಕು, ನಿಸ್ವಾರ್ಥ ಪ್ರೇಮವಾಗಿರಬೇಕು. ತನ್ನವರನ್ನು, ಇತರರನ್ನು ಪ್ರೀತಿಸುವುದೇ ಜೀವನದ ಉದ್ದೇಶ. ಪ್ರೇಮವೇ ದೇವರು ಎಂದು ಹೇಳುವುದುಂಟು. ತನ್ನಿಂದ ಸಾಧ್ಯವಾದ ನಿಸ್ವಾರ್ಥ ಪ್ರೇಮದ ಮಾರ್ಗದಿಂದ ಸೇವೆ ಸಲ್ಲಿಸುವುದು, ದುಡಿಯುವುದು (ಅವನ) ಕರ್ತವ್ಯವಾದಾಗ ಕರ್ತವ್ಯವೇ ದೈವಸಾಕ್ಷಾತ್ಕಾರ ಎನಿಸಬಹುದು. ಕರ್ತವ್ಯ ಬಿಟ್ಟು ದೇವರನ್ನು ಹುಡುಕಬೇಕಾಗಿಲ್ಲ. ಲೋಕವನ್ನು ತೊರೆದು ಗುಡ್ಡ ಸೇರಬೇಕಾದ್ದಿಲ್ಲ. ಜನರ ಮಧ್ಯವೇ ಇದ್ದು ಜನರ ಬಗ್ಗೆ ದಯೆ, ಸಹಾನುಭೂತಿ, ಪ್ರೀತಿ, ಸಹಾಯ ಸಲ್ಲಿಸಿದಾಗ ಅವನ ಸ್ಥಾನ ಮಿಗಿಲಾಗಿರುತ್ತದೆ. ಅದೇ ಜೀವನದ ಉದ್ದೇಶ....ಗುರಿ. ಅಂತಹ ಜೀವಿಯ (ಆತ್ಮದ) ಸಂಸ್ಕಾರ, ಕರ್ಮ ಚೆನ್ನಾಗಿ

Digitalized by e-Sahithya Documentation Forum
Sponsored by Sarayu Foundation Trust

ರೂಪುಗೊಳ್ಳುತ್ತದೆ, ಶ್ರೇಷ್ಠ ಸಂಸ್ಕಾರದ ಗರ್ಭ ಸೇರಿ ತನ್ನ ಮೋಕ್ಷ ಸಾಧನೆಗೆ ದಾರಿ ಮಾಡಿಕೊಳ್ಳುತ್ತದೆ. ಹುಟ್ಟು-ಸಾವುಗಳಿಂದ ಬಿಡುಗಡೆಯಾದ ಆತ್ಮ ಶೂನ್ಯದಲ್ಲಿ ಲೀನವಾಗುತ್ತದೆ. ದೇವರು ಎಂದು ಹೇಳುವ ಮಹಾಶಕ್ತಿಯಲ್ಲಿ ಈ ಒಂದು ಅಣು(ಆತ್ಮ)ವಾಗಿಹ ಜೀವಾತ್ಮ ಸೇರಿಕೊಳ್ಳುತ್ತದೆ.

ಸ್ವರ್ಗ-ನರಕಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿ ಸಲ್ಲರಯ್ಯಾ [ಕೂಡಲ ಸಂಗಮದೇವ ಎಂಬ ಬಸವ ವಾಣಿಯ ಪ್ರಕಾರ ಸ್ವರ್ಗ-ನರಕಗಳೆಂಬ ಬೇರೆ ಲೋಕಗಳಿಲ್ಲ. ನಾವಿರುವ ತಾಣವೇ ಸ್ವರ್ಗ-ನರಕ. ನಮ್ಮ ಪರೀಕ್ಷೆ, ವಿಮರ್ಶೆ ಎಲ್ಲವೂ ಇಲ್ಲಿಯೇ ನಡೆಯುವುದು. ನಮ್ಮ ಕರ್ತವ್ಯದಲ್ಲಿ ಅಪಜಯ ಹೊಂದಿ, ಕೆಟ್ಟ ಕರ್ಮಗಳನ್ನು ಆರಿಸಿಕೊಂಡ ಆತ್ಮ ಹೀನ ಉದರವನ್ನೇ ಪಡೆಯಬೇಕಾಗಿ ಬರುತ್ತದೆ. ಅಂಥವನಿಗೆ ಸಿಗುವ ಕಷ್ಟ, ತೊಂದರೆ ಎಲ್ಲರೂ ಬಲ್ಲವರಾಗಿದ್ದೇವೆ. ನಮ್ಮ ಭವಿಷ್ಯದ ನಿರ್ಮಾಪಕರು ನಾವೇ ಆಗಿರುತ್ತೇವೆ. Man is the architect of his own future ಎಂಬ ಆಂಗ್ಲ ನುಡಿಯ ಸಾರ ಈ ದಿಸೆಯಲ್ಲಿ ಸತ್ಯವೆನಿಸುತ್ತದೆಯಲ್ಲವೆ... ?

ತಂಗುಳನ್ನ

(೬೦ನೇ ಪುಟದಿಂದ)

ಆದ್ದರಿಂದಲೇ ನನಗೆ ಎಂಟು ವರ್ಷಗಳಾದಂತಾಯಿತು. ನಾಲ್ಕು ವರ್ಷಗಳಿಂದೀಚೆಗೆ ನನ್ನ ಸ್ವಪ್ರಯತ್ನದಿಂದಲೇ ಪತಿಯನ್ನು ಆಧ್ಯಾತ್ಮ ಪಥದಲ್ಲಿ ಕರೆದುಕೊಂಡು ಹೋಗುತ್ತಲಿದ್ದೇನೆ. ಆದ್ದರಿಂದಲೇ ಅವರಿಗೆ ನಾಲ್ಕು ವರ್ಷವಾದಂತೆ. ಅದರಂತೆ ನಮ್ಮ ಅತ್ತೆಯವರನ್ನು ಎರಡು ವರ್ಷಗಳಿಂದ ಅಧ್ಯಾತ್ಮ ಪಥದಲ್ಲಿ ಕರೆದುಕೊಂಡು ಹೋಗುತ್ತಲಿದ್ದೇನೆ. ಅದಕ್ಕಾಗಿ ಅವರಿಗೆ ಎರಡು ವರ್ಷ ಆಯುಷ್ಯವಾದಂತೆ. ನಮ್ಮ ಮಾವನವರನ್ನು ಪ್ರವಚನಕ್ಕೆ ಕರೆತರಲು ಎಷ್ಟು ಪ್ರಯತ್ನಿಸಿದರೂ ಅವರು ಮನೆ ಬಿಟ್ಟು, ವ್ಯಾಪಾರ ವ್ಯವಹಾರ ಬಿಟ್ಟು ಹೊರಗೆ ಬಂದಿಲ್ಲ. ಆದ್ದರಿಂದ ಅವರು ಇನ್ನೂ ಹುಟ್ಟಿಲ್ಲವೆಂದರ್ಥ.

ಸನ್ಯಾಸಿ—ನೀನು ಮೊದಲು ಹೇಳಿದ ತಂಗುಳನ್ನವೆಂದರೇನಮ್ಮ ?

ಅವಳು—ದುಡಿಯದೆ ಹಿರಿಯರ ಆಸ್ತಿಯನ್ನೂ, ಸಂಪತ್ತನ್ನೂ ತಿನ್ನುವುದು ತಂಗುಳನ್ನ. ಇಂತಹ ತಂಗುಳನ್ನವನ್ನು ನಿಮ್ಮಂತಹ ಮಹಾತ್ಮರಿಗೆ ನೀಡಲು ನನಗೆ ಯೋಗ್ಯತೆಯಿಲ್ಲ.

Digitalized by e-Sahithya Documentation Forum
Sponsored by Sarayu Foundation Trust

ವಿಶ್ವಕಲ್ಯಾಣ ಮಿಷನ್‌ನ
(ರಿಜಿಸ್ಟರ್ಡ್ ಟ್ರಸ್ಟ್)

ಶ್ರೀ ಬಸವ ಭಾರತಿ ವಿದ್ಯಾಲಯ

(ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ)

ಬಾಲಕರ ರೆಸಿಡೆನ್ಷಿಯಲ್ ಶಾಲೆ

ಸಹೃದಯರಾದ ಪಾಲಕರೇ,

ಪರಮಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಸಂಸ್ಥಾಪಿಸಿರುವ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಆದರ್ಶ ಶಿಕ್ಷಣ ನೀಡುವ ಸದುದ್ದೇಶದಿಂದ ಉನ್ನತ ಪ್ರೈಮರಿ ರೆಸಿಡೆನ್ಷಿಯಲ್ ಶಾಲೆಯನ್ನು ತೆರೆದು 1979ನೇ ಸಾಲಿನಲ್ಲಿ 5ನೇ ತರಗತಿಯನ್ನು ಆರಂಭಿಸಿದೆ. ಇದರಲ್ಲಿ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮಗಳು ಎರಡೂ ಲಭ್ಯವಿವೆ. ಜೊತೆಗೆ ವಿದ್ಯಾರ್ಥಿಗಳಿಗೆ ಶಾಲೆಯ ಆವರಣದಲ್ಲಿಯೇ ಊಟ ವಸತಿ ಸೌಕರ್ಯವಿದೆ. ತಮ್ಮ ಮಕ್ಕಳಿಗೆ ಆದರ್ಶ ಶಿಕ್ಷಣವನ್ನು ಕೊಡಿಸ ಬಯಸುವ ತಂದೆ ತಾಯಿಗಳ ಆಕಾಂಕ್ಷೆಗಳನ್ನು ಶ್ರೀ ಬಸವ ಭಾರತಿ ವಿದ್ಯಾಲಯವು ಪೂರೈಸಲು ಇಚ್ಛಿಸುತ್ತದೆ. ಇದು ಬೆಂಗಳೂರಿನಿಂದ 21 ಕಿ. ಮಿ. ದೂರದಲ್ಲಿ ಕುಂಬಳಗೋಡಿನ ಬಳಿ, ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ 33 ಎಕರೆ ವಿಸ್ತೀರ್ಣವುಳ್ಳ ಸುಂದರವಾದ ಆವರಣದಲ್ಲಿದೆ.

ಸಮರ್ಥರಾದ, ಮಕ್ಕಳನ್ನು ಸರಿಯಾದ ರೀತಿಯಲ್ಲಿ ಪೋಷಿಸುವ, ಅನುಭವಿಗಳಾದ, ತರಬೇತಿ ಪಡೆದ ಮತ್ತು ಶಿಕ್ಷಣ ಕ್ಷೇತ್ರಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟ ಆದರ್ಶ ಶಿಕ್ಷಕರಿಂದ ಮಕ್ಕಳಿಗೆ ಶಿಕ್ಷಣ ಕೊಡಲಾಗುವುದು.

ಪ್ರವೇಶ ಪತ್ರ, ಫೀಸು, ನಿಯಮಾವಳಿ, ಊಟ-ವಸತಿ ಸೌಕರ್ಯ ಇತ್ಯಾದಿ ವಿವರಗಳಿಗೆ ಬೆಳಗಿನ 9 ರಿಂದ 1-30ರ ವರೆಗೆ ಮತ್ತು ಮಧ್ಯಾಹ್ನ 2-30 ರಿಂದ 5-00ರ ವರೆಗೆ ಆಫೀಸಿನಲ್ಲಿ ಸಂದರ್ಶಿಸಿರಿ. ಅಥವಾ ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರವನ್ನು ತರಿಸಿಕೊಳ್ಳುವವರು 5 ರೂ.ಗಳನ್ನು ಈ ಕೆಳಕಂಡ ವಿಳಾಸಕ್ಕೆ ಎಂ. ಓ. ಮಾಡಿರಿ. ಪ್ರವೇಶಪತ್ರ ಕಳಿಸಲು ದಿನಾಂಕವನ್ನು ವಿಸ್ತರಿಸಲಾಗಿದೆ. ಜೂನ್ ಕೊನೆಯವರೆಗೂ ಅರ್ಜಿ ಸಲ್ಲಿಸಬಹುದು. ಆದಷ್ಟು ಬೇಗನೆ ಬಸವ ಭಾರತಿ ರೆಸಿಡೆನ್ಷಿಯಲ್ ಶಾಲೆಗೆ ನಿಮ್ಮ ಮಕ್ಕಳನ್ನು ಕಳುಹಿಸಿ ಅವರ ಸರ್ವಾಂಗೀಣ ವ್ಯಕ್ತಿತ್ವದ ಬೆಳವಣಿಗೆಗೆ ಸದವಕಾಶವನ್ನೀಯಿರೆಂದು ಈ ಮೂಲಕ ಕೋರುತ್ತೇವೆ.

ಕರೆಸ್ಪಾಂಡೆಂಟ್

ಶಾಲೆಯ ಆವರಣ :
ಶ್ರೀ ಬಸವ ಭಾರತಿ ವಿದ್ಯಾಲಯ
ಬಸವ ಗಂಗೋತ್ರಿ ಆವರಣ
ಬೆಂಗಳೂರು-ಮೈಸೂರು ಹೆದ್ದಾರಿ
ಕುಂಬಳಗೋಡು
ಹೋ-ಕೆಂಗೇರಿ, ಜಿ-ಬೆಂಗಳೂರು

ದೂರವಾಣಿ : 82335
ಶ್ರೀ ಬಸವ ಭಾರತಿ ವಿದ್ಯಾಲಯ
ಬಸವ ಮಂಟಪ, 24, 2ನೇ ಬ್ಲಾಕ್
ಕಾರ್ಡ್ ರೋಡ್, ರಾಜಾಜಿನಗರ
ಬೆಂಗಳೂರು-560 010

ಮಹಾಮಾತೆ

ಹೆಚ್. ಕೆ. ರಮಾನಂದ ಶರ್ಮ
ಕರ್ನಾಟಕ ಮೀಸಲು ಪೋಲೀಸು
ಕದ್ರಿ, ಮಂಗಳೂರು

ಜ್ಞಾನವೇ ಮೂರ್ತಿವೆತ್ತಂಥ ಮಹಾಮಾತೆ
ನಿಮ್ಮಯ ಪ್ರವಚನದ ಮೋಡಿಗೆ ನಾ ಸೋತೆ
ನಮಿಸುವೆ ಶಿರಬಾಗಿ ಓ ಜಗಜ್ಜನಿತೆ
ಕನ್ನಡದ ವಾಗ್ದೇವಿ ಶ್ರೀ ಬಸವಸುತೆ.

ಎನ್ನಕ್ಕ ಚನ್ನಕ್ಕ ಮಹಾದೇವಿಯಕ್ಕ
ಮಾತೆಯ ರೂಪಿನಲ್ಲಿ ಆವಿರ್ಭವಿಸಿಹಳು ಚೊಕ್ಕ
ನುಡಿ ಮುತ್ತು ನಡೆ ನೇರ ಬಲು ಧೀರ ನಿಲುವು
ಅಪರಿಮಿತ ದೈವೀಚೇತನ ನುಳಿದಂಥ ಬಲವು.

ಆಸ್ತಿಕ-ನಾಸ್ತಿಕರ ಕಲ್ಪವೃಕ್ಷ ಮಾತೆ
ಜೀವಾತ್ಮರಿಗರಿವು ಮೂಡಿಸುತಿಹ ಪುನೀತೆ.
ಎಳನೀರ ಸವಿ ಆ ಪ್ರವಚನದ ಧಾರೆ
ಧರ್ಮದಾಗಸದಲ್ಲಿ ಮಿನುಗುತಿಹ ತಾರೆ.

ಎಲೆ ತಾಯಿ ಮಹಾಮಾತೆ ನವಬಾಳದಾತೆ
ಪಾವನನಾಗಿಹೆನಾ ಸವಿದು ತವ ಜ್ಞಾನ.
ತುಂಗೆಯ ವಾಹಿನಿಯಂಥ ನಿರರ್ಗಳ ವಾಣಿ
ಚಿರಾಯುವಾಗಲಿ ವಿಶ್ವಧರ್ಮ ಸಿರಿಗನ್ನಡಂ ಗೆಲ್ಗೆ.

ಒಂದು ಸಮಾಜ ಅಥವಾ ರಾಷ್ಟ್ರ - ಸಮೃದ್ಧ, ಸುಸಂಸ್ಕೃತ ಮತ್ತು ಸಂತೃಪ್ತ ಪ್ರಜೆಗಳನ್ನು ನಿರ್ಮಿಸಬೇಕಾದರೆ - ಕೇವಲ ಭೌತಿಕ ಪ್ರಗತಿಯ ತಳಹದಿಯ ಮೇಲೆ ನಿರ್ಮಾಣವಾದರೆ ಸಾಲದು, ನೈತಿಕ, ಧಾರ್ಮಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳೂ ಅತ್ಯಾವಶ್ಯಕ.

—ಮಾತಾಜಿ

ಕಲ್ಯಾಣ ಕಿರಣ
ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ
ಮುದ್ರಣ : ಸೂಪರ್ ಪ್ರಿಂಟರ್ಸ್
ಬೆಂಗಳೂರು-೫೬೦೦೫೩

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧.೦೦
ವಾರ್ಷಿಕ :	ರೂ.	೧೨.೦೦
ದ್ವೈವಾರ್ಷಿಕ :	ರೂ.	೨೩.೦೦
ಆಜೀವ ಸದಸ್ಯತ್ವ :	ರೂ.	೧೫೧.೦೦
ಪೋಷಕರು :	ರೂ.	೫೦೧.೦೦
ಮಹಾಪೋಷಕರು :	ರೂ.	೧೦೦೧.೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ, ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೨.೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.


* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

Digitalized by e-Sahithya Documentation Forum
Sponsored by Sarayu Foundation Trust

ಜೂನ್ : ೧೯೭೯
ಬಸವ ಶಕೆ : ೮೭೩

ಸಂಪುಟ : ೫
ಸಂಚಿಕೆ : ೨

Licence to post without pre-payment No. WPP-25



Correspond to :

Phone : Basava Mantap : 82335   Phone : Basava Gangotri : 34

Basava Mantapa

No. 24, Chord Road, 2nd Block

Digitalized by e-Sahithya Documentation Forum
Sponsored by Sarayu Foundation Trust